ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 21 ಮಂಗಳವಾರ 2022

ಸಂಪುಟ: 43 | ಸಂಚಿಕೆ: 66 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರು ಯೋಗ ವೈವಿಧ್ಯತೆಯ ತವರೂರು
ಪುಟ–4

ಮೈಸೂರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಪ್ರಧಾನಿ ಮೋದಿ ಚಾಲನೆ; ಬೃಹತ್ ಸಮಾವೇಶದಲ್ಲಿ ಭಾಗಿ

ಡಬಲ್ ಎಂಜಿನ್ ಸರ್ಕಾರದಿಂದ ದಾಖಲೆ ಅಭಿವೃದ್ಧಿ

■ ಪರೋಕ್ಷವಾಗಿ ಕಾಂಗ್ರೆಸ್ ವಿರುದ್ಧ ನರೇಂದ್ರ ಮೋದಿ ವಾಗ್ದಾಳಿ ■ ಅಭಿವೃದ್ಧಿ ಕಾರ್ಯಗಳ ಜೊತೆಗೆ 2023ರ ವಿಧಾನಸಭಾ ಚುನಾವಣೆಗೂ ಅಡಿಗಲ್ಲು!



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಸಂಜೆ ಬೃಹತ್ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು.

ಮೈಸೂರು, ಜೂ. 20(ಆರ್‌ಕೆ)– ಡಬಲ್ ಎಂಜಿನ್ ಸರ್ಕಾರವು ಹಲವು ಜನಪರ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಎಂದು ಹೇಳುವ ಮೂಲಕ ಟೀಕಾಕಾರರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದಿಲ್ಲಿ ತಿರುಗೇಟು ನೀಡಿದ್ದಾರೆ.

ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡುವುದರ ಜೊತೆಗೆ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಲು ಇಂದು ಮೈಸೂರಿಗೆ ಆಗಮಿಸಿದ ಅವರು, ಸಂಜೆ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಸಮಾವೇಶದಲ್ಲಿ ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ಬಳಿಕ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಶ್ರೇಷ್ಠತೆ ಕೇಂದ್ರದ ಲೋಕಾರ್ಪಣೆ ಹಾಗೂ ಮೈಸೂರು ಮತ್ತು ▶ 9ನೇ ಪುಟಕ್ಕೆ

ಕನ್ನಡದಲ್ಲಿ ಭಾಷಣ ಆರಂಭಿಸಿದ ಮೋದಿ

ಮೈಸೂರು, ಜೂ.20– ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಕನ್ನಡದಲ್ಲೇ ಭಾಷಣ ಆರಂಭಿಸುವ ಮೂಲಕ ಗಮನ ಸೆಳೆದರು.

ನೆರೆದಿದ್ದವರಿಂದ ಹರ್ಷೋದ್ಗಾರ

'ಮೈಸೂರು ಹಾಗೂ ಕರ್ನಾಟಕ ರಾಜ್ಯದ ಸಮಸ್ತ ನಾಗರಿಕ ಬಂಧುಗಳಿಗೆ ನನ್ನ ಪ್ರೀತಿಯ ನಮಸ್ಕಾರಗಳು. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ಹಾಗೂ ಫಲಾನುಭವಿಗಳ ಜೊತೆ ಸಂವಾದಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೆ' ಎಂದು ಕನ್ನಡದಲ್ಲೇ ಹೇಳಿದ ನಂತರ ಹಿಂದಿಯಲ್ಲಿ ಭಾಷಣ ಮುಂದುವರೆಸಿದರು. ಈ ವೇಳೆ ನಾಲ್ವಡಿ ಕೃಷ್ಣರಾಜ ಒಡೆಯರ್, ಯೋಗ ಗುರು ಕೃಷ್ಣಮಾಚಾರಿ, ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ರಾಷ್ಟ್ರಕವಿ ಕುವೆಂಪು ಅವರನ್ನು ಸ್ಮರಿಸಿದರು.

ಫಲಾನುಭವಿಗಳೊಂದಿಗೆ ಪ್ರಧಾನಿ ಸಂವಾದ

ಅನುಕೂಲ ಪಡೆದವರ ಮಾತು ತೃಪ್ತಿ ತಂದಿದೆ: ಮೋದಿ


ಮೈಸೂರು, ಜೂ. 20(ಆರ್‌ಕೆ)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಫಲಾನುಭವಿಗಳೊಂದಿಗೆ ತಾವು ನಡೆಸಿದ ಸಂವಾದ ತೃಪ್ತಿ ತಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಇಂದು ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ 74 ಇಲಾಖೆಗಳಲ್ಲಿ ಪ್ರಯೋಜನ ಪಡೆದ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೋ ದುರ್ಘಟನೆಯೊಂದರಲ್ಲಿ ಗಾಯಗೊಂಡು ಮುಖ ವಿಕಾರಗೊಂಡಿದ್ದ ಪ್ರದೀಪ್ ಎಂಬ ಯುವಕ, ಆಯುಷ್ಮಾನ್ ಭಾರತ ಯೋಜನೆಯಡಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆದು ಗುಣಮುಖನಾಗಿ ಮೊದಲಿನಂತೆಯೇ ಮುಖ ರೂಪುಗೊಂಡಿತು ಎಂದು ▶ 9ನೇ ಪುಟಕ್ಕೆ

ಅರಮನೆ ಅಂಗಳದಲ್ಲಿ ನಮೋ ಯೋಗ

ಮೋದಿಯವರೊಂದಿಗೆ 15 ಸಾವಿರಕ್ಕೂ ಅಧಿಕ ಜನ ಪಾರಂಪರಿಕ ಯೋಗ ಪ್ರದರ್ಶನ



ಮೈಸೂರು,ಜೂ.20 (ಎಂಟಿವೈ)–ಮೈಸೂರಿನ ಐತಿಹಾಸಿಕ ಅಂಬಾವಿಲಾಸ ಅರಮನೆ ಅಂಗಳ ಪ್ರಧಾನಿ ಮೋದಿ ನೇತೃತ್ವದ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಅಣಿಯಾಗಿದೆ.

ಅರಮನೆ ಆವರಣದಲ್ಲಿ ಮಂಗಳವಾರ(ಜೂ.21) ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನಡೆಯುಲಿರುವ ಸಾಮೂಹಿಕ ಯೋಗ ಪ್ರದರ್ಶನಕ್ಕೆ ಗಣ್ಯರು ಸೇರಿದಂತೆ ಎಲ್ಲಾ ಯೋಗಪಟುಗಳಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ. ಹಸಿರು ಮ್ಯಾಟ್ ಮೇಲೆ ನಿಗದಿತ ಅಂತರದಲ್ಲಿ ನೀಲಿ ಮ್ಯಾಟ್ ಅಳವಡಿಸಿ, ವ್ಯವಸ್ಥಿತ ಯೋಗ ಪ್ರದರ್ಶನಕ್ಕೆ ಅಣಿ ಮಾಡಲಾಗಿದೆ. ಯಾವುದೇ ಗೊಂದಲಕ್ಕೆ ಆಸ್ಪದ ನೀಡದಂತೆ ಎಚ್ಚರಿಕೆಯಿಂದ ಸಿದ್ಧತೆ ಪೂರ್ಣಗೊಳಿಸಲಾಗಿದೆ. ಅರಮನೆ ಸುತ್ತಲೂ ಪೊಲೀಸರ ಸರ್ಪಗಾವಲಿದ್ದು, ಕಾರ್ಯಕ್ರಮದಲ್ಲಿ ಸಣ್ಣ ಲೋಪವೂ ಆಗದಂತೆ ಬಿಗಿ ಬಂದೋಬಸ್ತ್ ▶ 9ನೇ ಪುಟಕ್ಕೆ



ಯೋಗ ಪ್ರದರ್ಶನಕ್ಕೆ ಅರಮನೆ ಆವರಣದಲ್ಲಿ ಯೋಗ ಮ್ಯಾಟ್ ಹಾಸಿರುವುದು.

ಪ್ರಧಾನಿ ನರೇಂದ್ರ ಮೋದಿಯವರ ಕಾಳಜಿ, ಸಂಸದರ ಪರಿಶ್ರಮದಿಂದ

ಮೈಸೂರಿಗೆ ಬೃಹತ್ ಯೋಜನೆಗಳ ಮಹಾಪೂರ; ಟೀಂ ಮೈಸೂರು

ಮೈಸೂರು ಜನತೆ ಪರವಾಗಿ ಪ್ರಧಾನಿ ಮೋದಿ, ಸಂಸದರಿಗೆ ಧನ್ಯವಾದ

ಮೈಸೂರು,ಜೂ.20(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ವಿಶೇಷ ಕಾಳಜಿಯಿಂದ ಮೈಸೂರಿಗೆ ಬೃಹತ್ ಯೋಜನೆಗಳ ಮಹಾಪೂರವೇ ಹರಿದು ಬರುತ್ತಿದೆ. ಪ್ರಧಾನಿಗಳ ಗಮನ ಸೆಳೆದು ಮೈಸೂರಿಗೆ ಯೋಜನೆಗಳು, ಅನುದಾನ ತರುವ ಮೂಲಕ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಸಂಸದ ಪ್ರತಾಪ್ ಸಿಂಹ ಶ್ರಮಿಸುತ್ತಿದ್ದಾರೆಂದು ಪ್ರಕಟಣೆಯಲ್ಲಿ ತಿಳಿಸಿರುವ ಟೀಂ ಮೈಸೂರು, ಇದಕ್ಕಾಗಿ ಪ್ರಧಾನಿ ಮತ್ತು ಸಂಸದರಿಗೆ ಮೈಸೂರಿನ ಜನತೆ ಪರವಾಗಿ ಧನ್ಯವಾದ ಅರ್ಪಿಸಿದೆ.



ಮೈಸೂರು ಸಮೀಪದ ನಾಗನಹಳ್ಳಿ ಬಳಿ ರೈಲ್ವೆ ನಿಲ್ದಾಣ ಮರು ವಿನ್ಯಾಸಕ್ಕೆ 500 ಕೋಟಿ ರೂ. ಯೋಜನೆ ತರಲು ಪ್ರತಾಪ್ ಸಿಂಹ ಸತತ ಶ್ರಮಿಸಿದ್ದಾರೆ. ಇವರ ಶ್ರಮಕ್ಕೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಹಕರಿಸಿದ್ದಾರೆ. ಮೈಸೂರಿಗೆ ಮಾಮೂಲಾಗಿ ಕೊಡುವುದಕ್ಕಿಂತ ಹೆಚ್ಚಾಗಿ ಕೊಟ್ಟು ಪ್ರಧಾನಿಗಳು ಮೈಸೂರಿಗೆ ಭೇಟಿ ನೀಡಿದ್ದಾರೆ. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಆವರಣದಲ್ಲಿ ಕೇಂದ್ರ ಸರ್ಕಾರದ ಅನುದಾನ 155.49 ಕೋಟಿ ರೂ. ವೆಚ್ಚದಲ್ಲಿ ಶ್ರೇಷ್ಠತಾ ಕೇಂದ್ರ ನಿರ್ಮಿಸಲಾಗಿದೆ. ಜೊತೆಗೆ ಮೈಸೂರು–ಬೆಂಗಳೂರು ದಶಪಥ ರಸ್ತೆ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತಕ್ಕೆ ಬಂದಿದ್ದು, ಇದರಿಂದ ಮೈಸೂರು–ಬೆಂಗಳೂರು ಅವಳಿ ನಗರಗಳ ಮಾದರಿ ಅಭಿವೃದ್ಧಿ ಹೊಂದುತ್ತವೆ. ಪ್ರಧಾನಿಯವರ ವಿಶೇಷ ಕಾಳಜಿ, ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿಯವರ ಉತ್ತೇಜನದಿಂದ ಈ ಬೃಹತ್ ಯೋಜನೆ ಅನುಷ್ಠಾನಗೊಳ್ಳಲು ಸಂಸದರು ಶ್ರಮಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣವನ್ನು ಅಂತರ ರಾಷ್ಟ್ರೀಯ ದರ್ಜೆಗೆ ಏರಿಸುವ ಕಾಮಗಾರಿ ಈಗಾಗಲೇ ಆರಂಭಗೊಂಡಿದೆ. 1,820 ಕೋಟಿ ರೂ. ವೆಚ್ಚದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಗೊಳ್ಳುತ್ತಿದೆ. ಅಲ್ಲದೆ, ಮೈಸೂರಿನ ಬಳಿ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆಗೆ ಹಸಿರು ನಿಶಾನೆ ತೋರಿಸಲಾಗಿದೆ. ಕಡಕೊಳ ಬಳಿ ಬಹುಪಯೋಗಿ ಕಂಟೈನರ್ ಘಟಕ ಸ್ಥಾಪನೆ ಸೇರಿದಂತೆ ಈ ಎಲ್ಲಾ ಅಭಿವೃದ್ಧಿ ಕಾರ್ಯಗಳು ಮುಂಬರುವ ದಿನಗಳಲ್ಲಿ ಮೈಸೂರಿನ ಛಾಪನ್ನು ವಿಶ್ವಭೂಪಟದಲ್ಲಿ ಮೂಡಿಸಲಿವೆ. ರಸ್ತೆ, ವಿಮಾನ ಹಾಗೂ ರೈಲ್ವೆ ಸಂಪರ್ಕಗಳು ಯಾವುದೇ ನಗರದ ಬೆಳವಣಿಗೆಗೆ ಅನಿವಾರ್ಯ.

ಮೈಸೂರು ಈ ನಿಟ್ಟಿನಲ್ಲಿ ಬೆಳವಣಿಗೆ ಹೊಂದಲು ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ, ಸಚಿವರು ಹಾಗೂ ಸಂಸದರ ಶ್ರಮ ಮುನ್ನುಡಿ ಬರೆಯುತ್ತಿದ್ದು, ಮೈಸೂರು ಇಂದು ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಮೈಸೂರಿನ ಅಭಿವೃದ್ಧಿಗೆ ಕಾಳಜಿ ತೋರಿದ ಪ್ರಧಾನಿಗಳು, ಶ್ರಮಿಸುತ್ತಿರುವ ಸಂಸದರು, ಸಚಿವರು ಹಾಗೂ ಅಧಿಕಾರಿ ವರ್ಗಕ್ಕೆ ಟೀಂ ಮೈಸೂರು ಕಡೆಯಿಂದ ಮೈಸೂರಿನ ಜನತೆ ಪರವಾಗಿ ಧನ್ಯವಾದ ಅರ್ಪಿಸುವುದಾಗಿ ಟೀಂನ ಯಶ್ವಂತ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಿಯಿಂದ ಲೋಕಾರ್ಪಣೆಗೊಂಡ ಆಯಿಷ್ ಉತ್ಕೃಷ್ಟ ಕೇಂದ್ರದ ವಿಶೇಷತೆ

ಮೈಸೂರು, ಜೂ.20(ಆರ್‌ಕೆಬಿ)– ಐದು ಸಂಶೋಧನಾ ಕೇಂದ್ರ, ಐದು ಚಿಕಿತ್ಸಾ ಕೇಂದ್ರ ಹಾಗೂ ಎರಡು ಬಾಹ್ಯ ಸೇವಾ ಕೇಂದ್ರಗಳನ್ನು ಒಳಗೊಂಡಿರುವ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆ (ಆಯಿಷ್)ಯ ಉತ್ಕೃಷ್ಟ ಕೇಂದ್ರದ ಹೊಸ ಕಟ್ಟಡವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು.

155.49 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ನಾಲ್ಕು ಅಂತಸ್ತಿನ ಈ ಕಟ್ಟಡದಲ್ಲಿ ಸಂಶೋಧನಾ ಕೇಂದ್ರ, ಚಿಕಿತ್ಸಾ ಕೇಂದ್ರ ಮತ್ತು ಬಾಹ್ಯ ಸೇವಾ ಕೇಂದ್ರಗಳು, ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳ ರೋಗ ನಿರ್ಣಯ, ತಪಾಸಣೆ ಹಾಗೂ ಪುನಶ್ಚೇತನ ಸೇವೆಗಳನ್ನು ಒದಗಿಸಲು ಅತ್ಯಾಧುನಿಕ ಪ್ರಯೋಗಾಲಯಗಳು ಹಾಗೂ ಸೌಲಭ್ಯಗಳನ್ನು ಹೊಂದಿವೆ. ಸಂವಹನ ನ್ಯೂನತೆಯುಳ್ಳ ವ್ಯಕ್ತಿಗಳ ಜೀವನವನ್ನು ಸುಧಾರಿಸಲು ಮತ್ತು ಅವರಲ್ಲಿ ಅರಿವು ಮೂಡಿಸಿ, ಸಬಲಗೊಳಿಸುವ ಸಲುವಾಗಿ ತರಬೇತಿ, ಸಂಶೋಧನೆ, ಚಿಕಿತ್ಸಾ ಸೇವೆಗಳು ಹಾಗೂ ಅದರ ವಿಸ್ತರಣೆಗೆ ಸಂಬಂಧಿಸಿದಂತೆ ಸಾಕಷ್ಟು ಚಟುವಟಿಕೆಗಳನ್ನು ಇಲ್ಲಿ ಕೈಗೊಳ್ಳಲಾಗುತ್ತದೆ. ಈ ಮೂಲಕ ಅವರ ತೊಂದರೆಗಳನ್ನು ಕಡಿಮೆ ಮಾಡುವುದು ಮುಖ್ಯ ಉದ್ದೇಶವಾಗಿದೆ.

ವಾಕ್‌ದೋಷ ಹಾಗೂ ಇತರ ಸಂವಹನ ನ್ಯೂನತೆಯುಳ್ಳವರಿಗೆ ಅನುಗುಣವಾಗಿ ಡೇಟಾಬೇಸ್, ಪರೀಕ್ಷೆಗಳು ಮತ್ತು ಮಾದರಿಗಳನ್ನು ರಚಿಸುವ ಸಲುವಾಗಿ ಸಂಶೋಧನೆಗಳನ್ನು ಕೈಗೊಳ್ಳುವುದು. ಸಂವಹನ ನ್ಯೂನತೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ.



ಏನೇನು ಸೌಲಭ್ಯಗಳು

ಐದು ಸಂಶೋಧನಾ ಕೇಂದ್ರಗಳು: ಮಾತು–ಭಾಷಾ ವಿಜ್ಞಾನ ಕೇಂದ್ರ, ಶ್ರವಣ ವಿಜ್ಞಾನ ಕೇಂದ್ರ, ಸಂವಹನ ನ್ಯೂನತೆಗಳ ತಡೆಗಟ್ಟುವಿಕೆ ಹಾಗೂ ಸಾಂಕ್ರಾಮಿಕತೆಯ ಸಂಶೋಧನೆ ಮತ್ತು ಸಂವಹನ ನ್ಯೂನತೆಗಳ ಅರಿವಿನ ವರ್ತನೆಯ ವಿಜ್ಞಾನ ಕೇಂದ್ರ, ಪುನರ್ವಸತಿ ಎಂಜಿನಿಯರಿಂಗ್, ಅಕೌಸ್ಟಿಕ್ಸ್ ಮತ್ತು ಬಯೋಮೆಡಿಕಲ್ ಎಂಜಿನಿಯರಿಂಗ್ ಕೇಂದ್ರ, ಸಂವರ್ಧನ ಹಾಗೂ ಪರ್ಯಾಯ ಸಂವಹನ ಮತ್ತು ಸಂಜ್ಞಾ ಭಾಷಾ ಕೇಂದ್ರ.

ಐದು ಚಿಕಿತ್ಸೆ ಕೇಂದ್ರಗಳು: ಮಾತು, ಭಾಷಾ ನ್ಯೂನತೆಯುಳ್ಳ ಮಕ್ಕಳು, ವಯಸ್ಕರು, ಹಿರಿಯ ನಾಗರಿಕರಿಗಾಗಿ ಕೇಂದ್ರ ಕಿವಿಮೊರೆತ ಹಾಗೂ ತಲೆ ಸುತ್ತುವಿಕೆ ನ್ಯೂನತೆಯುಳ್ಳ ವ್ಯಕ್ತಿಗಳಿಗಾಗಿ ಕೇಂದ್ರ, ಶ್ರವಣದೋಷವುಳ್ಳ ಮಕ್ಕಳು, ವಯಸ್ಕರು ಮತ್ತು ಹಿರಿಯ ನಾಗರಿಕರಿಗಾಗಿ ಕೇಂದ್ರ, ನುಂಗುವ ಕ್ರಿಯೆಯಲ್ಲಿ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಚಿಕಿತ್ಸಾ ಕೇಂದ್ರ, ಸಂವಹನ ನ್ಯೂನತೆಗಳ ಶಸ್ತ್ರಚಿಕಿತ್ಸೆ, ಪುನರ್ವಸತಿ ಕೇಂದ್ರ

ಎರಡು ಬಾಹ್ಯಸೇವಾ ಕೇಂದ್ರಗಳು: ಪ್ರಮುಖ ಚಟುವಟಿಕೆಗಳು– ಸಂಶೋಧನಾ ಕೇಂದ್ರಗಳು

ಮೋದಿ ಅವರದು ಅನುಕೂಲಸಿಂಧು ರಾಜಕಾರಣ

● ಅತಿವೃಷ್ಟಿ-ಅನಾವೃಷ್ಟಿ ವೇಳೆ ತಿರುಗಿ ನೋಡದ ಪ್ರಧಾನಿ ಈಗ ಬಂದು ಅಭಿವೃದ್ಧಿ ಮಹಾಪೂರ ಹರಿಸಲು ಮುಂದಾಗಿದ್ದಾರೆ ● ವಿಪಕ್ಷ ನಾಯಕ ಸಿದ್ದರಾಮಯ್ಯ ಲೇವಡಿ

ಬೆಂಗಳೂರು,ಜೂ.20(ಕೆಎಂಶಿ)–ಅತಿವೃಷ್ಟಿ–ಅನಾವೃಷ್ಟಿಯಿಂದ ರಾಜ್ಯ ಮುಳುಗಿದ್ದಾಗ ತಿರುಗಿ ನೋಡದ ಪ್ರಧಾನಿ ನರೇಂದ್ರ ಮೋದಿ ಇಂದು ಅಭಿವೃದ್ಧಿಗಳ ಮಹಾಪೂರವನ್ನೇ ಹರಿಸಲು ಎರಡು ದಿನಗಳ ಪ್ರವಾಸ ಕೈಗೊಂಡಿರುವುದನ್ನು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2019 ಹಾಗೂ ನಂತರದ 2 ವರ್ಷಗಳಲ್ಲಿ ರಾಜ್ಯದಲ್ಲಿ ಭಾರಿ ಪ್ರಮಾಣದ ಪ್ರವಾಹ ಬಂತು, ಆ ಸಂದರ್ಭದಲ್ಲಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಬಂದು ಜನರಿಗೆ ಸಾಂತ್ವನ ಹೇಳಿಲ್ಲ, ವಿಶೇಷ ಅನುದಾನ ನೀಡುವ ಕೆಲಸ ಮಾಡಿಲ್ಲ ಎಂದರು.

ಮೈಸೂರು ಬ್ಯಾಂಕ್ ಸ್ಥಾಪನೆ ಮಾಡಿದ್ದು 1913ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಇಂದು ಆ ಹೆಸರನ್ನೇ ಮೋದಿ ಅವರು ಅಳಿಸಿ ಹಾಕಿದ್ದಾರೆ. ಕರಾವಳಿಯಲ್ಲಿ 1906ರಲ್ಲಿ ಕಾರ್ಪೊರೇಷನ್ ಬ್ಯಾಂಕ್ ಆರಂಭವಾಯಿತು. ಹಾಜಿ ಅಬ್ದುಲ್ಲ ಎಂಬುವವರು ಸ್ಥಾಪನೆ ಮಾಡಿದ್ದು, ಸಿಂಡಿಕೇಟ್ ಬ್ಯಾಂಕ್ ಟಿ.ಎಂ.ಎ ಪೈ ಅವರಿಂದ ಸ್ಥಾಪನೆಯಾಗಿದ್ದು, ವಿಜಯಾ ಬ್ಯಾಂಕ್ ನಮ್ಮ ರಾಜ್ಯದ್ದು, ಈ ಬ್ಯಾಂಕುಗಳು ಈಗ ಇದೆಯಾ ಎಂದು ಪ್ರಶ್ನಿಸಿದರು.

ಈ 4 ಬ್ಯಾಂಕುಗಳನ್ನು ಬೇರೆ ಬ್ಯಾಂಕುಗಳ ಜೊತೆ ವಿಲೀನ ಮಾಡಿದ್ದು ಯಾರು? ಈ ಬ್ಯಾಂಕುಗಳ ಒಟ್ಟು ಆಸ್ತಿ ರೂ. 317 ಲಕ್ಷ ಕೋಟಿ ಇತ್ತು. 75,000ಕ್ಕೂ ಹೆಚ್ಚು ಸಿಬ್ಬಂದಿ ಹೊಂದಿತ್ತು. ಈ 4 ಬ್ಯಾಂಕುಗಳು ಕನ್ನಡಿಗರಿಗೆ ಉದ್ಯೋಗ ನೀಡುತ್ತಿದ್ದವು. ಇವು ಬೇರೆ ಬ್ಯಾಂಕುಗಳೊಂದಿಗೆ ವಿಲೀನವಾದ ನಂತರ ಇವುಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುತ್ತಿದೆಯಾ? ಇದು ಕನ್ನಡಿಗರಿಗೆ ಮಾಡಿದ ಮೋಸವಲ್ಲವೇ? ಬೇರೆ ಬ್ಯಾಂಕುಗಳು ದಿವಾಳಿಯಾಗಿವೆ ಎಂದು ವಿಲೀನ ಮಾಡಿದ್ದರಿಂದ ಕನ್ನಡಿಗರಿಗೆ ಕೆಲಸ ಸಿಗದಂತಾಗಿದೆ. ಇದು ನಮ್ಮ ರಾಜ್ಯಕ್ಕೆ ಮಾಡಿರುವ ದೊಡ್ಡ ಅವಮಾನ.

> “ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಮೇಲ್ದರ್ಜೆಗೇರಿಸಿದ್ದು, ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ ನಮ್ಮ ಸಾಧನೆ. ಅದನ್ನೂ ತಮ್ಮದೆಂದು ಬಿಜೆಪಿಯವರು ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಇಷ್ಟೆಲ್ಲ ಅನ್ಯಾಯ ಮಾಡಿ ಈಗ ಮೈಸೂರಿಗೆ ಬಂದು ಯೋಗ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಗುತ್ತಿಗೆ ಕೆಲಸಗಳಲ್ಲಿ 40% ಕಮಿಷನ್ ಕೇಳುತ್ತಿದೆ ಎಂದು ಆರೋಪಿಸಿ ಗುತ್ತಿಗೆದಾರರ ಸಂಘದವರು ಪ್ರಧಾನಿಗೆ ಪತ್ರ ಬರೆದಿದ್ದರು. ಅದಕ್ಕೆ ಮೋದಿ ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಈಗ ಮೋದಿ ಅವರು ಕರ್ನಾಟಕದ ಜನರಿಗೆ ಉತ್ತರ ಹೇಳಬೇಕು.



ಕೊರೊನಾ ಬಂದಾಗ ಆಮ್ಲಜನಕ ಕೊಡಲಿಲ್ಲ. ಆನಂತರ ಕರ್ನಾಟಕ ಹೈಕೋರ್ಟ್‌ನವರು ರಾಜ್ಯಕ್ಕೆ ಆಮ್ಲಜನಕ ನೀಡುವಂತೆ ಆದೇಶ ಮಾಡಿದ ಮೇಲೆ ಹೈಕೋರ್ಟ್ ಹೇಳಿದಷ್ಟು ಆಮ್ಲಜನಕ ಪೂರೈಕೆ ಮಾಡಲು ಆಗಲ್ಲ ಎಂದು ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಮೇಲ್ಮನವಿ ಸಲ್ಲಿಸಿತು. ಆಮ್ಲಜನಕ ಸಿಗದೆ ರಾಜ್ಯದಲ್ಲಿ ಬಹಳ ಮಂದಿ ಸತ್ತು ಹೋದರು. ಇದಕ್ಕೆ ಚಾಮರಾಜನಗರ ಜಿಲ್ಲಾಸ್ಪತ್ರೆ ದುರಂತ ಒಂದು ಉದಾಹರಣೆ. ಕೇಂದ್ರ ಸಚಿವರು ಸಂಸತ್ತಿಗೆ ಉತ್ತರ ನೀಡುವಾಗ ಆಮ್ಲಜನಕ ಸಿಗದೆ ದೇಶದಲ್ಲಿ ಒಬ್ಬರು ಸತ್ತಿಲ್ಲ ಎಂದು ಸುಳ್ಳು ಹೇಳಿದರು. ಚಾಮರಾಜನಗರ ಆಸ್ಪತ್ರೆಯಲ್ಲೇ 36 ಜನ ಸತ್ತಿದ್ದಾರೆ. ಇದಕ್ಕೆ ಕಾರಣ ನರೇಂದ್ರ ಮೋದಿ ಅವರಲ್ಲವೇ? ಎಂದು ಪ್ರಶ್ನಿಸಿದರು. ಸಬ್ ಅರ್ಬನ್ ರೈಲು ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಅನಂತಕುಮಾರ್ ಕೇಂದ್ರ ಸಚಿವರಾಗಿದ್ದರು, ಅಂದಿನಿಂದಲೂ ಹೇಳಿಕೊಂಡು ಬರುತ್ತಿದ್ದಾರೆ. ಆದರೆ ಕೆಲಸ ಆರಂಭ ಆಗಿಲ್ಲ, ಈಗ ಮಾಡ್ತಿದ್ದೀವಿ ಎಂದು ಹೇಳುತ್ತಿದ್ದಾರೆ. ಮೋದಿ ಅವರಿಂದ ಕರ್ನಾಟಕದ ಜನರಿಗೆ ಅನ್ಯಾಯ, ಅಗೌರವ ಆಗಿದೆ. ರಾಜ್ಯದಲ್ಲಿ ಬಿಜೆಪಿಯ ಸರ್ಕಾರ ಲೂಟಿ ಮಾಡುತ್ತಿದೆ. ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಇದಕ್ಕೆಲ್ಲ ಮೋದಿ ಅವರು ಪರವಾನಗಿ ಕೊಟ್ಟವರಂತೆ ಸುಮ್ಮನಿದ್ದರೆ ಹೇಗೆ? ಉತ್ತರ ಕೊಡಬೇಕಲ್ವಾ?

ಅಗ್ನಿಪಥ್ ವಿರುದ್ಧದ ಯುವಕರ ಹೋರಾಟ ನ್ಯಾಯಯುತವಾಗಿದೆ ಎಂದು ನಾವು ಬೆಂಬಲ ನೀಡಿದ್ದೇವೆ, ಆದರೆ ಈ ಹೋರಾಟವನ್ನು ಹಿಂಸಾತ್ಮಕವಾಗಿ ನಡೆಸಬಾರದು. ಶಾಂತಿಯಿಂದ ಹೋರಾಟ ಮಾಡಬೇಕು. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಅನ್ನು ಅಂಬೇಡ್ಕರ್ ಅವರ 125ನೇ ಜಯಂತಿ ಆಚರಣೆ ವೇಳೆ ನಮ್ಮ ಸರ್ಕಾರ ಮಂಜೂರು ಮಾಡಿದ್ದು, ಜಾಗ, ಅನುದಾನ ನೀಡಿದ್ದು ನಾನು. ಬೆಂಗಳೂರು–ಮೈಸೂರು ಹೆದ್ದಾರಿಯನ್ನು ತಾನೇ ಮಾಡಿಸಿದ್ದು ಎಂದು ಪ್ರತಾಪ್ ಸಿಂಹ ಬಹಳ ಸಲ ಹೇಳಿದ್ದಾರೆ. ವಾಸ್ತವವೆಂದರೆ ನಾನು ಮುಖ್ಯಮಂತ್ರಿಯಾಗಿದ್ದೆ, ಮಹದೇವಪ್ಪ ಸಚಿವರಾಗಿದ್ದರು, ಆಗ ಕೇಂದ್ರದಲ್ಲಿ ಆಸ್ಕರ್ ಫರ್ನಾಂಡೀಸ್ ಅವರು ಭೂಸಾರಿಗೆ ಸಚಿವರಾಗಿದ್ದರು. ರಾಜ್ಯ ಹೆದ್ದಾರಿಯಾಗಿದ್ದ ಮೈಸೂರು–ಬೆಂಗಳೂರು ಹೆದ್ದಾರಿಯನ್ನು 10 ಪಥಗಳ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು ಅನುಮೋದನೆ ಮಾಡಿಕೊಟ್ಟವರು ಆಸ್ಕರ್ ಫರ್ನಾಂಡೀಸ್. ಯೋಜನೆ ಅನುಮೋದನೆಯೇ ಆಗದಿದ್ದರೆ ಈ ಸರ್ಕಾರ ಕೆಲಸ ಮಾಡುತ್ತಿತ್ತಾ ಎಂದು ಪ್ರಶ್ನಿಸಿದರು.



ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿರುವ ಮಧು ಜಿ. ಮಾದೇಗೌಡ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ಬೆಂಗಳೂರಲ್ಲಿ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಮಾಜಿ ಸಚಿವರಾದ ಆತ್ಮಾನಂದ, ಚಲುವರಾಯಸ್ವಾಮಿ, ನರೇಂದ್ರಸ್ವಾಮಿ, ಪರಿಷತ್ ಸದಸ್ಯರಾದ ಡಾ.ತಿಮ್ಮಯ್ಯ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಗೋಪಾಲಸ್ವಾಮಿ, ಡಾ.ವಿಜಯಕುಮಾರ್, ಜಾವಗಲ್ ಮಂಜುನಾಥ್, ಗಂಗಾಧರ್, ಮರಿಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ನಾಳೆ ಸಂಗೀತ ಸಾಧಕರಿಗೆ ಸಂಗೀತ ಕಲಾಸಾರಥಿ ಪ್ರಶಸ್ತಿ ಪ್ರದಾನ


ದೀಪಿಕಾ


ಪದ್ಮನಾಭ


ನಾಗರತ್ನ


ರಮೇಶ್


ಕಿರಣ್


ಯದುಕುಮಾರ್

ಮೈಸೂರು, ಜೂ.20(ಆರ್‌ಕೆಬಿ)– ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಜೂ.22 ರಂದು ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಸಂಗೀತ ಕ್ಷೇತ್ರದ ಸಾಧಕರಿಗೆ ಸಂಗೀತ ಕಲಾಸಾರಥಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ಈ ಸಂದರ್ಭದಲ್ಲಿ ಡಾ.ದೀಪಿಕಾ ಪಾಂಡುರಂಗಿ (ದಾಸ ಸಾಹಿತ್ಯ, ಶಾಸ್ತ್ರೀಯ ಸಂಗೀತ ಗಾಯಕ, ಭರತನಾಟ್ಯದಲ್ಲಿ ಪ್ರಥಮ ಶ್ರೇಣಿ), ವಿದ್ವಾನ್ ಆರ್.ಕೆ.ಪದ್ಮನಾಭ ವೀಣೆಯಲ್ಲಿ ಪಾಂಡಿತ್ಯ (ದೇಶ ವಿದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ), ವಿದೂಷಿ ಸಿ.ಎಸ್.ನಾಗರತ್ನ (ಖ್ಯಾತ ಪಿಟೀಲು ವಾದಕರು), ವಿದ್ವಾನ್ ವಿ.ಎಸ್.ರಮೇಶ್ (ತಾಳ ವಾದ್ಯ ಪ್ರವೀಣ, ಮೃದಂಗ, ಮೋರ್ಚಿಂಗ್, ಘಟಂ ವಾದಕರು), ವಿದ್ವಾನ್ ಹೆಚ್.ಪಿ.ಕಿರಣ್ (ಅಂಧರು– ಕರ್ನಾಟಕ ಶಾಸ್ತ್ರೀಯ ಗಾಯಕ, ಕೀಬೋರ್ಡ್ ವಾದಕ), ವಿದ್ವಾನ್ ಯದುಕುಮಾರ್ (ಸ್ಯಾಕ್ಸೋಫೋನ್ ವಾದಕರು, ಮೈಸೂರು ಅರಮನೆ ವಿದ್ವಾಂಸರು) ಇವರಿಗೆ ಕಲಾಸಾರಥಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ಬಿಜೆಪಿ ಮುಖಂಡರಾದ ಬಿ.ಪಿ.ಮಂಜುನಾಥ್, ಚಿಂತಕ ಕೆ.ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಲೇಖಕಿ ಶ್ವೇತಾ ಮಡಪ್ಪಾಡಿ, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್, ಪ್ರಸಾದ್ ಸ್ಕೂಲ್ ಆಫ್ ರಿದಂ ಸಂಸ್ಥೆಯ ಮುಖ್ಯಸ್ಥ ರಾಘವೇಂದ್ರ ಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜು ಬಸಪ್ಪ, ಯುವ ಮುಖಂಡ ಅಜಯ್ ಶಾಸ್ತ್ರಿ ಇನ್ನಿತರರು ಭಾಗವಹಿಸಲಿದ್ದಾರೆ.

ಲೇಖಕಿ ಲೀಲಾ ಪ್ರಕಾಶರ ಮೂರು ಕೃತಿಗಳ ಬಿಡುಗಡೆ



ಮೈಸೂರು, ಜೂ.20(ಎಸ್‌ಪಿಎನ್)– ಲೇಖಕಿ ಲೀಲಾಪ್ರಕಾಶ್ ಅವರ ಮೂರು ಕೃತಿಗಳನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬಿಡುಗಡೆಗೊಳಿಸಿದರು.

ಮೈಸೂರು ಎಂಜಿನಿಯರ್ ಸಂಸ್ಥೆ ಸಭಾಂಗಣದಲ್ಲಿ ವಿದ್ಯುತ್ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ಲೀಲಾಪ್ರಕಾಶ್ ರಚಿತ 'ಲೀಲಾಪ್ರಿಯನ ವೇದಾಂತ ವಿಕಸನ', ಸಮಾಹಿತ(ಕವನ ಸಂಕಲನ), 'ಕನ್ನಡ ಪ್ರತಿಜ್ಞಾ ಯೌಗಂಧರಾಯಣ' (ಬಾಸ ಕವಿಯ ಸಂಸ್ಕೃತ ನಾಟಕ ಅನುವಾದಿತ ಕೃತಿ) ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಅನುವಾದ ಕ್ಷೇತ್ರ ಕ್ಲಿಷ್ಟಕರವಾಗಿದ್ದರೂ ನಿರ್ಲಕ್ಷ್ಯ ಮಾಡುವುದು ತರವಲ್ಲ. ಹಾಗಾಗಿ ಲೇಖಕಿ ಡಾ.ಕೆ.ಲೀಲಾ ಪ್ರಕಾಶ್ ಸಂಸ್ಕೃತದಿಂದ ಮೂರು ಕೃತಿಗಳನ್ನು ಅನುವಾದ ಮಾಡಿದ್ದಾರೆ. ನಾನೂ ಕೂಡ ಕೆಲ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದೇನೆ ಎಂದರು. ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಮಾತನಾಡಿದರು. ತದನಂತರ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ 'ಸಮಾಹಿತ' ಕವನ ಸಂಕಲನ ಕುರಿತು ಮಾತನಾಡಿದರೆ, ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್ ಭಾಸ ಕವಿಯ ಸಂಸ್ಕೃತ ನಾಟಕದ 'ಕನ್ನಡ ಪ್ರತಿಜ್ಞಾ ಯೌಗಂಧರಾಯಣ' ಅನುವಾದಿತ ಕೃತಿ ಕುರಿತು ಮಾತನಾಡಿದರು. ಈ ವೇಳೆ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗೌರವ ಕಾರ್ಯದರ್ಶಿ ಲತಾ ಮೋಹನ್, ವಿದ್ಯುತ್ ಪ್ರಕಾಶನದ ಕೇಶವಪ್ರಕಾಶ್, ಡಾ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಡಾ.ಕೆ.ಲೀಲಾಪ್ರಕಾಶ್ ಉಪಸ್ಥಿತರಿದ್ದರು.

ನಾಳೆ ರೋಟರಿ ಐವರಿಯ ಸಾಲಿನ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಜೂ. 20– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಜೂ.22ರಂದು ಬುಧವಾರ ಸಂಜೆ 6.30ಕ್ಕೆ ರೋಟರಿ ಐವರಿಯ 2022–23ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಪಿಡಿಜಿ, ಎಕೆಎಸ್, ರೋಟರಾಕ್ಟ್ ವರ್ಲ್ಡ್ ಸಹ ಅಧ್ಯಕ್ಷರು, ರೋಟೇರಿಯನ್, ಡಾ.ರವಿ ವಡ್ಲಮನಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಗೌರವ ಅತಿಥಿಗಳಾಗಿ ರೋಟರಿ ವಲಯ–7ರ ಸಹಾಯಕ ಗೌರ್ನರ್ ರೋಟೇರಿಯನ್ ಎಸ್.ಬಾಲಚಂದರ್ ಹಾಗೂ ರೋಟರಿ ವಲಯ–7ರ ಲೆಫ್ಟಿನೆಂಟ್ ರೋ. ಎಸ್.ರಾಮಚಂದ್ರ ರಾಜೇ ಅರಸ್ ಭಾಗವಹಿಸಲಿದ್ದಾರೆ.



ಮೈಸೂರು ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ವಿಶೇಷ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಟಿ.ಸತೀಶ್ ಜವರೇಗೌಡ, ಪ್ರಭಾರ ಮುಖ್ಯ ಶಿಕ್ಷಕ ಸುನೀಲ್‌ಕುಮಾರ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಯೋಗ ಪ್ರದರ್ಶನ ಪರಿಶೀಲಿಸಿದ ಆಯುಷ್ ಸಚಿವ ಸೋನೊವಾಲ್

ಮೈಸೂರು,ಜೂ.20(ಎಂಟಿವೈ)– ಅಂತರ ರಾಷ್ಟ್ರೀಯ ಯೋಗ ದಿನದ ಹಿನ್ನೆಲೆಯಲ್ಲಿ ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಆಯೋಜಿಸಿರುವ ಯೋಗ ಸಂಬಂಧಿತ ವಸ್ತು ಪ್ರದರ್ಶನಕ್ಕೆ ಸೋಮವಾರ ಬೆಳಗ್ಗೆ ಕೇಂದ್ರದ ಆಯುಷ್ ಸಚಿವ ಸರ್ಬಾನಂದ ಸೋನೊವಾಲ್ ಹಾಗೂ ಕಾರ್ಯದರ್ಶಿ ರಾಜೇಶ್ ಕೊಟೆಚಾ ಭೇಟಿ ನೀಡಿ, ಪರಿಶೀಲಿಸಿದರು.



ಪ್ರಸಕ್ತ ಸಾಲಿನ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುತ್ತಿರುವುದರಿಂದ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಯೋಗದ ಮಹತ್ವ, ಆಯುಷ್ ಇಲಾಖೆ ಕಾರ್ಯಕ್ರಮಗಳು ಸೇರಿದಂತೆ ಇನ್ನಿತರ ಮಾಹಿತಿ ನೀಡುವ ಮಳಿಗೆಗಳನ್ನು ತೆರೆಯಲಾಗಿದ್ದು, ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಈ ವಸ್ತುಪ್ರದರ್ಶನ ವೀಕ್ಷಣೆಗೆ ಮಂಗಳವಾರ ಪ್ರಧಾನಿ ಮೋದಿ ಆಗಮಿಸಲಿದ್ದಾರೆ. ಮೋದಿ ಆಗಮನದಿಂದಾಗಿ ಇಂದು ಬೆಳಗ್ಗೆ ಕೇಂದ್ರದ ಆಯುಷ್ ಸಚಿವ ಸರ್ಬಾನಂದ ಸೋನೊವಾಲ್, ಕಾರ್ಯದರ್ಶಿ ರಾಜೇಶ್ ಕೊಟೆಚಾ ಹಾಗೂ ಭದ್ರತಾ ಸಿಬ್ಬಂದಿ ವಸ್ತುಪ್ರದರ್ಶನ ಪರಿಶೀಲಿಸಿದರು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಯೋಗ ವಸ್ತುಪ್ರದರ್ಶನದ ಬಗ್ಗೆ ಮಾಹಿತಿ ನೀಡಿದರು.

ಲಘು, ಭಾರಿ ವಾಹನ ತರಬೇತಿ

ಮೈಸೂರು, ಜೂ.20– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಡಿ ಎಸ್.ಸಿ.ಎಸ್.ಟಿ ಮತ್ತು ಟಿಎಸ್ಪಿ ಯೋಜನೆಗಳಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದ ಸಫಾಯಿ ಕರ್ಮಚಾರಿ ಪೌರಕಾರ್ಮಿಕರು ಮತ್ತು ಮ್ಯಾನ್ಯುಯೆಲ್ ಸ್ಕ್ಯಾವೆಂಜರ್ಸ್ ಹಾಗೂ ಅವರ ಅವಲಂಬಿತರ ಅರ್ಹ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಲಘು ಮತ್ತು ಭಾರಿ ವಾಹನ ತರಬೇತಿ ನೀಡಿ ಪ್ರಾದೇಶಿಕ ಸಾರಿಗೆ ಕಚೇರಿಯಿಂದ ಚಾಲನಾ ಅನುಜ್ಞಾ ಪತ್ರ ಲೈಸೆನ್ಸ್ ಅಥವಾ ಬ್ಯಾಡ್ಜ್ ನೀಡುವ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಹಮ್ಮಿಕೊಳ್ಳಲಾಗಿದೆ.

ಲಘು ವಾಹನ ಚಾಲನಾ ತರಬೇತಿ (ಕಾರು ಅಥವಾ ಜೀಪ್) ತರಬೇತಿ ಅವಧಿ 30 ದಿನಗಳು 18 ವರ್ಷ ಪೂರ್ಣಗೊಂಡಿರಬೇಕು. ಜನನ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಟಿಸಿ, ನೋಟರಿಯಿಂದ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ 5 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ. ಭಾರಿ ವಾಹನ ಚಾಲನಾ (ಬಸ್) ತರಬೇತಿ ಅವಧಿ 30 ದಿನಗಳು, ವಯಸ್ಸು ಕನಿಷ್ಠ 20 ವರ್ಷ ಪೂರ್ಣಗೊಂಡಿರಬೇಕು. ಲಘು ವಾಹನ ಚಾಲನಾ ಅನುಜ್ಞಾ ಪತ್ರ ಲೈಸೆನ್ಸ್ ಪಡೆದು 1 ವರ್ಷ ಪೂರೈಸಬೇಕು. ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಟಿಸಿ ಪ್ರಮಾಣ ಪತ್ರ ಆಧಾರ್ ಕಾರ್ಡ್ ಜಾತಿ ಮತ್ತು ಆದಾಯ ಪ್ರಮಾಣ ಪತ್ರ 5 ಪಾಸ್ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಕಲಿಸಬೇಕು ಎಂದು ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.06.2022 ಮಂಗಳವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಅಷ್ಟಮಿ, ನಕ್ಷತ್ರ : ಪೂಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ :** ಬೇಸಿಗೆ ಮೇಳ–2022, ದಸರಾ ವಸ್ತುಪ್ರದರ್ಶನ ಮೈದಾನ, ಮಧ್ಯಾಹ್ನ 3.30ರಿಂದ ರಾತ್ರಿ 9 ಗಂಟೆವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಮೈಸೂರಿನ ಅರಮನೆ ಮೈದಾನದಲ್ಲಿ ಏರ್ಪಾಡಾಗಿರುವ ಪ್ರಧಾನಿ ನರೇಂದ್ರಮೋದಿಯವರು ಪಾಲ್ಗೊಳ್ಳಲಿರುವ ವಿಶ್ವ ಯೋಗ ದಿನದ ಕಾರ್ಯಕ್ರಮದ ನೇರಪ್ರಸಾರ, ಮಧ್ಯಾಹ್ನ 12.30 ದೇವರನಾಮ–ನಾಗಮಣಿ ಶ್ರೀನಾಥ್, ಶಿವಾನಂದ ಪಾಟೀಲ್, 1.20 ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ "ಯೋಗ ಸುಯೋಗ" ಬಾನುಲಿ ಸರಣಿ, 3.00 ವಿ.ದೇಶಿಕಾಚಾರ್–ವೇಣು ವಾದನ, 4.00 ಕಥಾ ಕಾಲಕ್ಷೇಪ "ಭೀಮ ಜರಾಸಂಧ", ಪ್ರಸ್ತುತಿ– ವಿದ್ವಾನ್ ಆರ್.ಗುರುರಾಜುಲು ನಾಯ್ಡು, 9.30 ಟಿ.ವಿ. ಗೋಪಾಲಕೃಷ್ಣನ್ – ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ರ ಪ್ರಕ್ಷಿಕೆ, ನಿರ್ಮಾಣ– ದಿವಾಕರ್ ಹೆಗಡೆ, 10.30 ಸವಿನೆನಪು

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಡಾ. ಬೆ.ನಾ. ವಿಜಯೇಂದ್ರಚಾರ್ಯರಿಂದ 'ಶ್ರೀ ಮಹಾಭಾರತದ ಉದ್ಯೋಗ ಪರ್ವ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಅಂತರರಾಷ್ಟ್ರೀಯ ಯೋಗ ದಿನ ಆಚರಣೆ, ಮುಖ್ಯ ಅತಿಥಿಗಳು: ಮೈಸೂರು ಯೋಗ ಅಕಾಡೆಮಿ ಸ್ಥಾಪಕ ಅಧ್ಯಕ್ಷ ಎಂ.ಎಸ್. ರಮೇಶ್ ಕುಮಾರ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್, ವಿಶೇಷ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಆರ್. ರಾಜಣ್ಣ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆವರಣ, ಬೆಳಗ್ಗೆ 7 ರಿಂದ.

ಮೈಸೂರು ಮಿತ್ರ

ನಕ್ಕರೆ ಅದೇ ಸ್ವರ್ಗ

ಅವರು : ನನಗೆಷ್ಟು ಜಮೀನು ಇದೆಯೆಂದರೆ ನನ್ನ ಕಾರಿನಲ್ಲಿ ಬೆಳಗ್ಗೆ ಒಂದೆಡೆಯಿಂದ ಹೊರಟರೆ ಇನ್ನೊಂದು ತುದಿ ಸೇರಲು ಸಂಜೆಯೇ ಆಗುತ್ತದೆ.

ಇವರು : "ಹೋ, ಹೋ, ನನ್ನ ಕಾರಿನ ಹಾಗೆ ನಿಮ್ಮ ಕಾರೂ ತೊಂದರೆಯಿದೆ!"

ಮೈಸೂರು ಮಿತ್ರ

ಮಂಗಳವಾರ, 21 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮನೆಯವರ ಮನಸ್ಸು ಅರಿಯದೆ, ಮನೆಯ ಜವಾಬ್ದಾರಿಯನ್ನು ಹೊರದೆ, ಮನೆಯ ಯಜಮಾನ ಗೌರವ ಪಡೆಯಲಾರ, ಅಧಿಕಾರ ಚಲಾಯಿಸಿ ಯಜಮಾನನಾಗುವುದು ಸಾಧ್ಯವಿಲ್ಲ. – ದ.ರಾ. ಬೇಂದ್ರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಉಂಡಿದ್ದು ಹೊಟ್ಟೆಗಾಗಿ, ಮಾಡಿದ್ದು ಬಟ್ಟೆಗಾಗಿ

ನಿಮ್ಮ ಪತ್ರಗಳು

ರೋಗ ರಹಿತ ಬಾಳಿಗೆ ಯೋಗ ಸಹಿತದ ಜೀವನ ಬೇಕೇ ಬೇಕು...

ಮಾನ್ಯರೆ,

ಜೂನ್ 21 ಅಂತರರಾಷ್ಟ್ರೀಯ ಯೋಗ ದಿನ. ವಿಶ್ವಕ್ಕೆ ಯೋಗ ವಿಜ್ಞಾನವನ್ನು ಕೊಡುಗೆಯಾಗಿ ನೀಡಿದ ಹೆಮ್ಮೆ ನಮ್ಮ ಭಾರತ ದೇಶದ್ದು. ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯ ಭಾಗವಾಗಿ ಬಂದಿರುವ ಜೀವನ ವಿಧಾನ ಜೀವನ ಕಲೆ. ಔಷಧ ರಹಿತ ಜೀವನ ಸಾಗಿಸಲು ಶತಮಾನಗಳ ಹಿಂದೆಯೇ ಪತಂಜಲಿ ಮಹರ್ಷಿಯು ನಮಗೆಲ್ಲ ನೀಡಿದ ವರದಾನವೆಂದರೆ ತಪ್ಪಾಗಲಾರದು.

ಈ ಅತ್ಯಾಧುನಿಕ ಯುಗದಲ್ಲಿ ಯಾಂತ್ರಿಕ ಬದುಕಿನ ಪಯಣದಲ್ಲಿ ಎಲ್ಲರೂ ಒತ್ತಡದಿಂದ ಓಡುತ್ತಿದ್ದೇವೆ. ಮಕ್ಕಳಿಂದ ವೃದ್ಧರವರೆಗೂ ಒಂದಲ್ಲ ಒಂದು ರೀತಿ ಮಾನಸಿಕ ಒತ್ತಡ ಖಿನ್ನತೆ, ದೈಹಿಕ ತೊಂದರೆಗಳು ಇದ್ದೇ ಇರುತ್ತದೆ. ಇವುಗಳಿಂದ ಹೊರಬರಲು ದೈಹಿಕ ಮಾನಸಿಕ ಆರೋಗ್ಯವನ್ನು ಗಳಿಸಿಕೊಳ್ಳಲು ಹಾಗೂ ಉಳಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಯೋಗಾಭ್ಯಾಸ. ಶಾಲಾ ಹಂತದಲ್ಲೇ ಮಕ್ಕಳಿಗೆ ಯೋಗವನ್ನು ಒಂದು ವಿಷಯವಾಗಿ ಕಲಿಸಿ ಬೋಧಿಸಿದರೆ ಮುಂದೆ ಸದೃಢ ಆರೋಗ್ಯವಂತ ಸಮಾಜ ನಿರ್ಮಾಣವಾಗುವುದು ಖಚಿತ.

ಯೋಗದ ವೈಜ್ಞಾನಿಕ ಮಹತ್ವವನ್ನು ಅರಿತು ಇಡೀ ವಿಶ್ವವೇ ಒಪ್ಪಿ ಅಳವಡಿಸಿ ಕೊಂಡಿರುವಾಗ ನಾವುಗಳು ಯೋಗವನ್ನು ಮತ್ತಷ್ಟು ಪ್ರಚಲಿತಗೊಳಿಸಿ ಅಳವಡಿಸಿ ಕೊಂಡಾಗ ಅದು ಕೇವಲ ಹಿತ್ತಲ ಗಿಡವಾಗದೇ ಮದ್ದಾಗುವುದರಲ್ಲಿ ಸಂಶಯವಿಲ್ಲ.

–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು

ದೇವೇಗೌಡರು ರಾಷ್ಟ್ರಪತಿಯಾಗಲಿ!



ಮಾನ್ಯರೆ,

ಈ ಬಾರಿಯ ರಾಷ್ಟ್ರಪತಿ ಚುನಾವಣೆಯಲ್ಲಿ ದೇವೇಗೌಡರಿಗೆ ಮನ್ನಣೆ ಸಿಗಲಿ. ಹಿರಿದಾದ ಜೀವದ ಬಗ್ಗೆ ಹಿರಿದಾದ ಮನಸ್ಸಿರಲಿ. ಕನ್ನಡಿಗ ಪ್ರಧಾನಿಯಾಗಿದ್ದರೆಂಬ ಹೆಮ್ಮೆಯ ಖುಷಿಯಿರಲಿ. ಜಾತಿ ಪಕ್ಷಕ್ಕೂ ಮೀರಿದ ಪಕ್ಷಾತೀತ ಬೆಂಬಲವಿರಲಿ. ಹಿರಿ ವಯಸ್ಸಿನ ದೇವೇಗೌಡರನ್ನು ರಾಷ್ಟ್ರ ಗುರುತಿಸಲಿ. ರಾಷ್ಟ್ರಪತಿ ಹುದ್ದೆಯನ್ನು ಗೌಡರಿಗೆ ಕೊಟ್ಟು ದೇಶ ಗೌರವಿಸಲಿ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಎಟಿಎಂ ವಂಚನೆಯಾದರೆ ತಕ್ಷಣ ಕರೆ ಮಾಡಿ 112

ಮಾನ್ಯರೆ,

ಎಟಿಎಂ – ಎಂದರೆ ಎನಿ ಟೈಮ್ ಮನಿ ಎಂದೂ ಅರ್ಥೈಸಲಾಗುತ್ತದೆ. ಕೆಲವು ದಶಕಗಳ ಹಿಂದೆ ಬ್ಯಾಂಕ್ ವಹಿವಾಟು ಪುಸ್ತಕ ರೂಪದಲ್ಲಿ ಹಣ ಕಟ್ಟುವುದು, ಹಣ ತೆಗೆದುಕೊಳ್ಳುವುದು ನಡೆಯುತ್ತಿತ್ತು. ಮತ್ತು ಯಾವುದೇ ಗೊಂದಲಕ್ಕೆ ಆಸ್ಪದವಿರಲಿಲ್ಲ. ಮೋಸ, ವಂಚನೆ ಕಡಿಮೆಯಿತ್ತು.

ಪ್ರಸ್ತುತ ಬ್ಯಾಂಕ್ ವ್ಯವಹಾರ ಸಂಪೂರ್ಣ ಬದಲಾಗಿದ್ದು, ಆನ್‌ಲೈನ್ ಮೂಲಕ ಬ್ಯಾಂಕ್ ವಹಿವಾಟು ನಡೆಯುವ ಕಾರಣ ಮುಗ್ಧ, ಅವಿದ್ಯಾವಂತರು ಮತ್ತು ಕೆಲವೊಮ್ಮೆ ವಿದ್ಯಾವಂತರು ಸಹ ಮೋಸ ಹೋಗುವುದು ಸಾಮಾನ್ಯವಾಗಿದೆ. ಇಂದು ಎಟಿಎಂ ಕಾರ್ಡ್ ಸೌಲಭ್ಯವಿದ್ದು ಪ್ರತಿದಿನ 20000 ರೂಪಾಯಿಗಳವರೆಗೆ ಹಣ ಪಡೆಯಬಹುದಾಗಿದೆ.

ಎಟಿಎಂ ಕಾರ್ಡ್ ಮೂಲಕ ಹಣವನ್ನು ಬೇರೆಯವರ ಖಾತೆಗೆ ವರ್ಗಾವಣೆ ಮಾಡುವ ಸೌಲಭ್ಯವನ್ನು ಬ್ಯಾಂಕುಗಳು ಕಲ್ಪಿಸಿಕೊಟ್ಟಿವೆ. ಆದರೆ ಎಟಿಎಂ ಕಾರ್ಡ್‌ನ ಪಿನ್ ಕೋಡ್ ಅಥವಾ ಓಟಿಪಿ ಎಂದರೆ ಒನ್ ಟೈಮ್ ಪಾಸ್‌ವರ್ಡ್ ಎಂಬುದಾಗಿದೆ. ವಿಶೇಷವಾಗಿ ಹಣಕಾಸಿನ ವಂಚನೆಯನ್ನು ತಡೆಯಲು ಈ ಓಟಿಪಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೂ ಸಹ ಈ ಓಟಿಪಿಯನ್ನು ಮೋಸದಿಂದ ಪಡೆದು ಹಣ ವರ್ಗಾವಣೆ ಮಾಡಿಕೊಳ್ಳುವುದು ಹೆಚ್ಚಾಗುತ್ತಿದೆ.

ಇಂತಹ ವಂಚನೆಯನ್ನು ತಡೆಗಟ್ಟಲು ಬ್ಯಾಂಕಿನ ಗ್ರಾಹಕರು 112 ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಿ ಪ್ರಕರಣ ದಾಖಲಿಸಿದರೆ, ಖಾತೆಯಿಂದ ಹಣ ವರ್ಗಾವಣೆಯಾಗುವುದನ್ನು ತಡೆಯಬಹುದಾಗಿದೆ. ಯಾವುದೇ ಓಟಿಪಿಯಿಂದ ಹಣ ವಂಚಕರ ಖಾತೆಗೆ ತಲುಪಲು ಒಂದು ಗಂಟೆಯ ಸಮಯ ಬೇಕಾಗುತ್ತದೆ.

ಈ ಸಮಯದಲ್ಲಿ 112 ಸಂಖ್ಯೆಗೆ ಕರೆ ಮಾಡಿದರೆ ಹಣ ವರ್ಗಾವಣೆಯಾಗದಂತೆ ತಡೆಯಬಹುದಾಗಿದೆ. ಈ ಸೌಲಭ್ಯವನ್ನು ಒದಗಿಸಿದ ಬ್ಯಾಂಕ್ ಮತ್ತು ಸರ್ಕಾರಕ್ಕೆ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಪದವೀಧರರ ಪದವಿ ಬಗ್ಗೆಯೇ ಅನುಮಾನ ಬರುತ್ತೆ...


ಮಾನ್ಯರೆ,

ದಕ್ಷಿಣ ಪದವೀಧರರ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಕುಲಗೆಟ್ಟ ಮತದ ಪ್ರಮಾಣ ಕಂಡಾಗ ನಮ್ಮ ಪದವೀಧರರ ಪದವಿಯ ಗುಣಮಟ್ಟದ ಬಗ್ಗೆಯೇ ಅನುಮಾನ ಬರುವಂತಾಗಿದೆ. ಸರ್ಕಾರ, ಅಭ್ಯರ್ಥಿಗಳು, ಮತದಾರರು ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕೆಂದು ಪತ್ರಿಕೆಗಳ ಮೂಲಕ ಹಾಗೂ ಖುದ್ದಾಗಿ ತಿಳುವಳಿಕೆ ನೀಡಿದ್ದರೂ, ಮತದಾನವನ್ನು ಸರಿಯಾಗಿ ಮಾಡದೇ, ತಾವು ತೆಗೆದುಕೊಂಡಿರುವ ಪದವಿಯನ್ನು ಜನರು ಅನುಮಾನದಿಂದ ನೋಡುವಂತೆ ಮಾಡಿದ್ದಾರೆ.

ಗಾಯದ ಮೇಲೆ ಬರೆ ಎಳೆದಂತೆ ಈ ಸಲ ಹೆಂಡ, ಅಫೀಮು, ಗಾಂಜಾ ಸದ್ದು ಕೇಳಿ ಬಂದಿದೆಯಲ್ಲದೆ, ಗೂಗಲ್ ಪೇ, ಫೋನ್ ಪೇಗಳ ಮೂಲಕ ಅಭ್ಯರ್ಥಿಗಳು ಬೇರೆಯವರ ಹೆಸರಿನಲ್ಲಿ ಮತದಾರರ ಖಾತೆಗೆ ಹಣ ವರ್ಗಾವಣೆ ಮಾಡಿರುವುದು ಗುಟ್ಟಾಗೇನು ಉಳಿದಿಲ್ಲ. ಇಂತಹ ಕೃತ್ಯ ಮಾಡಿರುವುದು ಅಕ್ಷಮ್ಯ. ಚುನಾವಣೆಗಳಲ್ಲಿ ಬಡವರು, ಅವಿದ್ಯಾವಂತರು ಹೀಗೆ, ಕೆಳ ಮಧ್ಯಮ ವರ್ಗದ ಜನರಿಗೆ ಹಣದ ಆಮಿಷ ತೋರಿಸಿ ಗೆಲ್ಲಲು ಪ್ರಯತ್ನ ಪಡುತ್ತಿದ್ದ ಪುಢಾರಿಗಳು ಇಂದು ಮೇಲ್ವರ್ಗದ ಜನರಿಗೂ ಅದರಲ್ಲೂ ಪದವೀಧರ ಮಹಾಶಯರಿಗೂ ಈ ಚಟ ಅಂಟಿಸುತ್ತಿರುವುದು ಈ ದೇಶ ಎತ್ತ ಸಾಗುತ್ತಿದೆ ಎಂದು ಚಿಂತಿಸುವಂತಾಗಿದೆ. ಕೆಲವು ಮತದಾರರು ತಮ್ಮ ಖಾತೆಗೆ ಬಂದಿರುವ ಹಣವನ್ನು ಏನು ಮಾಡಬೇಕೆಂದು ತಿಳಿಯದೆ ಇದ್ದರೆ ಮತ್ತೆ ಕೆಲವರು ಆ ವಿಷಯ ತಮಗೆ ತಿಳಿದೇ ಇಲ್ಲದಂತಿದ್ದಾರೆ. ಮುಂಬರುವ ದಿನಗಳಲ್ಲಿ ಇದೆಲ್ಲಿಗೆ ಹೋಗಿ ನಿಲ್ಲುವುದೋ ಎಂಬುದನ್ನು ನೆನೆಸಿಕೊಂಡರೆ ಭಯವಾಗುತ್ತದೆ.

– ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಮೈಸೂರು ಯೋಗ ವೈವಿಧ್ಯತೆಯ ತವರೂರು





ಇಂದು ವಿಶ್ವ ಯೋಗ ದಿನಾಚರಣೆಯ ಸಂಭ್ರಮ. ಯೋಗದ ರಾಜಧಾನಿ, ಯೋಗ ನಗರಿ ಎಂದೆಲ್ಲಾ ಬಿರುದಾಂಕಿತವಾದ ಮೈಸೂರಿಗರಿಗೆ ಈ ಬಾರಿ ಪ್ರಧಾನಿ ಮೋದಿಯವರು ಬಂದು ತಮ್ಮೂರಿನಲ್ಲಿ ತಮ್ಮೊಂದಿಗೆ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುತ್ತಾರೆನ್ನುವ ಸಡಗರ ಮನೆ ಮಾಡಿದ್ದು ಇದು ಮೈಸೂರಿನ ಜನತೆಗೆ ವಿಭಿನ್ನ ಅನುಭವವೇ ಸರಿ. ಈಗಾಗಲೇ ಮೈಸೂರು ನವವಧುವಿನಂತೆ ಸಿಂಗಾರಗೊಳ್ಳುತ್ತ ಎಲ್ಲಾ ಕಡೆ ಯೋಗದ ರಿಹರ್ಸಲ್‌ಗಳು ನಡೆಯುತ್ತ ಯೋಗಾಸಕ್ತರ ಕಣ್ಮನಗಳಿಗೆ ರಸದೌತಣ ನೀಡುತ್ತಿದೆ.

ಹಾಗೆ ಹೇಳುವುದಾದರೆ ಯೋಗದ ವಿಚಾರಕ್ಕೆ ಬಂದರೆ ಕರ್ನಾಟಕ ಮಾತ್ರವಲ್ಲ ಇಡೀ ಭಾರತದಲ್ಲಿಯೇ ಮೈಸೂರಿಗೊಂದು ವಿಶೇಷ ಸ್ಥಾನಮಾನವಿದೆ. ಭಾರತದ ಋಷಿ ಮುನಿಗಳ ಅಪೂರ್ವ ಕೊಡುಗೆಯೆಂದು ಪರಿಗಣಿಸಲ್ಪಟ್ಟ ಯೋಗಶಾಸ್ತ್ರಕ್ಕೆ ಅಂತಹ ನೆಲೆ ಬೆಲೆಗಳಿಲ್ಲದ ಕಾಲಮಾನದಲ್ಲಿ ಯೋಗದ ಪುನರುತ್ಥಾನಗೊಂಡಿದ್ದೇ ಮೈಸೂರಿನಲ್ಲಿ. ಮೈಸೂರನ್ನಾಳಿದ ಒಡೆಯರ ವಿಶೇಷ ಆಸಕ್ತಿಯ ಹಾಗೂ ಪ್ರೋತ್ಸಾಹದ ಫಲವಾಗಿಯೇ ಯೋಗ ಬೆಳವಣಿಗೆ ಕಂಡಿತೆಂದು ಅಂದಿನ ಇತಿಹಾಸಕಾರರಾದ ನಾರ್ಮನ್ ಸ್ಜೋಮನ್ "ದಿ ಯೋಗ ಟ್ರೆಡಿಷನ್ ಆಫ್ ದಿ ಮೈಸೂರು ಪ್ಯಾಲೆಸ್" ಎಂಬ ಕೃತಿಯಲ್ಲಿ ಪ್ರತಿಪಾದಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಶ್ರೀ ಕೃಷ್ಣಮಾಚಾರ್ಯರು



ನಾಲ್ವಡಿ ಕೃಷ್ಣರಾಜ ಒಡೆಯರ್

ಒಂದು ಕಾಲದಲ್ಲಿ ಪ್ರಪಂಚದಲ್ಲಿರಲಿ ಮೈಸೂರಿನಲ್ಲಿಯೇ ಯೋಗದ ಬೆಳವಣಿಗೆ ಇಲ್ಲದ ಕಾಲಮಾನದಲ್ಲಿ ವಾಮನನಂತಹ ತರುಣನೊಬ್ಬ ತನ್ನ ಯೋಗಸಾಧನೆ ಹಾಗೂ ಅಪಾರ ವಿದ್ವತ್ತಿನಿಂದ ಪ್ರಖ್ಯಾತವಾಗುತ್ತಿರುವುದು ಅಂದಿನ ಆಳರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ ಕಿವಿಗೂ ಬಿತ್ತು. ಒಮ್ಮೆ ಅವನನ್ನು ವಾರಣಾಸಿಯಲ್ಲಿ ಕಂಡವರೇ ಕೂಡಲೇ ರಾಜಮನೆತನಕ್ಕೆ ಯೋಗ ಕಲಿಸಲು ಆಹ್ವಾನಿಸಿದರು. ಆ ತರುಣ ಸಮ್ಮತಿ ಸೂಚಿಸಿದ್ದೇ ಅಲ್ಲದೇ ಮೈಸೂರನ್ನು ಯೋಗದ ನೆಲೆಯಾಗಿ ರೂಪಿಸಲು ಸಂಕಲ್ಪಿಸಿ ಅಂದು ನೆಟ್ಟ ಯೋಗದ ಸಸಿಯೇ ಇಂದು ನಾವು ಕಾಣುತ್ತಿರುವ ಮಹಾವೃಕ್ಷದೋಪಾದಿಯ ಯೋಗದ ವಿಶ್ವರೂಪ. ಆತ ಬೇರೆ ಯಾರೂ ಅಲ್ಲ. ಯೋಗಿರಾಜ ತಿರುಮಲೆ ಕೃಷ್ಣಮಾಚಾರ್ಯ.


ಯೋಗ ದಿನಾಚರಣೆ

ಅಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಕೃಷ್ಣಮಾಚಾರ್ಯರಿಂದ ಸಾರ್ವಜನಿಕರಿಗೆ ಯೋಗ ಕಲಿಸಲು ವ್ಯವಸ್ಥೆ ಕಲ್ಪಿಸಲಾಗಿತ್ತು. ಯೋಗಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ಎಷ್ಟು ಉತ್ತೇಜನ ನೀಡುತ್ತಿದ್ದರೆಂದರೆ ಪ್ರತಿ ವರ್ಷದ ಒಂದು ದಿನದಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲು ಅನುವು ಮಾಡಿಕೊಟ್ಟಿದ್ದರು. ಅಂದು ಗಣ್ಯ ಅತಿಥಿಗಳ ಸಮಕ್ಷಮ ವಿದ್ಯಾರ್ಥಿಗಳಿಂದ ತಾವು ಕಲಿತ ಯೋಗ ಪ್ರದರ್ಶನ ನಡೆಯುತ್ತಿತ್ತು. ಶಿಕ್ಷಣ ಪೂರೈಸಿದ ವಿದ್ಯಾರ್ಥಿಗಳಿಗೆ ಯೋಗ ಸರ್ಟಿಫಿಕೇಟ್ ಕೂಡ ನೀಡಲಾಗುತ್ತಿತ್ತು.

ಮೈಸೂರಿನ ಯೋಗದ ಇತಿಹಾಸದ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವ ವಿದೇಶೀಯ ಪಂಡಿತ ನಾರ್ಮನ್ ಸ್ಜೋಮನ್ ಹೇಳುವಂತೆ 1900ರ ದಶಕದ ಪ್ರಾರಂಭದಲ್ಲಿ ರಾಜಮನೆತನವು ಯುವ ರಾಜಕುಮಾರರಿಗೆ ತರಬೇತಿ ನೀಡಲು ಬ್ರಿಟಿಷ್ ಜಿಮ್ನಾಸ್ಟ್‌ಗಳನ್ನು ನೇಮಿಸಿಕೊಂಡಿತ್ತಲ್ಲದೆ, 1930ರ ದಶಕದಲ್ಲಿ ಶ್ರೀಕೃಷ್ಣಮಾಚಾರ್ಯರು ಮೈಸೂರಿನ ಅರಮನೆಯಲ್ಲಿ ರಾಜಮನೆತನದವರಿಗೆ ಯೋಗ ಕಲಿಸಲು ಆಗಮಿಸಿದಾಗ ಅವರ ಶಾಲಾ ಕೊಠಡಿಯು ಜಿಮ್ನಾಷಿಯಂ ಕೊಠಡಿಯಾಗಿದ್ದು, ಹಗ್ಗಗಳಿಂದ ತುಂಬಿತ್ತು ಎನ್ನಲಾಗಿದೆ. ಈ ಕೊಠಡಿಯಲ್ಲಿ ದೊರೆತ ಜಿಮ್ನಾಷಿಯಂ ಕೈಪಿಡಿ ಹಾಗೂ ಮುಂದೆ ದೊರೆತ "ಶ್ರೀತತ್ತ್ವನಿಧಿ" ಕೃತಿಯ ಆಧಾರದ ಮೇಲೆ ಶ್ರೀಕೃಷ್ಣಮಾಚಾರ್ಯರು ಆಧುನಿಕ ವಿನ್ಯಾಸ ಪದ್ಧತಿಯ ಯೋಗಮಾರ್ಗವನ್ನು ಆವಿಷ್ಕರಿಸಿದರೆಂದು ನಾರ್ಮನ್ ಸ್ಜೋಮನ್ ಉಲ್ಲೇಖಿಸಿದ್ದಾರೆ.

ನಾರ್ಮನ್ ಸ್ಜೋಮನ್ ಬರೆದಿರುವ "ಮೈಸೂರು ಅರಮನೆಯ ಯೋಗ ಸಂಪ್ರದಾಯ" ಕೃತಿ 1996ರಲ್ಲಿ ಪ್ರಕಟಗೊಂಡಿದ್ದು, ಇದರಲ್ಲಿ ಶ್ರೀತತ್ವನಿಧಿಯ ಯೋಗ ಅಂಶಗಳು, ಜಿಮ್ನಾಷಿಯಂ ಕೈಪಿಡಿಯ ವಿಚಾರಗಳು ಅಲ್ಲದೆ ಗುಜರಾತಿನಿಂದ ವಲಸೆ ಬಂದ ಚತುರ್ವೇದಿ ಅಗ್ನಿಹೋತ್ರಿ ಜೇಷ್ಠಮಲ್ಲ ಮೋಡ ಬ್ರಾಹ್ಮಣರೆಂದು ಕರೆಯಲ್ಪಟ್ಟ ಜೇಷ್ಠಿ ಜನಾಂಗದ ವಜ್ರಮುಷ್ಠಿ ಕಾಳಗದ ಪ್ರಸ್ತಾಪವೂ ಇದೆ.

ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರ ಶ್ರೀ ತತ್ತ್ವನಿಧಿಯಲ್ಲಿ ಯೋಗದ ಪ್ರಸ್ತಾಪ



ಮುಮ್ಮಡಿ ಕೃಷ್ಣರಾಜ ಒಡೆಯರ

ನಾರ್ಮನ್ ಸ್ಜೋಮನ್ ಹೇಳುವಂತೆ ಅರಮನೆಯ ಗ್ರಂಥಾಲಯವು ಹಠಯೋಗ ಸೇರಿದಂತೆ ಸ್ಥಳೀಯ ಅಭ್ಯಾಸಗಳ ಬಗ್ಗೆ ಹಲವಾರು ಹಸ್ತಪ್ರತಿಗಳನ್ನು ಹೊಂದಿದ್ದು, ಇದನ್ನು ಬಿಡುವಿನ ವೇಳೆಯಲ್ಲಿ ಕೃಷ್ಣಮಾಚಾರ್ಯರು ಅಧ್ಯಯನ ಮಾಡುತ್ತಿದ್ದರಂತೆ. ಈ ಅಧ್ಯಯನಗಳಲ್ಲಿ ಅವರ ಮೇಲೆ ಪ್ರಭಾವಬೀರಿದ ಹಾಗೂ ಕುತೂಹಲ ಮೂಡಿಸಿದ ಮತ್ತೊಂದು ಗ್ರಂಥವೆಂದರೆ ಅದು ಮುಮ್ಮಡಿ ಕೃಷ್ಣರಾಜ ಒಡೆಯರು ರಚಿಸಿದ "ಶ್ರೀತತ್ತ್ವನಿಧಿ". ಈ ಶ್ರೀತತ್ತ್ವನಿಧಿಯ ಬಗ್ಗೆ ಅರಿಯುವ ಮುನ್ನ ಮುಮ್ಮಡಿ ಕೃಷ್ಣರಾಜ ಒಡೆಯರ ಬಗ್ಗೆ ಅರಿಯುವುದು ಅಗತ್ಯ.


1794ರ ಜುಲೈ 14ರಂದು ಚಾಮರಾಜ ಒಡೆಯರ್ ಮತ್ತು ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಸುಪುತ್ರರಾಗಿ ಜನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ 22ನೇ ಮಹಾರಾಜರು. ಅಧಿಕಾರ ಸ್ವೀಕರಿಸಿದಾಗ ಅವರಿಗೆ ಕೇವಲ 5 ವರ್ಷ. ಪೂರ್ಣಯ್ಯನವರು ಇವರ ದಿವಾನರಾಗಿದ್ದರು.

ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಪಾತ್ರ ಅಪಾರ. ಸಂಸ್ಕೃತ, ಕನ್ನಡ, ತಮಿಳು, ಇಂಗ್ಲಿಷ್, ತೆಲುಗು ಹಾಗೂ ಉರ್ದು ಸೇರಿದಂತೆ ಬಹುಭಾಷಾ ಪಾರಂಗತ ದೊರೆ ಎನಿಸಿದ್ದರು. ತಮ್ಮ ಅವಧಿಯಲ್ಲಿ ಕಲೆಗಳ ಬೆಳವಣಿಗೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ ಕಲಾ ಪೋಷಕರಿವರು. ಸಂಗೀತ ಬಲ್ಲ ಒಡೆಯರು ವೀಣೆಯನ್ನು ಸಹ ನುಡಿಸುತ್ತಿದ್ದರು. ಗಂಜೀಫಾ ಆಟವನ್ನು ಪುನರುಜ್ಜೀವನಗೊಳಿಸಿದ ಕ್ರೀಡಾಪ್ರಿಯರಿವರು. ಸ್ವತಃ ಬರಹಗಾರರಾಗಿದ್ದ ಮುಮ್ಮಡಿಯವರು 50ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದು, ಇವರ ಆಸ್ಥಾನದಲ್ಲಿ ವಿದ್ವಾಂಸ ಬಸವಪ್ಪ ಶಾಸ್ತ್ರಿ ಸೇರಿದಂತೆ ವಿದ್ವಾಂಸರ ಬಳಗವೇ ಇವರಲ್ಲಿ ಆಶ್ರಯ ಪಡೆದಿತ್ತು. ಹೀಗಾಗಿಯೇ ಇವರನ್ನು ಕನ್ನಡದ ಭೋಜರಾಜ ಎಂದು ಕರೆಯಲಾಗುತ್ತಿತ್ತು.

ಶ್ರೀತತ್ತ್ವನಿಧಿಯ ಕೌತುಕ ನಿಧಿಯಲ್ಲಿ ಬರುವ ಹಠ ಯೋಗದ 122 ಆಸನಭಂಗಿಗಳ ಚಿತ್ರ ಮತ್ತು ವಿವರಣೆ ಮೂಡಿಬಂದಿದ್ದು, ಇದರಿಂದ ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಯೋಗದ ಬಗ್ಗೆ ಜ್ಞಾನವನ್ನು ಹೊಂದಿದ್ದು, ಸ್ವತಃ ಅವರೇ ಯೋಗಾಭ್ಯಾಸಿಗಳಾಗಿರಬಹುದೆಂದು ವಿಶ್ಲೇಷಿಸಲಾಗಿದೆ. ಇವುಗಳಲ್ಲಿ ಕೆಲವು ಭಂಗಿಗಳು ಹ್ಯಾಂಡ್‌ಸ್ಟ್ಯಾಂಡ್‌ಗಳು, ಹಿಮ್ಮುಖ ಬಾಗಿದ ಆಸನಗಳು, ಪಾದದ ಹಿಂದೆ ತಲೆ ಬಾಗಿರುವ ಭಂಗಿಗಳು ಮತ್ತು ಹಗ್ಗದ ವ್ಯಾಯಾಮಗಳು ಆಧುನಿಕ ಅಭ್ಯಾಸಕಾರರಿಗೂ ಪರಿಚಿತವಾದವುಗಳೇ ಆಗಿವೆ.


ಮೈಸೂರು ಅರಮನೆಯಲ್ಲಿ ಯೋಗ ಕಲಿಸುವಾಗ ಪ್ರಾಚೀನ ಯೋಗ ಪದ್ಧತಿಯನ್ನು ಮತ್ತಷ್ಟು ಪರಿಷ್ಕರಿಸಿ ಅದನ್ನು ವ್ಯಾಯಾಮವಾಗಿ ರಚಿಸಲು ಹೊಸದಾದ ವಿನ್ಯಾಸ ಮಾರ್ಗವನ್ನು ರೂಪಿಸಲು ಕೃಷ್ಣಮಾಚಾರ್ಯರಿಗೆ ಈ ಕೃತಿ ನೆರವಿಗೆ ಬಂದಿತೆಂಬುದನ್ನು ಸ್ವತಃ ಕೃಷ್ಣಮಾಚಾರ್ಯರೇ ತಮ್ಮ "ಯೋಗ ಮಕರಂದ" ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಆಧುನಿಕ ಯೋಗದ ಪಿತಾಮಹ ಕೃಷ್ಣಮಾಚಾರ್ಯರು



ಮಂದಗತಿಯಲ್ಲಿ ಸಾಗುತ್ತಿದ್ದ ಪ್ರಾಚೀನ ಪರಂಪರೆಯ ಯೋಗಕ್ಕೆ ಆಧುನಿಕ ಸ್ಪರ್ಶ ನೀಡಿದವರೇ ಕೃಷ್ಣಮಾಚಾರ್ಯರು. ಅದಕ್ಕಾಗಿಯೇ ವಿನ್ಯಾಸ ಕ್ರಮವನ್ನು ರೂಪಿಸಿ ಅದನ್ನು ಪ್ರಯೋಗಿಸಿ ಯಶಸ್ಸು ಕಂಡರು. ಈ ಕಾರಣದಿಂದಾಗಿಯೇ ಕೃಷ್ಣಮಾಚಾರ್ಯರನ್ನು "ಆಧುನಿಕ ಯೋಗದ ಪಿತಾಮಹ" ಎಂದು ಕರೆಯಲಾಗಿದೆ. ಕೃಷ್ಣಮಾಚಾರ್ಯರು ತಮ್ಮ ಶಿಷ್ಯ ವರ್ಗಕ್ಕೆಲ್ಲಾ ಈ ವಿನ್ಯಾಸ ಕ್ರಮವನ್ನೇ ಬೋಧಿಸಿದರೂ ಅದರಲ್ಲೂ ಮಾರ್ಪಾಡು ತಂದು ಯಶಸ್ವಿಯಾಗಿ ಜಗದಗಲ ವ್ಯಾಪಿಸಿದವರು ಬಿ.ಕೆ.ಎಸ್.ಐಯ್ಯಂಗಾರ್ ಅವರು.

ಐಯ್ಯಂಗಾರ್ ಯೋಗ



ತಮ್ಮ ಭಾವ ಹಾಗೂ ಯೋಗಗುರುಗಳೂ ಆದ ಕೃಷ್ಣಮಾಚಾರ್ಯರು ಮದ್ರಾಸಿಗೆ ಹೋಗಿ ನೆಲೆಸಿದ ಸಂದರ್ಭ ಬಿಕೆಎಸ್ ಐಯ್ಯಂಗಾರರು ಪುಣೆಯನ್ನು ತಮ್ಮ ಯೋಗದ ಕಾರ್ಯಕ್ಷೇತ್ರವಾಗಿ ಮಾಡಿಕೊಂಡಿದ್ದೇ ಅಲ್ಲದೆ ತಮ್ಮ ಗುರುಗಳಾದ ಕೃಷ್ಣಮಾಚಾರ್ಯರ ವಿನ್ಯಾಸ ಕ್ರಮವನ್ನು ಇನ್ನಷ್ಟು ಬದಲಾವಣೆಯೊಂದಿಗೆ ತಮ್ಮದೇ ಆದ ಹೊಸ ಕ್ರಮವನ್ನು ಆವಿಷ್ಕಾರ ಮಾಡಿದರು. ಆಸನಗಳ ಅಭ್ಯಾಸ ಸರಳೀಕರಿಸಲು ಹಗ್ಗ, ಮಂಚ, ಮರದ ಇಟ್ಟಿಗೆಗಳು ಮುಂತಾದ ಸಾಧನ ಸಲಕರಣೆಗಳನ್ನು ಬಳಸಿ ವಿನ್ಯಾಸಗೊಳಿಸಿದ "ಐಯ್ಯಂಗಾರ್ ಯೋಗ" ಎಂಬ ಹೊಸದೊಂದು ಕ್ರಮಕ್ಕೆ ಕಾರಣೀಭೂತವಾಯಿತು.

ಪಟ್ಟಾಭಿಜೋಯಿಸರ ಹಾಗೂ ಶರತ್ ಜೋಯಿಸರ "ವಿನ್ಯಾಸ ಯೋಗ"



ಆದರೆ ಮೈಸೂರಿನಲ್ಲಿ ಕೃಷ್ಣಮಾಚಾರ್ಯರ ಮೂಲ ವಿನ್ಯಾಸ ಕ್ರಮಕ್ಕೆ ಚ್ಯುತಿ ತಾರದೇ ಅದನ್ನೇ ನಾವೀನ್ಯರೂಪದಲ್ಲಿ ಪ್ರಚುರಪಡಿಸಿದ ಕೀರ್ತಿ ಪಟ್ಟಾಭಿ ಜೋಯಿಸರಿಗೆ ಸಲ್ಲುತ್ತದೆ. ಇಂದು ಅವರಿಲ್ಲವಾದರೂ ಅದೇ ಹಾದಿಯಲ್ಲಿ ಸಾಗುತ್ತಿರುವ ಅವರ ಮೊಮ್ಮಗ ಶರತ್ ಜೋಯಿಸ್ ವಿದೇಶೀಯರ ಮೆಚ್ಚಿನ ಗುರುಗಳಾಗಿ ಹೊರಹೊಮ್ಮಿದ್ದಾರೆ. ಇಂದು ಮೈಸೂರಿನ ಇನ್‌ಫೋಸಿಸ್ ಬಳಿ "ಶರತ್ ಯೋಗ ಸೆಂಟರ್" ಸ್ಥಾಪಿಸಿ ಏಕಕಾಲದಲ್ಲಿ 150ಕ್ಕೂ ಹೆಚ್ಚು ಮಂದಿ ಯೋಗ ಮಾಡಲು ಅನುವಾಗುವಂತೆ ತಮ್ಮ ಹೊಸ ಯೋಗಕೇಂದ್ರವನ್ನು ರೂಪಿಸಿದ್ದಾರೆ. ಸ್ವದೇಶಿ ಹಾಗೂ ವಿದೇಶೀಯ ವಿದ್ಯಾರ್ಥಿಗಳೆಂಬ ತಾರತಮ್ಯವಿಲ್ಲದೆ ಸರ್ವರಿಗೂ ಅವಕಾಶ ನೀಡಿರುವುದು ಶರತ್ ಜೋಯಿಸರ ವೈಶಿಷ್ಟ್ಯವಾಗಿದೆ. ಇಂದಿಗೂ ವಿದೇಶೀಯರು ಆನ್‌ಲೈನ್ ಮೂಲಕ ಮುಂಚಿತವಾಗಿಯೇ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಇವರ ಕೇಂದ್ರದಲ್ಲಿ ಯೋಗ ಕಲಿಯಲು ಬರುತ್ತಾರೆಂದರೆ ಶರತ್ ಜೋಯಿಸರ ವಿನ್ಯಾಸ ಕ್ರಮದ ಮಹತ್ವವನ್ನು ಅರ್ಥೈಸಿಕೊಳ್ಳಬಹುದಾಗಿದೆ.

ಭರತ್ ಶೆಟ್ಟಿಯವರ "ಐಯ್ಯಂಗಾರ್ ಯೋಗ"

ವಿದೇಶೀಯರ ಮತ್ತೊಬ್ಬ ಮೆಚ್ಚಿನ ಯೋಗ ಗುರುಗಳೆಂದರೆ ಯೋಗ ಇಂಡಿಯಾದ ಭರತ್ ಶೆಟ್ಟಿ. ಬಿಕೆಎಸ್ ಐಯ್ಯಂಗಾರರ ಮೆಚ್ಚಿನ ಶಿಷ್ಯರು ಎಂದೇ ಪರಿಗಣಿಸಲ್ಪಟ್ಟ ಭರತ್ ಶೆಟ್ಟಿ ಐಯ್ಯಂಗಾರ್ ಯೋಗವನ್ನು ಪ್ರಚಲಿತಗೊಳಿಸಿದವರು. ಇವರ ಕೇಂದ್ರದಲ್ಲಿ ಯೋಗ ಶಿಕ್ಷಕರ ತರಬೇತಿ ಕೂಡ ನಡೆಯುತ್ತಿರುವುದು ವಿಶೇಷ. ಬಿ.ಕೆ.ಎಸ್.ಐಯ್ಯಂಗಾರ್ ಅವರು ಮೈಸೂರಿಗೆ ಬಂದರೆ ಇವರ ಮನೆಯಲ್ಲಿಯೇ ವಾಸ್ತವ್ಯ ಹೂಡಿ ತಮ್ಮ ಶಿಷ್ಯನೊಂದಿಗೆ ಕಾಲ ಕಳೆಯಲು ಬಯಸುತ್ತಿದ್ದರಂತೆ. ಇದರಲ್ಲೇ ಭರತ್ ಶೆಟ್ಟಿ ಅವರ ಶ್ರೇಷ್ಠತೆ ವೇದ್ಯವಾಗುತ್ತದೆ.



ಗಜಾಸನ

ವಿದೇಶಿಯರ ಸ್ವರ್ಗ ಗೋಕುಲಂ



ಪಟ್ಟಾಭಿ ಜೋಯಿಸರ ದೆಸೆಯಿಂದಾಗಿ ಮೈಸೂರಿನ ಗೋಕುಲಂ ವಿದೇಶಿಯರ ಸ್ವರ್ಗವಾಗಿ ರೂಪುಗೊಂಡಿದೆ. ಇಲ್ಲಿ ನಾನಾ ಯೋಗ ಕೇಂದ್ರಗಳು, ಆಯುರ್ವೇದ ಕೇಂದ್ರಗಳು ತಲೆಯೆತ್ತಿವೆ. ಪ್ರಮುಖ ವಾಣಿಜ್ಯ ಕೇಂದ್ರವಾಗಿಯೂ ಪರಿವರ್ತಿತಗೊಂಡಿರುವುದು ವಿಶೇಷ.

ಇನ್ನು ಇದೇ ರೀತಿ ಶಶಿಕುಮಾರ್ ಅವರ ನಿರ್ವಾಣ ಯೋಗಶಾಲೆ, ವಿನಯ್ ಕುಮಾರ್ ಅವರ ಪ್ರಾಣವಶ್ಯ ಯೋಗಕೇಂದ್ರ, ವಿಜಯ್ ಅವರ ಅಷ್ಟಾಂಗ ಸಾಧನ ಯೋಗಶಾಲೆ, ಶೇಷಾದ್ರಿ ಅವರ ಪಾತಂಜಲ ಅಷ್ಟಾಂಗ ಯೋಗ ವಿನ್ಯಾಸ ಕೇಂದ್ರ, ಶ್ರೀನಾಥ್ ಅವರ ಯೋಗ ವಿತ್ ಶ್ರೀನಾಥ್ ಮುಂತಾದ ಕೇಂದ್ರಗಳು ಸಕ್ರಿಯವಾಗಿ ವಿದೇಶೀಯರಿಗಾಗಿಯೇ ರೂಪಿಸಲ್ಪಟ್ಟ ಗೋಕುಲಂನ ಯಶಸ್ವಿ ಯೋಗ ಕೇಂದ್ರಗಳೆನಿಸಿವೆ. ಈ ಕೇಂದ್ರಗಳಲ್ಲಿ ಹೆಚ್ಚಾಗಿ ವಿನ್ಯಾಸವಲ್ಲದೇ ಹಠಯೋಗ ಮುಂತಾದ ಕ್ರಮಗಳು ಚಾಲ್ತಿಯಲ್ಲಿವೆ.

ಮಾರುತಿ ಯೋಗ ಶಿಕ್ಷಣ ಕೇಂದ್ರ

ಇನ್ನು ವಿನ್ಯಾಸ ಹಾಗೂ ಐಯ್ಯಂಗಾರ್ ಕ್ರಮಕ್ಕೆ ಹೊರತಾಗಿ ಸ್ಥಳೀಯ ಪರಂಪರೆಗೆ ಹೆಸರಾದ ಯೋಗ ಕೇಂದ್ರಗಳ ಪೈಕಿ ಮುಂಚೂಣಿಯಲ್ಲಿರುವುದು 36 ವರ್ಷ ಪೂರೈಸಿದ ಮಾರುತಿ ಯೋಗ ಶಿಕ್ಷಣ ಕೇಂದ್ರ ಇಂದಿಗೂ ತನ್ನ ಕಾರ್ಯಾಚರಿಸುತ್ತಿರುವುದು ಮೈಸೂರಿನ ಹೆಮ್ಮೆಯೇ ಸರಿ. ಇದರ ರೂವಾರಿ ಜಲೇಂದ್ರಕುಮಾರ್ ಅವರು ಕಾರ್ಖಾನೆಯೊಂದರ ಉದ್ಯೋಗಿಯಾಗಿದ್ದುಕೊಂಡು ತಮ್ಮ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಕಥೆಯೇ ರೋಚಕತೆಯುಳ್ಳದ್ದು. ಈ ಕೇಂದ್ರದಿಂದ ಹೊರಹೊಮ್ಮಿರುವ ಯೋಗ ಗುರುಗಳು ದೇಶ ವಿದೇಶಗಳಲ್ಲಿ ಸೇವೆಸಲ್ಲಿಸುತ್ತ ಮಾರುತಿ ಯೋಗ ಕೇಂದ್ರದ ಕೀರ್ತಿ ಪತಾಕೆಯನ್ನು ಬೆಳಗಿಸುತ್ತಿದ್ದಾರೆ.

ವಿವೇಕಾನಂದ ಯೋಗ ಸಂಶೋಧನಾ ಕೇಂದ್ರ



ವಿಜಯನಗರದಲ್ಲಿರುವ ವಿವೇಕಾನಂದ ಸಂಶೋಧನಾ ಯೋಗ ಕೇಂದ್ರದ ಡಾ. ಪಿ.ಎನ್.ಗಣೇಶ್ ಕುಮಾರ್ ಅವರ ಯೋಗ ಕೇಂದ್ರ 32 ವರ್ಷಗಳನ್ನು ಪೂರೈಸಿ ಅನೇಕ ದಾಖಲಾರ್ಹ ಕೆಲಸಗಳನ್ನೇ ಮಾಡಿದೆ. ಗಿನ್ನೆಸ್ ದಾಖಲೆಯ ಖುಷಿ ಕೂಡ ಇಲ್ಲಿಯ ವಿದ್ಯಾರ್ಥಿನಿಯೇ. ಇಲ್ಲಿಯ ಸರ್ಟಿಫಿಕೇಟ್ ಕೋರ್ಸ್‌ಗಳು ಅನೇಕ ಯೋಗ ಶಿಕ್ಷಕರನ್ನು ರೂಪಿಸಿ ಅವರ ಬಾಳನ್ನು ಹಸನುಗೊಳಿಸಿವೆ. ಇದರಲ್ಲಿ ಡಾ.ಗಣೇಶ್ ಕುಮಾರ್ ಅವರ ಅಪಾರ ಪರಿಶ್ರಮವನ್ನು ಅಲ್ಲಗಳೆಯುವಂತೆಯೇ ಇಲ್ಲ ಒಂದು ಮಿನಿ ವಿಶ್ವವಿದ್ಯಾನಿಲಯದೋಪಾದಿಯಲ್ಲಿ ಇಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ. ಸ್ವತಃ ಗಣೇಶ್ ಕುಮಾರ್ ಅವರೇ ಜಿಗಣಿಯ ಎಸ್. ವ್ಯಾಸ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಪೂರೈಸಿ ಗೌರವ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಯೋಗ ಚಿಕಿತ್ಸೆ

ಅನೇಕ ಕಾಯಿಲೆಗಳಿಗೆ ಯೋಗದಲ್ಲಿ ಪರಿಹಾರವಿದೆ ಎಂಬುದನ್ನು ತಮ್ಮ ಸ್ವಾನುಭವದಿಂದ ಕಂಡುಕೊಂಡವರು ಹಲವಾರು ಯೋಗಾಚಾರ್ಯರು. ಈ ನಿಟ್ಟಿನಲ್ಲಿ ಅಪಾರ ಯಶಸ್ಸು ಕಂಡುಕೊಂಡಿರುವ ಯೋಗ ಚಿಕಿತ್ಸಕರನ್ನೊಳಗೊಂಡಿರುವುದು ಮೈಸೂರಿನ ಹಿರಿಮೆಯೇ ಸರಿ.

ಡಾ.ಎ.ಆರ್.ಸೀತಾರಾಂ

ಬೋಗಾದಿಯ ಬಳಿ ಇರುವ ತಮ್ಮ ಪರಮಹಂಸ ಯೋಗ ಚಿಕಿತ್ಸಾ ಕೇಂದ್ರದಲ್ಲಿ ದೈಹಿಕವಲ್ಲದೆ ಅನೇಕ ಮನೋ ಸಂಬಂಧಿತ ಕಾಯಿಲೆಗಳಿಗೆ ತಮ್ಮ ಕೌನ್ಸಿಲಿಂಗ್ ಹಾಗೂ ಯೋಗದ ಕ್ರಮ ಬಳಸಿ ಪರಿಹಾರ ಕಂಡುಕೊಂಡವರು ಡಾ.ಎ.ಆರ್.ಸೀತಾರಾಂ ಅವರು. ಖ್ಯಾತ ಚಿತ್ರನಟ ವಿಷ್ಣುವರ್ಧನ್ ಖಿನ್ನತೆಗೆ ಒಳಗಾಗಿದ್ದ ಸಂದರ್ಭದಲ್ಲಿ ಕೆಲ ತಿಂಗಳುಗಳ ಕಾಲ ಅವರಿಗೆ ಯೋಗಚಿಕಿತ್ಸೆ ನೀಡಿ ಗುಣಪಡಿಸಿದ ಹೆಗ್ಗಳಿಕೆ ಕೂಡ ಇವರದ್ದಾಗಿದೆ.

ಡಾ.ಎ.ಎಸ್.ಚಂದ್ರಶೇಖರ್ ದಂಪತಿಗಳು

ಆಯುರ್ವೇದ ವೈದ್ಯರಾಗಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡುವ ವೈದ್ಯರೆಂದೇ ಜನಜನಿತರಾದ ವಿದ್ಯಾರಣ್ಯಪುರಂನ ಡಾ.ಚಂದ್ರಶೇಖರ್ ಹಾಗೂ ಡಾ.ಜಯಶ್ರೀ ದಂಪತಿಗಳು ಸುಮಾರು 50 ವರ್ಷಗಳಿಗೂ ಮೀರಿ ಯೋಗಚಿಕಿತ್ಸೆಯಲ್ಲಿ ನಿರತರಾಗಿರುವುದು ವಿಶೇಷವೇ ಸರಿ. ಆರೋಗ್ಯದ ಸಮಸ್ಯೆಗಳಿಗೆ, ಸ್ಥೂಲಕಾಯ ನಿವಾರಣೆಗೆ ಪ್ರಾಕೃತಿಕವಾಗಿ ಚಿಕಿತ್ಸಾ ಪದ್ಧತಿಯನ್ನು ರೂಪಿಸಿ ಸೇವಾ ಮನೋಭಾವದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಈ ದಂಪತಿಗಳ ಶ್ರೇಷ್ಠತೆಗೆ ಸಾಕ್ಷಿಯಾಗಿದೆ.

ಸುಧೇಶ್ ಚಂದ್ರ

ಕುವೆಂಪುನಗರದಲ್ಲಿರುವ ಉಪನಿಷತ್ ಯೋಗಕೇಂದ್ರದ ಸುಧೇಶ್ ಚಂದ್ರ ಅವರು ಅನೇಕ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳಿಗೆ ಯೋಗ ಚಿಕಿತ್ಸೆ ನೀಡುತ್ತ ಹೆಸರುವಾಸಿಯಾಗಿದ್ದಾರೆ. ಯೋಗವನ್ನು ವೈಜ್ಞಾನಿಕವಾಗಿ ಸಂಶೋಧನೆಗೊಳಪಡಿಸುವಲ್ಲಿ ಕಾರ್ಯನಿರತರಾಗಿರುವುದು ಇವರ ವಿಭಿನ್ನ ಕಾರ್ಯತತ್ಪರತೆಗೆ ಸಾಕ್ಷಿಯಾಗಿದೆ. ಅನೇಕ ವೈದ್ಯರುಗಳೇ ಇವರ ಬಳಿ ಚಿಕಿತ್ಸೆಗಾಗಿ ಬರುತ್ತಾರೆಂದರೆ ನೀವೇ ಇವರ ಯೋಗಚಿಕಿತ್ಸೆ ಮಹತ್ವದ ಬಗೆಗೆ ಅರ್ಥಮಾಡಿಕೊಳ್ಳಬಹುದು.

ಎಂ.ಸಿ.ಜಯರಾಂ

ಮೈಸೂರಿನ ಕನಕದಾಸನಗರದ ಬಳಿ ಇರುವ ವೆಲ್‌ನೆಸ್ ಸೆಂಟರ್‌ನ ಜಯರಾಂ ಕೂಡ ವಿಶಿಷ್ಟ ಯೋಗ ಚಿಕಿತ್ಸಕರಾಗಿ ಸೇವೆಸಲ್ಲಿಸುತ್ತಿರುವುದು ವಿಶೇಷವೇ ಸರಿ. ಇಲ್ಲಿ ಒಂದೇ ಸೂರಿನಡಿಯಲ್ಲಿ ಯೋಗ, ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಅಂಗಮರ್ದನ, ಆಯಸ್ಕಾಂತ ಚಿಕಿತ್ಸೆ ಮುಂತಾದ ಪ್ರಾಕೃತಿಕ ಪದ್ಧತಿಗಳನ್ನು ಸಮ್ಮಿಳಿತಗೊಳಿಸಿ ಚಿಕಿತ್ಸೆ ನೀಡುತ್ತಿರುವುದು ವಿಶೇಷವಾಗಿದೆ.

ಇಂದು ಮೈಸೂರಿನಲ್ಲಿ ಯೋಗ ಇನ್ನೂ ಹತ್ತು ಹಲವಾರು ರೀತಿಗಳಲ್ಲಿ ವೈವಿಧ್ಯಮಯವಾಗಿ ಕಂಗೊಳಿಸುತ್ತಿದೆ. ಅನೇಕ ಯೋಗ ಶಿಕ್ಷಕರು ತಮ್ಮದೇ ಆದ ವೈಶಿಷ್ಟ್ಯಗಳಿಂದ ಬೆಳಗುತ್ತಿದ್ದಾರೆ. ಯೋಗದ ನಡಿಗೆಯನ್ನೇ ಆವಿಷ್ಕರಿಸಿದ ಡಾ.ರಾಘವೇಂದ್ರ ಪೈ, ವೈಜ್ಞಾನಿಕ ಪ್ರಾಣಾಯಾಮಗಳೆಂಬ ಹೊಸ ಆಯಾಮವನ್ನೇ ನೀಡಿದ ಡಾ.ದೇವಕಿ ಮಾಧವ್, ನೀರಿನಲ್ಲೂ ತೇಲಿ ಯೋಗಾಸನಗಳನ್ನು ಲೀಲಾಜಾಲವಾಗಿ ಪ್ರದರ್ಶಿಸಿದ ಜಲಯೋಗಿ ರವಿ, ನಾದಯೋಗದಲ್ಲಿಯೂ ಮಾನಸಿಕ ಉನ್ನತಿಯನ್ನು ಸಾಧಿಸಬಹುದು ಎಂದು ನಾದಯೋಗ ಕೇಂದ್ರವನ್ನೇ ತೆರೆದಿರುವ ಯೋಗಿ ಅಖಿಲಾಂಕ, ಹಠಯೋಗವನ್ನೇ ತಮ್ಮ ಪ್ರಕಾರವಾಗಿ ಮಾಡಿಕೊಂಡ ಹಠಯೋಗಿ ಪ್ರವೀಣ್ ಕುಮಾರ್, ಷಟ್ಕರ್ಮ ಕ್ರಿಯೆಗಳಲ್ಲಿ ಸಾಧನೆಗೈದು ಅದರಲ್ಲಿ ಪರಿಣತಿಗೈದಿರುವ ಬ್ರಹ್ಮರ್ಷಿ ನಾರಾಯಣ ಗುರು ಯೋಗಮಂದಿರದ ಕ್ರಿಯಾಯೋಗಿ ಬಿ. ಶಾಂತಾರಾಂ, ಧ್ಯಾನದ ಮೂಲಕ ದೈಹಿಕ, ಮಾನಸಿಕ ಹಾಗೂ ಆತ್ಮೋನ್ನತಿಯನ್ನು ಸಾಧಿಸಬಹುದು ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿರುವ ಸುಚರಿತ ಮಾತಾಜಿಯವರ ಭಾವಾತೀತ ಧ್ಯಾನ ಕೇಂದ್ರ, ಅನೇಕ ಓಷೋ ಕೇಂದ್ರಗಳು ತಮ್ಮ ಕಾರ್ಯಾಚರಿಸುತ್ತ ಮೈಸೂರಿನ ಹಿರಿಮೆ ಹಾಗೂ ವೈವಿಧ್ಯತೆಯನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿವೆ. ಒಟ್ಟಾರೆ ಮೈಸೂರು ಯೋಗಾಸಕ್ತರ ಸ್ವರ್ಗವಾಗಿ ರೂಪುಗೊಂಡಿರುವುದು ನಮ್ಮ ನಿಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯೇ ಸರಿ.



-ಎನ್. ಅನಂತ್, ಯೋಗ ಶಿಕ್ಷಕರು, ಮೈಸೂರು. ಮೊ: 9743769403

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಿಂದಿನ ಪ್ರಧಾನಿಗಳದ್ದು ಅಧಿಕಾರ ರಾಜಕಾರಣ; ಪ್ರಧಾನಿ ಮೋದಿ ಅವರದ್ದು ಜನಹಿತ ರಾಜಕಾರಣ

●ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಣ್ಣನೆ ●ಕರ್ನಾಟಕ ಕಂಡರೆ ಪ್ರಧಾನಿ ಮೋದಿ ಅವರಿಗೆ ಪ್ರೀತಿ



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಮೈಸೂರು ಮತ್ತು ನಾಗನಹಳ್ಳಿ ನೂತನ ಕೋಚಿಂಗ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಆಯುಷ್ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೈಸೂರು ಪೇಟ ತೊಡಿಸಿ, ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಶ್, ಸಚಿವ ಡಾ.ಕೆ.ಸುಧಾಕರ್, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷರ್ಧನ್ ಇನ್ನಿತರರಿದ್ದಾರೆ.

ಮೈಸೂರು,ಜೂ.20–ಹಿಂದಿನ ಪ್ರಧಾನಿಗಳು ಅಧಿಕಾರ ರಾಜಕಾರಣ ಮಾಡುತ್ತಿದ್ದರು. ಆದರೆ ಪ್ರಧಾನಿ ಮೋದಿ ಅವರು ಜನಹಿತ ರಾಜಕಾರಣ ಮಾಡುತ್ತಿದ್ದಾರೆ. ಸೈದ್ಧಾಂತಿಕ, ಅಭಿವೃದ್ಧಿ ಹಾಗೂ ಮಾನವೀಯ ನೆಲೆಗಟ್ಟಿನಲ್ಲಿ ಅವರು ರಾಜಕಾರಣ ಮಾಡುವ ಮೂಲಕ ದೇಶದ ಜನಸಾಮಾನ್ಯರ ಜೀವನ ಮೌಲ್ಯ ವೃದ್ಧಿಗೆ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಸಂಜೆ ಏರ್ಪಡಿಸಲಾಗಿದ್ದ ಮೈಸೂರು ಮತ್ತು ನಾಗನಹಳ್ಳಿ ನೂತನ ಕೋಚಿಂಗ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಶಂಕುಸ್ಥಾಪನೆ ಹಾಗೂ ಆಯುಷ್ ಸೆಂಟರ್ ಆಫ್ ಎಕ್ಸಲೆನ್ಸ್ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈಸೂರೆಂದರೆ ಮೋದಿ ಅವರಿಗೆ ಬಹಳ ಪ್ರೀತಿ. ಯೋಗ ತವರೂರು ಮೈಸೂರಿನಲ್ಲಿ ಅಂತರರಾಷ್ಟ್ರೀಯ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳುತ್ತಲೇ ಇದ್ದರು. ಕೆಲವು ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ. ಈ ಬಾರಿಯೂ ಮಳೆ ಬರಬಹುದೆಂದು ಅಧಿಕಾರಿಗಳು ಕಾರಣ ನೀಡಿದಾಗ, ಮಳೆ ಬಂದರೂ ಪರವಾಗಿಲ್ಲ. ನಾನು ಮೈಸೂರಿಗೆ ಬರುತ್ತೇನೆ ಎಂದು ಮೋದಿ ಅವರು ಬಂದಿದ್ದಾರೆ ಎಂದರು.

ದೇಶದ ಪ್ರಧಾನಿಗಳಲ್ಲೇ ಅತೀ ಜನರ ಪ್ರೀತಿ ಗಳಿಸಿರುವ ಏಕೈಕ ಪ್ರಧಾನಿ ಮೋದಿ ಅವರಾಗಿದ್ದು, ಗುಜರಾತ್‌ನಲ್ಲಿ ಅವರು ನಡೆಸಿದ ಅಭಿವೃದ್ಧಿ ಆಡಳಿತ ನೋಡಿ ಜನರು ಅವರನ್ನು ಪ್ರಧಾನಿ ಮಾಡಿದ್ದಾರೆ. ಗುಜರಾತ್‌ನ ಮುಖ್ಯಮಂತ್ರಿ ದೇಶದ ಪ್ರಧಾನಮಂತ್ರಿಯಾಗಿ ಒಟ್ಟು 20 ವರ್ಷ ಅಧಿಕಾರ ನಡೆಸಿರುವ ಮೋದಿ ಅವರು ಬಡಜನರ ಅಭಿವೃದ್ಧಿ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ ಎಂದರು.

ಅನುಭವದ ಯೋಜನೆ: ಮೋದಿ ಅವರು ಜೀವನದಲ್ಲಿ ತಾನು ಅನುಭವಿಸಿದ ಅನುಭವಗಳ ಆಧಾರದ ಮೇಲೆ ಬಡಜನರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಬಡತನ, ಹಸಿವು, ದುಡಿಮೆ, ಅಪಮಾನ ಇವೆಲ್ಲವೂ ಮೋದಿ ಅವರಿಗೆ ಗೊತ್ತಿದೆ. ಅದನ್ನೆಲ್ಲಾ ಸಹಿಸಿಕೊಂಡು ಬಂದ ಅವರು, ತಾನು ಅನುಭವಿಸಿದ ಕಷ್ಟ ಹಾಗೂ ಅಪಮಾನವನ್ನು ದೇಶದ ಬಡಜನರು ಅನುಭವಿಸಬಾರದು ಎಂಬ ನಿಟ್ಟಿನಲ್ಲಿ ಪ್ರತಿಯೊಂದು ಯೋಜನೆಯನ್ನು ರೂಪಿಸಿದ್ದಾರೆ. ಬಡಜನರಿಗೆ ಸೂರು ಕಲ್ಪಿಸಲು ಪ್ರಧಾನಮಂತ್ರಿ ರೋಜಗಾರ್ ಯೋಜನೆ, ಆರೋಗ್ಯ ಸುರಕ್ಷತೆಗಾಗಿ ಆಯುಷ್ಮಾನ್ ಕಾರ್ಡ್, ರೈತರ ಏಳಿಗೆಗಾಗಿ ಕಿಸಾನ್ ಸಮ್ಮಾನ್ ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಭಾರತದ ಏಕತೆ ಹಾಗೂ ಸುರಕ್ಷತೆ ಬಗ್ಗೆ ವಿಶ್ವದ ಗಮನವನ್ನೇ ಸೆಳೆದಿರುವ ಮೋದಿ ಆರ್ಥಿಕತೆಯಲ್ಲಿ 5 ಟ್ರಿಲಿಯನ್ ಡಾಲರ್ ಮುಟ್ಟಬೇಕು ಎಂಬ ಕನಸು ಹೊಂದಿದ್ದಾರೆ. ಅದರಲ್ಲಿ 1.38 ಟ್ರಿಲಿಯನ್ ಡಾಲರ್‌ಗಳಷ್ಟು ಆರ್ಥಿಕ ಕ್ರೋಢೀಕರಣವನ್ನು ರಾಜ್ಯದಿಂದ ಕಾಣಿಕೆಯಾಗಿ ನೀಡಬೇಕು. ಅದಕ್ಕಾಗಿ ದಿನಕ್ಕೆ 20 ಗಂಟೆ ಕೆಲಸ ಮಾಡಬೇಕಿದೆ. ದುಡ್ಡೆ ದೊಡ್ಡಪ್ಪ ಎಂದು ಹೇಳುತ್ತಿದ್ದರು. ಆದರೆ ದುಡ್ಡು ದೊಡ್ಡಪ್ಪ ಅಲ್ಲ. ದುಡಿಮೆಯೇ ದೊಡ್ಡಪ್ಪ. ದುಡಿಮೆ ಹೆಚ್ಚಾದಷ್ಟು ದುಡ್ಡು ಬರುತ್ತದೆ. ಜನರಿಗೆ ಕೇವಲ ದುಡ್ಡು ಕೊಟ್ಟರೇ ಅಭಿವೃದ್ಧಿಯಾಗುವುದಿಲ್ಲ. ಉತ್ತಮ ಯೋಜನೆಗಳನ್ನು ನೀಡಿದರೇ ಮಾತ್ರ ಜನರು ಮತ್ತು ರಾಜ್ಯದ ಅಭಿವೃದ್ಧಿ ಸಾಧ್ಯ. ಆ ನಿಟ್ಟಿನಲ್ಲಿ ಮೋದಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯದ ಡಬ್ಬಲ್ ಇಂಜಿನ್ ಸರ್ಕಾರ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದೆ. ಮತ್ತೊಮ್ಮೆ ಡಬ್ಬಲ್ ಇಂಜಿನ್ ಸರ್ಕಾರವನ್ನು ಅಧಿಕಾರಕ್ಕೆ ತಂದು ದೇಶದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಸ್ವಾಗತ ಭಾಷಣ ಮಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ, 12 ವರ್ಷ ಮುಖ್ಯಮಂತ್ರಿ ಹಾಗೂ 8 ವರ್ಷ ಪ್ರಧಾನಿ ಸೇರಿ ಒಟ್ಟು 20 ವರ್ಷ ಕಾಲ ಅಧಿಕಾರದಲ್ಲಿರುವ ಮೋದಿ ದೇಶದಲ್ಲೇ ಬದಲಾವಣೆ ತರುವ ಹಾಗೂ ಬಡವರಿಗೆ ಸಹಾಯವಾಗುವಂತಹ ಯೋಜನೆಗಳನ್ನು ರೂಪಿಸಿದ್ದಾರೆ. 2022ನೇ ವರ್ಷ 75ನೇ ಸ್ವಾತಂತ್ರ್ಯೋತ್ಸವದ ವರ್ಷವಾಗಿದೆ. ಆದರೆ ದೇಶ 100 ಸ್ವಾತಂತ್ರ್ಯೋತ್ಸವ ಆಚರಿಸುವ ವೇಳೆಗೆ ಎಷ್ಟು ಅಭಿವೃದ್ಧಿ ಹೊಂದಬೇಕಾಗುತ್ತದೋ ಅಷ್ಟನ್ನು ಈ ವರ್ಷವೇ ಮಾಡಬೇಕು ಎಂಬ ನಿಟ್ಟಿನಲ್ಲಿ 25 ವರ್ಷಗಳ ದೂರ ದೃಷ್ಟಿಇಟ್ಟುಕೊಂಡು ಮೋದಿ ಅವರು ಯೋಜನೆಗಳನ್ನು ರೂಪಿಸಿದ್ದಾರೆ ಎಂದರು.

ಮೈಸೂರು ಅಭಿವೃದ್ಧಿಗೆ ಬದ್ಧ: ಬೊಮ್ಮಾಯಿ

ಮೈಸೂರಿನ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು.

ಮೈಸೂರಲ್ಲಿ ಟೂರಿಸಂ ಸರ್ಕ್ಯೂಟ್ ನಿರ್ಮಾಣ ಮಾಡಲಾಗುವುದು. ವಿಮಾನ ನಿಲ್ದಾಣ ವಿಸ್ತರಣೆಗೆ 99 ಕೋಟಿ ರೂ. ಅನುದಾನ ನೀಡಲಾಗಿದೆ. ವಿಮಾನ ನಿಲ್ದಾಣ ವಿಸ್ತರಣೆಯಾದರೆ ಅಂತರರಾಷ್ಟ್ರೀಯ ವಿಮಾನಗಳೂ ಕೂಡ ಮೈಸೂರಿಗೆ ಬರಲಿವೆ. ಆಗ ಪ್ರವಾಸೋದ್ಯಮ ಮತ್ತಷ್ಟು ಅಭಿವೃದ್ಧಿ ಹೊಂದುತ್ತದೆ. ಕೆ.ಆರ್.ಆಸ್ಪತ್ರೆ ಅಭಿವೃದ್ಧಿಗೂ ಹಣ ಬಿಡುಗಡೆ ಮಾಡಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಎಸ್ಸಿ, ಎಸ್ಟಿ, ಓಬಿಸಿಗೆ ಸೇರಿದ ಸಾವಿರ ಮಂದಿಗೆ ಹಾಸ್ಟೆಲ್ ನಿರ್ಮಾಣ ಮಾಡಲಾಗುವುದು. ಈ ವರ್ಗದವರಿಗೆ ವರ್ಕಿಂಗ್ ವುಮನ್ಸ್ ಹಾಸ್ಟೆಲ್ ನಿರ್ಮಿಸಿ ಗ್ರಾಮೀಣ ಪ್ರದೇಶದಿಂದ ಮೈಸೂರಿಗೆ ಬಂದು ಕೆಲಸ ಮಾಡುವ ಮಹಿಳೆಯರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಹೇಳಿದರು.

ಯಡಿಯೂರಪ್ಪರೊಂದಿಗೆ ನರೇಂದ್ರ ಮೋದಿ ಚರ್ಚೆ



ಬೆಂಗಳೂರು,ಜೂ.20 (ಕೆಎಂಶಿ)–ಪ್ರಧಾನಿ ನರೇಂದ್ರ ಮೋದಿ ಅವರು ಯಲಹಂಕ ವಾಯು ನೆಲೆಯಲ್ಲೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಮುಖಾಮುಖಿ ಚರ್ಚೆ ಮಾಡಿದ ಪ್ರಸಂಗ ನಡೆಯಿತು. ಪ್ರಧಾನಿಯವರನ್ನು ಬರಮಾಡಿಕೊಳ್ಳಲು ವಾಯುನೆಲೆಗೆ ಆಗಮಿಸಿದ್ದ ಯಡಿಯೂರಪ್ಪರನ್ನು ಕಂಡು ನಗುತ್ತಲೇ ಅವರ ಬಳಿ ನಿಂತು, ಕೆಲಕಾಲ ಮಾತನಾಡಿದರು. ಯಡಿಯೂರಪ್ಪ ಅವರು ಅಧಿಕಾರದಿಂದ ಕೆಳಗಿಳಿದ ನಂತರ ಪ್ರಧಾನಿಯವರನ್ನು ಭೇಟಿ ಮಾಡಿದ್ದು ಇದೇ ಮೊದಲು. ಮುಖಾಮುಖಿ ಭೇಟಿ ಸಂದರ್ಭದಲ್ಲಿ ಅವರು ಏನು ಚರ್ಚೆ ಮಾಡಿದರೆಂದು ತಿಳಿಯದು. ಈ ಸಂದರ್ಭದಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿಯವರು ಸಮೀಪದಲ್ಲೇ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಮೋದಿ 2 ದಿನಗಳ ಪ್ರವಾಸ

ಬೆಂಗಳೂರು,ಜೂ.20 (ಕೆಎಂಶಿ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದಿನಿಂದ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ. ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರವಾಸ ಕಾರ್ಯಕ್ರಮವನ್ನು ರೂಪಿಸಿದಂತಿದೆ. ಸೋಮವಾರ ಬೆಳಗ್ಗೆ 11.55ಕ್ಕೆ ಯಲಹಂಕ ವಾಯುಪಡೆ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿಯವರನ್ನು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಧಾನಿಯವರನ್ನು ಬರಮಾಡಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ಅವರಿಗೆ ಪುಸ್ತಕವನ್ನು ನೀಡಿ ಶಾಲು ಹೊದಿಸಿ ಗೌರವಿಸಿದರು.

ಮೆದುಳು ಸಂಶೋಧನಾ ಕೇಂದ್ರ: ಪ್ರಧಾನಿ ಮೋದಿ ಲೋಕಾರ್ಪಣೆ




ಬೆಂಗಳೂರು, ಜೂ. 20 (ಕೆಎಂಶಿ)–ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ 280 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಿರುವ ಮೆದುಳು ಸಂಶೋಧನಾ ಕೇಂದ್ರವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಲೋಕಾರ್ಪಣೆಗೊಳಿಸಿದರು.

ಇದೇ ವೇಳೆ 425 ಕೋಟಿ ರೂ. ವೆಚ್ಚದಲ್ಲಿ ಐಐಎಸ್ಸಿ ಆವರಣದಲ್ಲಿ ನಿರ್ಮಾಣವಾಗಲಿರುವ ಬಾಗ್ಚಿ– ಪಾರ್ಥಸಾರಥಿ ಆಸ್ಪತ್ರೆಗೂ ಪ್ರಧಾನಿಯವರು ಶಂಕುಸ್ಥಾಪನೆ ನೆರವೇರಿಸಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ದಾನಿಗಳಾದ ಕ್ರಿಸ್ ಗೋಪಾಲಕೃಷ್ಣನ್ ದಂಪತಿ ಹಾಗೂ ಬಾಗ್ಚಿ ಮತ್ತು ಪಾರ್ಥಸಾರಥಿ ಕುಟುಂಬದವರು ಉಪಸ್ಥಿತರಿದ್ದರು.

ನಾನು ಕರ್ನಾಟಕಕ್ಕೆ ಬರುತ್ತಿರುವೆ; ಬೆಂಗಳೂರು, ಮೈಸೂರಿನ ಕಾರ್ಯಕ್ರಮದಲ್ಲಿ ಭಾಗವಹಿಸುವೆ

ಕನ್ನಡದಲ್ಲಿ ಪ್ರಧಾನಿ ಮೋದಿ ಟ್ವೀಟ್



Narendra Modi
@narendramodi

ಕರ್ನಾಟಕ ರಾಜ್ಯಕ್ಕೆ ಹೋಗುತ್ತಿರುವೆ. ಅಲ್ಲಿ ಬೆಂಗಳೂರು ಮತ್ತು ಮೈಸೂರಿನ ಕಾರ್ಯಕ್ರಮ ಗಳಲ್ಲಿ ಭಾಗವಹಿಸುವೆ. ಮೊದಲ ಕಾರ್ಯಕ್ರಮ @iiscbangalore, ಅಲ್ಲಿ ಮಿದುಳು ಸಂಶೋಧನಾ ಕೇಂದ್ರ ಉದ್ಘಾಟಿಸಲಾಗುವುದು. ಬಾಗ್ಚಿ- ಪಾರ್ಥಸಾರಥಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಾಗಿ ಶಿಲಾನ್ಯಾಸ ನೆರವೇರಿಸಲಾಗುವುದು.

9:21 AM · Jun 20, 2022

Read the full conversation on Twitter

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಮತ್ತು ನಾಳೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬೆಂಗಳೂರು ಹಾಗೂ ಮೈಸೂರಿಗೆ ಆಗಮಿಸುವ ಬಗ್ಗೆ ಕನ್ನಡದಲ್ಲಿ ಟ್ವೀಟ್ ಮಾಡಿದ್ದರು. ಕರ್ನಾಟಕ ರಾಜ್ಯಕ್ಕೆ ಹೋಗುತ್ತಿರುವೆ. ಅಲ್ಲಿ ಬೆಂಗಳೂರು ಮತ್ತು ಮೈಸೂರಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವೆ. ಮೊದಲ ಕಾರ್ಯಕ್ರಮ ಭಾರತೀಯ ವಿಜ್ಞಾನ ಭವನದಲ್ಲಿ ಮೆದುಳು ಸಂಶೋಧನಾ ಕೇಂದ್ರ ಉದ್ಘಾಟಿಸಲಾಗುವುದು. ಬಾಗ್ಚಿ–ಪಾರ್ಥಸಾರಥಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಾಗಿ ಶಿಲಾನ್ಯಾಸ ನೆರವೇರಿಸಲಾಗುವುದು ಎಂದಿದ್ದರು. ಸೋಮವಾರ ಮಧ್ಯಾಹ್ನ, ಡಾ.ಬಿ ಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (ಬೇಸ್) ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಉದ್ಘಾಟನೆ ಮತ್ತು ಡಾ ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಯ ಅನಾವರಣ ಮಾಡಲಿದ್ದೇನೆ. 150 ಟೆಕ್ ಹಬ್‌ಗಳ ಲೋಕಾರ್ಪಣೆ ಕೂಡ ಮಾಡುವೆ ಎಂದಿದ್ದರು. ಬೆಂಗಳೂರಿನ ಕಾರ್ಯಕ್ರಮದಲ್ಲಿ, 27,000 ಕೋಟಿ ರು. ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ. ಈ ಕಾಮಗಾರಿಗಳು ವಿವಿಧ ಕ್ಷೇತ್ರಗಳಿಗೆ ಸೇರಿದ್ದು ಬೆಂಗಳೂರಿನ ಹಾಗೂ ಸುತ್ತಮುತ್ತಲಿನ ಜನರ 'ಸುಗಮ ಜೀವನ'ಕ್ಕೆ ನೆರವಾಗಲಿದೆ ಎಂದು ಪ್ರಧಾನಿ ಹೇಳಿದ್ದರು.

ಮೋದಿ ಅವರಿಂದ ಅಂಬೇಡ್ಕರ್ ಪುತ್ಥಳಿ ಅನಾವರಣ



ಬೆಂಗಳೂರು: ಜ್ಞಾನಭಾರತಿ ಕ್ಯಾಂಪಸ್ ಬಳಿ ಇರುವ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ (ಬೇಸ್) ವಿವಿ ಕ್ಯಾಂಪಸ್ ಅನ್ನು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಇದೇ ವೇಳೆ ಅಂಬೇಡ್ಕರ್‌ರ ಪುತ್ಥಳಿಯನ್ನೂ ಪ್ರಧಾನಿ ಅನಾವರಣ ಮಾಡಿದರು. 201 ಕೋಟಿ ರೂ. ವೆಚ್ಚದಲ್ಲಿ ಬೇಸ್ ವಿವಿಯ ನೂತನ ಕ್ಯಾಂಪಸ್ ಅನ್ನು ನಿರ್ಮಿಸಲಾಗಿದೆ. ಮೇಲ್ದರ್ಜೆಗೇರಿಸಿದ 150 ಐಟಿಐ ಹಬ್‌ಗಳನ್ನೂ ಲೋಕಾರ್ಪಣೆ ಮಾಡಿದರು. ತಂತ್ರಜ್ಞಾನ ಕೇಂದ್ರಗಳಾಗಿ ಉನ್ನತೀಕರಿಸಿರುವ ಐಟಿಐ ಹಬ್‌ಗಳನ್ನು ಪ್ರಧಾನಿ ಅವರು ಖುದ್ದು ವೀಕ್ಷಿಸಿದರು. ಪ್ರತಿ ವರ್ಷ 1.2 ಲಕ್ಷ ವಿದ್ಯಾರ್ಥಿಗಳಿಗೆ ಇಲ್ಲಿ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಪ್ರಧಾನಿ ಅವರಿಗೆ ಅಂಬೇಡ್ಕರ್ ಸ್ಮರಣಿಕೆ ನೀಡಿ ಗೌರವಿಸಲಾಯಿತು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಸಿಎಂ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಚಿವರಾದ ಅಶ್ವಥ್‌ನಾರಾಯಣ್, ವಿ.ಸೋಮಣ್ಣ, ಶ್ರೀರಾಮುಲು ಉಪಸ್ಥಿತರಿದ್ದರು.

ಮೋದಿ ಯೋಗ ಮಾಡುವುದು ರಾಜ್ಯದ ಅಭಿವೃದ್ಧಿ ಮುನ್ಸೂಚನೆ

ಗದಗ: ಮುಂದಿನ ವರ್ಷ ಮೇ ತಿಂಗಳಲ್ಲಿ ಚುನಾವಣೆ ಆಗುತ್ತೆ, ಪ್ರಧಾನಿ ಮೋದಿಯವರು ಕರ್ನಾಟಕಕ್ಕೆ ಬಂದಿರೋದು ಚುನಾವಣೆಗೆ ಅನುಕೂಲವಾಗುತ್ತದೆ, ಮೋದಿ ಬಂದು ಯೋಗ ಮಾಡೋದು ನಮ್ಮ ರಾಜ್ಯದ ಅಭಿವೃದ್ಧಿಯ ಮುನ್ಸೂಚನೆಯಾಗಿದೆ ಎಂದು ಸಚಿವ ಬಿಸಿ ಪಾಟೀಲ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ಮಿಲಿಟರಿ ಸೇರಬೇಕು ಎನ್ನುವವರು ದೇಶ ಭಕ್ತರು ಅಲ್ವಾ ಎಂದು ಪ್ರಶ್ನಿಸಿದ ಅವರು, ಅವರಿಗೆ ದೇಶದ ಬಗ್ಗೆ ಪ್ರೀತಿ, ಪ್ರೇಮ, ಸ್ವಾಭಿಮಾನ ಇರಬೇಕು. ಲಾರಿ, ರೈಲು ಸುಡುತ್ತಾರೆ. ಇಂತಹವರು ಆರ್ಮಿಗೆ ಸೇರಿ ಏನು ಕೆಲಸ ಮಾಡ್ತಾರೆ ಎಂದು ಪ್ರತಿಭಟನಾಕಾರರ ವಿರುದ್ಧ ಹರಿಹಾಯ್ದರು. ಇವರು ಯಾವ ದೇಶವನ್ನು ಉದ್ಧಾರ ಮಾಡ್ತಾರೆ, ಅವರನ್ನು ಯಾವುದೋ ಒಂದು ಶಕ್ತಿ ಪ್ರಚೋದನೆ ಮಾಡುತ್ತಿದೆ. ಅಷ್ಟೊಂದು ಯುವಕರು ಸಡನ್ ಆಗಿ ಹೇಗೆ ಸೇರುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳು ಇವರನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಮೋದಿಯವರ ವರ್ಚಸ್ಸು ಕುಗ್ಗಿಸಲು ಯುವಕರನ್ನು ಪ್ರಚೋದನೆ ಮಾಡಿ ತಪ್ಪುದಾರಿಗೆ ಎಳೆಯುತ್ತಿದ್ದಾರೆ. ದಯಮಾಡಿ ಯುವಕರು ಇದಕ್ಕೆ ಕಿವಿಗೊಡಬಾರದು ಎಂದು ಸಲಹೆ ನೀಡಿದ್ದಾರೆ.

ಉಕ್ರೇನ್‌ನಲ್ಲಿ ಮೃತಪಟ್ಟ ನವೀನ್ ಕುಟುಂಬಕ್ಕೆ ಸಾಂತ್ವನ ಹೇಳಿ ಮೋದಿ ಭಾವುಕ



ಬೆಂಗಳೂರು: ರಷ್ಯಾ ಮತ್ತು ಉಕ್ರೇನ್ ಯುದ್ಧದಲ್ಲಿ ಮೃತಪಟ್ಟ ಎಂಬಿಬಿಎಸ್ ವಿದ್ಯಾರ್ಥಿ ಕನ್ನಡಿಗ ನವೀನ್ ಕುಟುಂಬವನ್ನು ಪ್ರಧಾನಿ ನರೇಂದ್ರ ಮೋದಿ ಭೇಟಿ ಮಾಡಿ ಸಾಂತ್ವನ ಹೇಳಿದರು. ಕೊಮ್ಮಘಟ್ಟದಲ್ಲಿ ನಡೆದ ಸಾರ್ವಜನಿಕ ಸಮಾವೇಶದ ನಂತರ ಉಕ್ರೇನ್‌ನಲ್ಲಿ ಮೃತಪಟ್ಟ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲೂಕಿನ ಚಳಗೇರಿ ಗ್ರಾಮದ ನಿವಾಸಿಯಾಗಿದ್ದ ನವೀನ್ ಗ್ಯಾನ ಗೌಡರ್ ಅವರ ತಂದೆ ಶೇಖರಪ್ಪ ಗ್ಯಾನಗೌಡರ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭೇಟಿ ಮಾಡಿದರು.

ಮೋದಿಯವರು ನವೀನ್ ತಂದೆ, ತಾಯಿ ಮತ್ತು ಸಹೋದರ ಜೊತೆಗೆ ನಾಲ್ಕೈದು ನಿಮಿಷಗಳ ಕಾಲ ಮಾತನಾಡಿದ್ದಾರೆ. ಮೋದಿ ಅವರ ಭೇಟಿ ನಂತರ ಮೃತ ವಿದ್ಯಾರ್ಥಿ ನವೀನ್ ತಂದೆ ಶೇಖರಗೌಡ ಮಾಹಿತಿ ನೀಡಿದರು. ನಮ್ಮ ಕಣ್ಣೀರು ನೋಡಿ ಪಿಎಂ ನರೇಂದ್ರ ಮೋದಿ ಅವರು ಭಾವುಕರಾದರು. ಮಗನ ಸಾವಿನ ದುಃಖದಲ್ಲೂ ಮಗನ ದೇಹದಾನ ಮಾಡಿದ್ದಕ್ಕೆ ಪಿಎಂ ಮೆಚ್ಚುಗೆ ವ್ಯಕ್ತಪಡಿಸಿದರು ಎಂದರು ತಿಳಿಸಿದರು.

ನವೀನ್ ಮೃತಪಟ್ಟ ನಂತರ ನಿಮ್ಮ ಭೇಟಿಗೆ ಬರಬೇಕಾಗಿತ್ತು. ಆದರೆ ಈಗ ಕಾಲ ಕೂಡಿ ಬಂತು. ನವೀನ್ ಸಹೋದರ ಹರ್ಷ ಕೂಡ ಪ್ರತಿಭಾವಂತ ಇದ್ದಾನೆ. ಉಕ್ರೇನ್‌ನಿಂದ ಬಂದ ಎಂಬಿಬಿಎಸ್ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಬಗ್ಗೆ ವ್ಯವಸ್ಥೆ ಮಾಡುವಂತೆ ಕೇಳಿದೆವು. ಪ್ರಯತ್ನ ಮಾಡುತ್ತೇವೆ ಅಂತಾ ಹೇಳಿದರು. ನಮಗೆ ಧೈರ್ಯವಾಗಿ ಇರುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಧೈರ್ಯ ತುಂಬಿದರು.

ಬೆಂಗಳೂರಲ್ಲಿ ಪ್ರಧಾನಿ ಮೋದಿ ಅಭಿವೃದ್ಧಿ ಮೂಲ ಸೌಕರ್ಯದ 27 ಸಾವಿರ ಕೋಟಿ ಯೋಜನೆಗೆ ಚಾಲನೆ

ಇದರೊಂದಿಗೆ ಮುಂದಿನ ವಿಧಾನಸಭಾ ಚುನಾವಣೆಗೂ ಅಡಿಗಲ್ಲು



ಬೆಂಗಳೂರಿನ ಕೊಮ್ಮಘಟ್ಟದಲ್ಲಿ ಸೋಮವಾರ ನಡೆದ ಸಾರ್ವಜನಿಕ ಸಮಾವೇಶದಲ್ಲಿ ಸಾವಿರಾರು ಕೋಟಿ ವಿನಿಯೋಗದ ವಿವಿಧ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು. ಸಿಎಂ ಬಸವರಾಜ ಬೊಮ್ಮಾಯಿ ಇತರರಿದ್ದಾರೆ.

ಬೆಂಗಳೂರು, ಜೂ. 20 (ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಅವರು ಇಂದು 27 ಸಾವಿರ ಕೋಟಿ ರೂ. ಅಭಿವೃದ್ಧಿ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡುವುದರೊಂದಿಗೆ ಮುಂಬರುವ ವಿಧಾನಸಭಾ ಚುನಾವಣೆಗೂ ಅಡಿಗಲ್ಲು ಹಾಕಿದ್ದಾರೆ.

ಎರಡು ದಿನಗಳ ಭೇಟಿಗಾಗಿ ಇಂದು ರಾಜ್ಯಕ್ಕೆ ಆಗಮಿಸಿದ ಪ್ರಧಾನಿ ಮಧ್ಯಾಹ್ನ ಕೊಮ್ಮಘಟ್ಟದಲ್ಲಿ ನಡೆದ ಸಾರ್ವಜನಿಕ ಸಮಾವೇಶದಲ್ಲಿ ಸಾವಿರಾರು ಕೋಟಿ ವಿನಿಯೋಗದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು. ಬೆಂಗಳೂರು ಉಪನಗರ ರೈಲ್ವೆ,ಯಲಹಂಕ–ಹೈದರಾಬಾದ್ ಡಬ್ಲಿಂಗ್, ವರ್ತುಲ ರಸ್ತೆ ಸೇರಿದಂತೆ ಒಟ್ಟು ಐದು ರಾಷ್ಟ್ರೀಯ ಹೆದ್ದಾರಿಗಳು, ಏಳು ರೈಲ್ವೆ ಯೋಜನೆಗಳಿಗೆ ಚಾಲನೆ ನೀಡಿದರಲ್ಲದೆ, ಕರ್ನಾಟಕವನ್ನು ಅಭಿವೃದ್ಧಿಯ ಹೊಸಶಕೆಗೆ ಕೊಂಡೊಯ್ಯುವುದಾಗಿ ಭರವಸೆ ನೀಡಿದರಲ್ಲದೆ ಕಳೆದ 40 ವರ್ಷಗಳಲ್ಲಿ ಆಗದ ಕೆಲಸಗಳನ್ನು ಮುಂದಿನ 40 ತಿಂಗಳಲ್ಲಿ ಮಾಡಿ ತೋರಿಸುತ್ತೇವೆ ಎಂದರು.

ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಕಟಿಬದ್ಧರಾಗಿದ್ದೇವೆ. ಹಿಂದೆ ಕೇವಲ ಮಾತಿನಲ್ಲೇ ಯೋಜನೆಗಳು ಪ್ರಸ್ತಾಪವಾಯಿತು. ಆದರೆ ಅವು ಕಾರ್ಯ ರೂಪಕ್ಕೆ ಬರಲಿಲ್ಲ ಎಂದು ಕಾಂಗ್ರೆಸ್ ಅನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡು, ಮತದಾರರ ಮೇಲೆ ಪ್ರಭಾವ ಬೀರುವ ಕೆಲಸ ಮಾಡಿದರು. ಯಾವುದೇ ತೊಂದರೆಯಿಲ್ಲದೆ ರಾಜ್ಯದ ಜನರ ಜೀವನ ಮತ್ತು ಅವಕಾಶಗಳು ಲಭ್ಯವಾಗುವಂತೆ ನಮ್ಮ ಡಬಲ್ ಇಂಜಿನ್ ಸರ್ಕಾರ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಲಿದೆ. ನೀವು ನಮಗೆ ನೀಡಿರುವ ಅಧಿಕಾರವನ್ನು ಎಲ್ಲಿಯೂ ದುರುಪಯೋಗ ಮಾಡದೇ, ಒಂದು ಕ್ಷಣವೂ ವ್ಯರ್ಥ ಮಾಡದೇ ನಿಮ್ಮ ಸೇವೆಗೆ ಮುಡುಪಾಗಿಟ್ಟು, ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ, ಅವು ಅನುಷ್ಠಾನಗೊಳ್ಳುವಂತೆ ನೋಡಿಕೊಂಡಿದ್ದೇವೆ.

ಇದರಿಂದ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಸಹಕಾರಿಯಾಗಿರುವುದಲ್ಲದೆ, ಬಡವರ ಆರ್ಥಿಕ ಸ್ಥಿತಿಯನ್ನು ಮೇಲೆತ್ತಲು ಮತ್ತು ಅವರ ಹಸಿವನ್ನು ನೀಗಿಸಲು ಸಹಕಾರಿಯಾಗಿದೆ ಎಂದರು.

ಕನ್ನಡದಲ್ಲಿ ಭಾಷಣ ಆರಂಭಿಸಿದ ಪ್ರಧಾನಿಯವರು ಮೂಲ ಸೌಕರ್ಯ ಮತ್ತು ಅಭಿವೃದ್ಧಿ ಕಲ್ಪಿಸುವುದರಿಂದ ಉದ್ಯೋಗ ಅವಕಾಶಗಳು ತಾನಾಗಿಯೇ ಲಭ್ಯವಾಗುತ್ತವೆ. ಇದು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಲ್ಲ. ಇಡೀ ರಾಜ್ಯದಲ್ಲಿ ಅಭಿವೃದ್ಧಿಗೆ ನಾಂದಿ ಹಾಡಲಾಗುವುದು.

ಈ ನಗರ ಒಂದು ಭಾರತ, ಶ್ರೇಷ್ಠ ಭಾರತಕ್ಕೆ ಉದಾಹರಣೆ. ಲಕ್ಷಾಂತರ ಯುವಕರು ಜೀವನ ರೂಪಿಸಿಕೊಳ್ಳುತ್ತಿದ್ದಾರೆ. ನಾನು ಇಂದು ಆರಂಭಿಸಿರುವ ಯೋಜನೆಗಳು ಅವರ ಜೀವನಕ್ಕೆ ಸಹಕಾರಿಯಾಗಲಿವೆ. ಕೇಂದ್ರದಲ್ಲಿ ತಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ನೂರು ಬಿಲಿಯಲ್ ಡಾಲರ್ ಮೌಲ್ಯದ ಕೆಲವೇ ಕಂಪನಿಗಳಿದ್ದವು. ಆದರೆ ಇವತ್ತು ನೂರು ಬಿಲಿಯನ್ ಡಾಲರ್ ಮೌಲ್ಯದ ನೂರಕ್ಕೂ ಅಧಿಕ ಕಂಪನಿಗಳಿವೆ ಎಂದು ನುಡಿದರು.

ಭಾರತವನ್ನು ಜಗತ್ತಿನ ಬಲಿಷ್ಠ ದೇಶವಾಗಿ ಕಟ್ಟಲು ಹೊರಟಿದ್ದೇವೆ.ಈ ಕನಸಿನೊಂದಿಗೆ ನೀವೆಲ್ಲ ನನಗೆ ಜವಾಬ್ದಾರಿ ನೀಡಿದ್ದೀರಿ. ನಾನು ಸಮಯ ವ್ಯರ್ಥ ಮಾಡದೇ ದುಡಿಯುತ್ತೇನೆ.ನಿಮ್ಮ ಕನಸನ್ನು ಸಾಕಾರಗೊಳಿಸುತ್ತೇನೆ ಎಂದು ನುಡಿದರು.

ನನಗೆ ನೀವು ನೀಡಿದ ಅಧಿಕಾರವನ್ನು ಎಂದೂ ದುರುಪಯೋಗಪಡಿಸಿ ಕೊಳ್ಳುವುದಿಲ್ಲ ಎಂದ ಅವರು, ನಿಮ್ಮ ಕನಸು ನನಸು ಮಾಡುವುದೇ ನನ್ನ ಗುರಿ ಎಂದರು.

ದೇಶಕ್ಕೆ ಬೆಂಗಳೂರಿನ ಕೊಡುಗೆ ದೊಡ್ಡದು ಎಂದ ಅವರು, ಇಂತಹ ಬೆಂಗಳೂರನ್ನು ಕಟ್ಟಲು ಕೇಂದ್ರ ಸರ್ಕಾರ ಹಗಲಿಗೆ ಹಗಲು ನೀಡಲಿದೆ ಎಂದರು.

ಉಪನಗರ ರೈಲ್ವೇ ಯೋಜನೆ ಮೂಲಕ ಬೆಂಗಳೂರು ನಗರ ಎದುರಿಸುತ್ತಿರುವ ಸಂಚಾರ ದಟ್ಟಣೆಯ ಸಮಸ್ಯೆ ನಿವಾರಣೆಯಾಗಲಿದೆ. ಇದೇ ರೀತಿ ರೈಲ್ವೇ ಯೋಜನೆಗಳಿಂದ ಹಿಡಿದು ರಸ್ತೆ, ಬಂದರು, ಮೂಲ ಸೌಕರ್ಯ, ಸಂಶೋಧನೆ ಸೇರಿದಂತೆ ವಿವಿಧ ವಲಯಗಳಲ್ಲಿ ಬೆಂಗಳೂರು ನಗರ ದೊಡ್ಡ ಕೊಡುಗೆ ನೀಡುತ್ತಿದೆ ಎಂದರು.

ಮೈಸೂರಿನ ಅಭಿವೃದ್ಧಿಯ ವಿಕಾಸಯಾತ್ರೆಗೆ ವೇಗ: ಪ್ರಧಾನಿ ನರೇಂದ್ರ ಮೋದಿ ಘೋಷಣೆ

ಬೆಂಗಳೂರು, ಜೂ.20 (ಕೆಎಂಶಿ)–ರಾಷ್ಟ್ರದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅಭಿವೃದ್ಧಿಯ ವಿಕಾಸಯಾತ್ರೆಗೆ ವೇಗ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಂಡಿರುವ ಪ್ರಧಾನಿಯವರು ಮೊದಲನೇ ದಿನವಾದ ಕೊಮ್ಮಘಟ್ಟದಲ್ಲಿ 27 ಸಾವಿರ ಕೋಟಿ ರೂ.ಗಳ ಯೋಜನೆಗಳಿಗೆ ಚಾಲನೆ ಮತ್ತು ಕಾಮಗಾರಿ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, ಅಭಿವೃದ್ಧಿ ಕಾರ್ಯಕ್ರಮಗಳು ಕೇವಲ ಬೆಂಗಳೂರಿಗೆ ಸೀಮಿತವಾಗಿರುವುದಿಲ್ಲ.

ಕರ್ನಾಟಕದ ಪೂರ್ಣ ಅಭಿವೃದ್ಧಿಗೆ ನಮ್ಮ ಡಬಲ್ ಇಂಜಿನ್ ಸರ್ಕಾರ ಕಟಿಬದ್ಧವಾಗಿರುತ್ತದೆ. ನಾಳೆ ಮೈಸೂರಿನಲ್ಲೂ ಅಭಿವೃದ್ಧಿ ವಿಕಾಸಯಾತ್ರೆ ಮುಂದುವರೆಯಲಿದೆ. ನಮ್ಮ ಸರ್ಕಾರ ಕೇವಲ ಒಂದು ನಗರವನ್ನು ಸೀಮಿತಗೊಳಿಸಿ, ಯೋಜನೆ ರೂಪಿಸುವುದಿಲ್ಲ. ಇಡೀ ರಾಷ್ಟ್ರವೇ ಅಭಿವೃದ್ಧಿಯಾಗಬೇಕು ಎಂಬ ಕಲ್ಪನೆಯಿಂದ ಕಳೆದ 8 ವರ್ಷಗಳಲ್ಲಿ ವಿಶ್ರಾಂತಿಯಿಲ್ಲದೆ ಜನರ ಅಭಿವೃದ್ಧಿಗೆ ದುಡಿಯುತ್ತಿದ್ದೇವೆ.


ನಗರಗಳ ಅಭಿವೃದ್ಧಿ ಜೊತೆಗೆ ಗ್ರಾಮೀಣ ಪ್ರದೇಶವು ವಿಕಾಸಗೊಂಡಲ್ಲಿ ಅಲೆಮಾರಿತನವನ್ನು ತಪ್ಪಿಸಿ, ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಬಹುದು. ಅದನ್ನು ಗಮನದಲ್ಲಿಟ್ಟುಕೊಂಡೇ ರಸ್ತೆ, ರೈಲು ಸೇರಿದಂತೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ನಮ್ಮ ಡಬಲ್ ಇಂಜಿನ್ ಸರ್ಕಾರ ಶ್ರಮಿಸುತ್ತಿದೆ. ಹಿಂದೆ ಅಧಿಕಾರ ನಡೆಸಿದವರು, ಮಾಡಲಾಗದ್ದನ್ನು ನಾವು 8 ವರ್ಷಗಳಲ್ಲಿ ಮಾಡಿ ತೋರಿಸಿದ್ದೇವೆ. ನಮ್ಮ ಅಭಿವೃದ್ಧಿ ಕಾರ್ಯಕ್ಕೆ ಇನ್ನು ಮುಂದೆ ಮತ್ತಷ್ಟು ವೇಗ ನೀಡುವುದಾಗಿ ಜನತೆಗೆ ಭರವಸೆ ನೀಡಿದರು.

ಸೌಜನ್ಯ ಭೇಟಿ...



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶಾಸಕ ಎಸ್.ಎ.ರಾಮದಾಸ್, ಅವರ ಸಹೋದರ ಹಾಗೂ ಹೆಸರಾಂತ ಉದ್ಯಮಿ ಶ್ರೀಕಾಂತ್‌ದಾಸ್, ಅವರ ಪತ್ನಿ ಪ್ರತಿಮಾ ಶ್ರೀಕಾಂತ್‌ದಾಸ್, ಪುತ್ರರಾದ ಈಶನ್ ಎಸ್.ದಾಸ್, ವಿಶ್ವತ್ ಎಸ್.ದಾಸ್ ಸೋಮವಾರ ರಾತ್ರಿ ಸೌಜನ್ಯಯುತ ಭೇಟಿಯಾದರು. ವಿಶೇಷವೆಂದರೆ, ಶ್ರೀಕಾಂತ್ ಅವರ ಮನೆಯಿಂದಲೇ ಪ್ರಧಾನಿ ಅವರಿಗೆ ದಕ್ಷಿಣ ಭಾರತದ ಖಾದ್ಯಗಳ ಆತಿಥ್ಯ ಕಲ್ಪಿಸಲಾಗಿತ್ತು. ಈ ಮೊದಲು ಪ್ರಧಾನಿ ಮೋದಿ ಅವರು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲೂ ಇದೇ ಹೋಟೆಲ್‌ನಲ್ಲಿ ಶ್ರೀಕಾಂತ್ ದಂಪತಿ ಪ್ರಧಾನಿ ಅವರನ್ನು ಸೌಜನ್ಯ ಭೇಟಿಯಾಗಿದ್ದರು.

487 ಕೋಟಿಯ ಮೈಸೂರು, ನಾಗನಹಳ್ಳಿ ನೂತನ ರೈಲ್ವೆ ಕೋಚಿಂಗ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಪ್ರಧಾನಿ ಶಂಕುಸ್ಥಾಪನೆ



ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು, ನಾಗನಹಳ್ಳಿ ನೂತನ ರೈಲ್ವೆ ಕೋಚಿಂಗ್ ಕಾಂಪ್ಲೆಕ್ಸ್‌ಗೆ ಶಂಕುಸ್ಥಾಪನೆ ನೆರವೇರಿಸಿದರು. ಈ ವೇಳೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್, ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಹರ್ಷವರ್ಧನ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಉಪಸ್ಥಿತರಿದ್ದರು.

ಮೈಸೂರು,ಜೂ.20– 487.8 ಕೋಟಿ ರೂ. ವೆಚ್ಚದಲ್ಲಿ ನಾಗನಹಳ್ಳಿ ಮತ್ತು ಮೈಸೂರಿನಲ್ಲಿ ನೂತನ ರೈಲ್ವೆ ಕೋಚಿಂಗ್ ಕಾಂಪ್ಲೆಕ್ಸ್ ನಿರ್ಮಾಣಕ್ಕೆ ಸೋಮವಾರ ಪ್ರಧಾನಿ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದ್ದು, ಇದರಲ್ಲಿ ಮೈಸೂರು ರೈಲ್ವೆ ನಿಲ್ದಾಣ ಅಭಿವೃದ್ಧಿಗೆ 395.73 ಕೋಟಿ ಮತ್ತು ನಾಗನಹಳ್ಳಿಯಲ್ಲಿ ರೈಲ್ವೆ ಕೋಚಿಂಗ್ ಸಂಕೀರ್ಣ ನಿರ್ಮಾಣಕ್ಕೆ 92.07 ಕೋಟಿ ರೂ. ಮೀಸಲಿಡಲಾಗಿದೆ.

ಈ ಯೋಜನೆ ಕಾರ್ಯಗತಗೊಂಡಾಗ ಮೈಸೂರು ರೈಲ್ವೆ ನಿಲ್ದಾಣವು ಆಧುನಿಕ ಸೇವೆಗಳ ಮೂಲಕ ಪ್ರವೇಶವನ್ನು ಪಡೆಯುತ್ತದೆ. ಹೀಗಾಗಿ ಮೈಸೂರು ರೈಲು ನಿಲ್ದಾಣ ಪಾರಂಪರಿಕ ನೋಟದ ಜೊತೆಗೆ ಆಧುನಿಕ ಸೌಲಭ್ಯಗಳನ್ನು ಸಹ ಹೊಂದಲಿದೆ. ಯೋಜನೆ ಪೂರ್ಣಗೊಂಡಾಗ ಈ ರೈಲ್ವೆ ನಿಲ್ದಾಣ 3 ಹೆಚ್ಚುವರಿ ಪ್ಲಾಟ್ ಫಾರ್ಮ್, 4 ಹೆಚ್ಚುವರಿ ಪಿಟ್‌ಲೈನ್, 4 ಹೆಚ್ಚುವರಿ ಸ್ಟೆಬ್ಲಿಂಗ್ ಲೈನ್, 1 ಹೆಚ್ಚುವರಿ ಶಂಟಿಂಗ್ ನೆಕ್ (ಜೋಡಣೆ ಲೈನ್) ಹೊಂದಲಿದೆ. ನಾಗನಹಳ್ಳಿ ರೈಲ್ವೆ ನಿಲ್ದಾಣದಲ್ಲಿ 1 ಹೆಚ್ಚುವರಿ ಪ್ಲಾಟ್ ಫಾರ್ಮ್, 2 ಸ್ಟೆಬ್ಲಿಂಗ್ ಲೈನ್ ಇದರಲ್ಲಿ 1 ಮೆಮೂ ಶೆಡ್ ಜೊತೆ ಪಿಟ್ ಲೈನ್ ಇರುತ್ತದೆ. ಇದರಿಂದಾಗಿ ದೈನಂದಿನ ಪ್ರಯಾಣಿಕರಿಗೆ ನಾಗನಹಳ್ಳಿಯಿಂದ ಮೆಮು ಸೇವೆ ಆರಂಭಿಸಲು ಅನುಕೂಲವಾಗುತ್ತದೆ.

ಸಾರ್ವಜನಿಕರಿಗೆ ಪ್ರಯೋಜನ: ಈ ಯೋಜನೆಯಿಂದ ಸದ್ಯ ಸೇವೆಯಲ್ಲಿರುವ ಮೈಸೂರಿನಿಂದ ಹೊರಡುವ ದೂರ ಪ್ರಯಾಣದ ರೈಲುಗಳ ಸೇವೆಯ ಆವರ್ತನೆಯನ್ನು ಹೆಚ್ಚಿಸುವುದರ ಜೊತೆಗೆ ಹೆಚ್ಚುವರಿ ದೂರ ಪ್ರಯಾಣದ ರೈಲುಗಳ ಸೇವೆಯನ್ನು ಆರಂಭಿಸಬಹುದು ಹಾಗೂ ಮೈಸೂರಿನಿಂದ 8 ಕಿ.ಮೀ ಅಂತರದಲ್ಲಿರುವ ನಾಗನಹಳ್ಳಿಯಲ್ಲಿ ರೈಲ್ವೆ ಮೂಲ ಸೌಕರ್ಯವನ್ನು ಒದಗಿಸಲು ಸಾಧ್ಯವಾಗುತ್ತದೆ. ಹೆಚ್ಚುವರಿ ರೈಲುಗಳ ಸೇವೆಯಿಂದ ಮೈಸೂರು ಸುತ್ತಮುತ್ತಲಿನ ಸ್ಥಳಗಳಿಂದ ನಿತ್ಯ ಪ್ರಯಾಣಿಸುವ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ಹೆಚ್ಚುವರಿ ದೂರ ಪ್ರಯಾಣದ ರೈಲುಗಳ ಸೇವೆಯನ್ನು ಪ್ರಾರಂಭಿಸಲು ಕೋಚಿಂಗ್ ಸಂಕೀರ್ಣವು ಅವಕಾಶ ಕಲ್ಪಿಸುವುದರಿಂದ ಪ್ರವಾಸೋದ್ಯಮ ಮತ್ತಷ್ಟು ಅಭಿವೃದ್ಧಿ ಹೊಂದುತ್ತದೆ. ಸುಧಾರಿತ ಸಂಪರ್ಕ ವ್ಯವಸ್ಥೆಯಿಂದ ರೈತರು, ವಿದ್ಯಾರ್ಥಿಗಳ ಹಾಗೂ ನಿತ್ಯ ಪ್ರಯಾಣಿಕರು ಮಿತವ್ಯಯದ ಸಾರಿಗೆಯ ಪ್ರಯೋಜನವನ್ನು ಪಡೆಯುತ್ತಾರೆ. ನಾಗನಹಳ್ಳಿಯ ಕೋಚಿಂಗ್ ಕಾಂಪ್ಲೆಕ್ಸ್ ಉಪನಗರ ರೈಲು ಸಂಚಾರಕ್ಕಾಗಿ ಮೆಮು ಶೆಡ್‌ನೊಂದಿಗೆ ಅಭಿವೃದ್ಧಿಗೊಳಿಸಲಾಗುತ್ತದೆ. ಇದರಿಂದ ಸೀಮಿತ ಸಂಖ್ಯೆಯ ಪ್ಲಾಟ್‌ಫಾರ್ಮ್ ಹೊಂದಿರುವ ಮೈಸೂರು ನಿಲ್ದಾಣದಲ್ಲಿ ದಟ್ಟಣೆ ಕಡಿಮೆಯಾಗುತ್ತದೆ. ಹೆಚ್ಚುವರಿ 4 ಪಿಟ್‌ಲೈನ್‌ಗಳನ್ನು ಒದಗಿಸುವುದರಿಂದ ಈಗಿನ ದೂರ ಪ್ರಯಾಣದ ರೈಲುಗಳ ಆವರ್ತನವನ್ನು ಹೆಚ್ಚಿಸಲು ಮತ್ತು ಮೈಸೂರಿನಿಂದ ಹೊರಡುವ ಇಷ್ಟಪ್ಪ ದೂರದ ರೈಲುಗಳ ಸೇವೆಯನ್ನು ಆರಂಭಿಸಬಹುದು. ಜೊತೆಗೆ ಮೈಸೂರಿನಿಂದ ಇತರ ಪ್ರಮುಖ ಸ್ಥಳಗಳಿಗೆ ಹೆಚ್ಚಿನ ಮೆಮು ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ.



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುನುಗ್ಗುತ್ತಿರುವ ಜನಸ್ತೋಮ.

ನಾಳೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು,ಜೂ.20– ವಿದ್ಯುತ್ ನಿಲುಗಡೆ ನಿಮಿತ್ತ ಜೂ.22ರಂದು ಹಿಎಸ್‌ಆರ್ ಮತ್ತು ಹೆಚ್.ಎಲ್.ಆರ್. ಪ್ರಾಂತ್ಯಗಳಿಗೆ, ವಾರ್ಡ್ ನಂ.10ರ 7, ವಾರ್ಡ್ ನಂ.20, 23, 38 ವಾರ್ಡ್ ನಂ. 42ರ 45, ವಾರ್ಡ್ ನಂ.47 ಇದಕ್ಕೆ ಸಂಬಂಧಪಟ್ಟ ಡಿಎಂಪಿ ಪ್ರದೇಶಗಳಾದ ಹೆಬ್ಬಾಳ್, ಕುಂಬಾರಕೊಪ್ಪಲು, ಮಂಚೇಗೌಡನ ಕೊಪ್ಪಲು, ಕೆ.ಜಿ.ಕೊಪ್ಪಲ್, ಮೇಟಗಳ್ಳಿ, ಲೋಕನಾಯಕನಗರ, ಬೃಂದಾವನ ಬಡಾವಣೆ, ಒಂಟಿಕೊಪ್ಪಲು, ಪಡುವಾರಹಳ್ಳಿ, ವಿನಾಯಕನಗರ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಶಾರದಾದೇವಿ ನಗರ, ಸರಸ್ವತಿಪುರಂ, ಬೋಗಾದಿ, ವಿಜಯನಗರ 1, 3ನೇ ಹಂತ, ಗೋಕುಲಂ 1, 2, 3ನೇ ಹಂತ ಹಾಗೂ ಹೊರವಲಯಗಳಾದ ಆರ್‌ಎಂಪಿ, ಬಿಇಎಂಎಲ್, ಯಾದವಗಿರಿ, ಬನ್ನಿಮಂಟಪ ಎಬಿಸಿ ಲೇಔಟ್, ಈರನಗೆರೆ, ಸಿದ್ಧಿಖನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ ಭಾಗಶಃ, ಎನ್.ಆರ್.ಮೊಹಲ್ಲಾ ಭಾಗಶಃ ಪ್ರದೇಶಗಳು, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ಕೃಷ್ಣಮೂರ್ತಿಪುರಂ, ಜನತಾನಗರ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ವಿಜಯನಗರ 2ನೇ ಹಂತ ಹಾಗೂ ಇತ್ಯಾದಿ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಒಂದೇ ಮನೆಯಲ್ಲಿ 9 ಮಂದಿ ಶವ ಪತ್ತೆ; ಆತ್ಮಹತ್ಯೆ ಶಂಕೆ

ಸಾಂಗ್ಲಿ (ಮಹಾರಾಷ್ಟ್ರ): ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯಲ್ಲಿ ಸೋಮವಾರ ಒಂದೇ ಕುಟುಂಬದ ಒಂಬತ್ತು ಸದಸ್ಯರು ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಇದು ಆತ್ಮಹತ್ಯೆ ಪ್ರಕರಣ ಎಂದು ಪೊಲೀಸರು ಶಂಕಿಸಿದ್ದಾರೆ. ಮುಂಬೈನಿಂದ 350 ಕಿ.ಮೀ ದೂರದಲ್ಲಿರುವ ಸಾಂಗ್ಲಿ ಜಿಲ್ಲೆಯ ಮಹೈಸಾಲ್‌ನಲ್ಲಿರುವ ಮನೆಯೊಂದರಲ್ಲಿ ಮೃತದೇಹಗಳು ಪತ್ತೆಯಾಗಿವೆ. ಮೂರು ಶವಗಳು ಮನೆಯ ಒಂದೇ ಸ್ಥಳದಲ್ಲಿ ಕಂಡುಬಂದರೆ, ಆರು ಮೃತದೇಹಗಳು ಮನೆಯ ಬೇರೆ ಬೇರೆ ಸ್ಥಳಗಳಲ್ಲಿ ಪತ್ತೆಯಾಗಿವೆ ಎಂದು ಸಾಂಗ್ಲಿ ಪೊಲೀಸ್ ವರಿಷ್ಠಾಧಿಕಾರಿ ದೀಕ್ಷಿತ್ ಗೆಡಮ್ ಹೇಳಿದ್ದಾರೆ.

ಸಮಾಜ ಸೇವೆಯಿಂದ ಲಯನ್ಸ್ ಸಂಸ್ಥೆಗೆ ಜನಮನ್ನಣೆ

ಲಯನ್ಸ್ ಕ್ಲಬ್ ಆಫ್ ಫ್ರೆಂಚ್‌ರಾಕ್ಸ್ ಕಟ್ಟಡ ಉದ್ಘಾಟಿಸಿದ ಶಾಸಕ ಸಿಎಸ್‌ಪಿ



ಪಾಂಡವಪುರ, ಜೂ.20– ಪ್ರಪಂಚದಾದ್ಯಂತ ಲಯನ್ಸ್ ಸಂಸ್ಥೆಗಳು ಸಮಾಜ ಸೇವೆ ಮೂಲಕ ಜನಮನ್ನಣೆ ಗಳಿಸಿವೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಪಟ್ಟಣದ ಹೇಮಾವತಿ ಕ್ವಾಟ್ರರ್ಸ್ ಹಿಂಭಾಗದ ಬಡಾವಣೆಯಲ್ಲಿ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ಪಾಂಡವಪುರ ಘಟಕದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಲಯನ್ಸ್ ಕ್ಲಬ್ ಆಫ್ ಫ್ರೆಂಚ್‌ರಾಕ್ಸ್ ಸಂಸ್ಥೆ ಪಟ್ಟಣದಲ್ಲಿ ಉತ್ತಮ ಕೆಲಸ ಮಾಡುತ್ತಿದೆ. ಹಲವು ಸೇವಾ ಕಾರ್ಯಕ್ರಮ ನಡೆಸುವ ಮೂಲಕ ಪಟ್ಟಣದ ಜನರಿಗೆ ನೆರವಾಗುವ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಪುರಸಭೆಯಿಂದ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್‌ಗೆ ಮಂಜೂರಾಗಿದ್ದ ನಿವೇಶನವನ್ನು ಕಾರಣಾಂತರಗಳಿಂದ ಹಿಂಪಡೆಯಲಾಗಿದೆ. ಮುಂದಿನ ದಿನಗಳಲ್ಲಿ ಕ್ಲಬ್‌ಗೆ ನಿವೇಶನ ಮಂಜೂರು ಮಾಡಿಸಿಕೊಡುವ ಜವಾಬ್ದಾರಿಯನ್ನು ಪುರಸಭಾಧ್ಯಕ್ಷರು ಹಾಗೂ ನಾನು ಹೊರುತ್ತೇವೆ. ಕ್ಲಬ್‌ನಿಂದ ಆ ಜಾಗದಲ್ಲಿ ಡಯಾಲಿಸಿಸ್ ಕಟ್ಟಡ ನಿರ್ಮಾಣ ಮಾಡಲು ಗಮನವಹಿಸಿ, ಜೊತೆಗೆ ದಾನ ನೀಡುವ ದಾನಿಗಳನ್ನು ಪರಿಚಯಿಸಿ ಕೊಡುತ್ತೇನೆ. ನಿತ್ಯ ಹತ್ತು ಮಂದಿಗೆ ಉಚಿತವಾಗಿ ಡಯಾಲಿಸಿಸ್ ಮಾಡುವ ಮೂಲಕ ಸೇವೆಗೆ ಮುಂದಾಗಿ, ಕ್ಲಬ್‌ಗೆ ಬರುವ ರಸ್ತೆ ಅಭಿವೃದ್ಧಿ, ಕುಡಿಯುವ ನೀರು ಹಾಗೂ ವಿದ್ಯುತ್ ಸೌಲಭ್ಯ ದೊರಕಿಸಿ ಕೊಡಲಾಗುವುದು ಎಂದರು.

ಜಿಲ್ಲಾ ಮಾಜಿ ರಾಜ್ಯಪಾಲರು 317ಎ ಲಯನ್ ಕೆ.ದೇವೇಗೌಡ ಮಾತನಾಡಿ, ಜಿಲ್ಲೆಯ ಬಹುತೇಕ ಕ್ಲಬ್‌ಗಳಿಗೆ ಸ್ವಂತ ಕಟ್ಟಡವಿಲ್ಲ. ಹೀಗಿರುವಾಗ ಎಲ್ಲರ ಸಹಕಾರದಿಂದ ಪಟ್ಟಣದಲ್ಲಿ ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್ ನೂತನ ಕಟ್ಟಡ ನಿರ್ಮಾಣ ಮಾಡಲಾಗಿದೆ. ಕ್ಲಬ್ ವತಿಯಿಂದ ಡಯಾಲಿಸಿಸ್ ಘಟಕ ನಿರ್ಮಾಣಕ್ಕೆ ಮುಂದಾಗುತ್ತಿದ್ದೇವೆ. ಅದಕ್ಕೆ ಶಾಸಕರು ಎಲ್ಲಾ ರೀತಿಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ತಾಲೂಕು ಲಯನ್ಸ್ ಕ್ಲಬ್ ಆಫ್ ಫ್ರೆಂಚ್ ರಾಕ್ಸ್‌ಗೆ ಅಧ್ಯಕ್ಷ ಡಿ.ಕೆ.ದೇವೇಗೌಡ ವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಗುರುಸ್ವಾಮಿ, ಕೃಷ್ಣೇಗೌಡ, ಪುರಸಭೆ ಅಧ್ಯಕ್ಷೆ ಅರ್ಚನ, ಪಿ.ಎಲ್. ಆದರ್ಶ, ಎನ್.ದಿಲೀಪ್, ಇ.ಎಸ್.ನಾಗರಾಜು, ಎಲ್.ಕೆ.ಜಯರಾಮು, ಟಿ.ವೆಂಕಟೇಶ್, ಕರೀಗೌಡ, ವಿ.ಎಸ್.ನಿಂಗೇಗೌಡ ಸೇರಿದಂತೆ ಹಲವರಿದ್ದರು.

> 6 ನಾನು ಮೇಲುಕೋಟೆ ವಿಧಾನ ಸಭೆಯ 2 ಲಕ್ಷ ಜನರಿಗೆ ಶಾಸಕ. ಕ್ಷೇತ್ರದಲ್ಲಿ ನಾನು ಏನು ಕೆಲಸ ಮಾಡಿದ್ದೇನೆ ಎನ್ನುವುದು ಇನ್ನು 6 ತಿಂಗಳಲ್ಲಿ ಜನರಿಗೆ ಗೊತ್ತಾಗಲಿದೆ. ಚುನಾವಣೆ ಬಂದಾಗ ರಾಜಕೀಯ ಮಾಡಿಕೊಳ್ಳಿ. ಅಭಿವೃದ್ಧಿ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ.
>
> –ಸಿ.ಎಸ್.ಪುಟ್ಟರಾಜು, ಶಾಸಕರು.

ಅಗ್ನಿಪಥ್ ಯೋಜನೆ ದೇಶಕ್ಕೆ ಮಾರಕ: ಶಾಸಕ ಅನ್ನದಾನಿ



ಮಳವಳ್ಳಿ, ಜೂ.20(ಮೋಹನ್‌ರಾಜ್)– ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ಅಗ್ನಿಪಥ್ ಯೋಜನೆ ದೇಶಕ್ಕೆ ಮಾರಕವಾಗಲಿದ್ದು, ಯೋಜನೆಯನ್ನು ವಾಪಸ್ ಪಡೆಯಬೇಕೆಂದು ಶಾಸಕ ಡಾ.ಕೆ.ಅನ್ನದಾನಿ ಆಗ್ರಹಿಸಿದರು.


ಪಟ್ಟಣದ ಪುರಸಭೆಯಲ್ಲಿ ಉಪಾಧ್ಯಕ್ಷರ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಉಪಾಧ್ಯಕ್ಷ ಪ್ರಶಾಂತ್ ಅವರನ್ನು ಅಭಿನಂದಿಸಿ ಮಾತನಾಡಿದ ಅವರು, ಈಗಾಗಲೇ ಅಗ್ನಿಪಥ್ ಯೋಜನೆ ವಿರುದ್ಧ ದೇಶದಲ್ಲಿ ಹೋರಾಟ ನಡೆಯುತ್ತಿವೆ. ಸಾರ್ವಜನಿಕರನ್ನು ಎದುರು ಹಾಕಿಕೊಂಡು ಏನು ಮಾಡಲು ಸಾಧ್ಯವಿಲ್ಲ. ರೈತ ವಿರೋಧಿ ಕಾಯ್ದೆಗಳ ವಿರುದ್ಧ ರೈತರು ಹೋರಾಡಿದ ಪ್ರತಿಫಲವಾಗಿ ಕಾಯ್ದೆಗಳನ್ನು ವಾಪಸ್ ಪಡೆಯುವಂತಾಯಿತು. ಅದೇ ರೀತಿ ಅಗ್ನಿಪಥ್ ಯೋಜನೆ ವಿರುದ್ಧ ದೇಶದ ಯುವಕರು ಆಕ್ರೋಶ ವ್ಯಕ್ತಪಡಿಸುತ್ತಿರುವ ಹಿನ್ನಲೆಯಲ್ಲಿ ಯೋಜನೆ ಅನುಷ್ಠಾನಗೊಳಿಸಬಾರದೆಂದು ಹೇಳಿದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿನಿಂದ ಜೆಡಿಎಸ್ ವರ್ಚಸ್ಸಿಗೆ ಯಾವುದೇ ಧಕ್ಕೆಯಾಗಿಲ್ಲ. ರೈತ ಹೋರಾಟಗಾರ ಮಾದೇಗೌಡರ ಹೆಸರಿನಿಂದ ಕಾಂಗ್ರೆಸ್ ಪಕ್ಷ ಗೆಲುವು ಪಡೆದಿದೆ ಹೊರತು ಕಾಂಗ್ರೆಸ್ ನಾಯಕರಿಂದಲ್ಲ. ಮಧು ಮಾದೇಗೌಡರು ಮೂರ್ನಾಕು ಬಾರಿ ಸೋಲು ಕಂಡಿರುವುದರಿಂದ ಅನುಕಂಪದ ಮತಗಳು ಬಂದಿವೆ. ಒಂದೂವರೆ ವರ್ಷದಿಂದ ಮಧು ಮಾದೇಗೌಡರು ಪದವೀಧರರ ಜೊತೆಗೆ ಉತ್ತಮ ಸಂಬಂಧ ಹೊಂದಿದ್ದರು. ವೈಯಕ್ತಿಕ ಹೋರಾಟದಿಂದ ಗೆಲುವು ಪಡೆದಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಆಯ್ದ ಮತದಾರರು ಮಾತ್ರ ಮತ ಹಾಕಿದ್ದಾರೆ. ಇದನ್ನೇ ಮುಂದಿನ ಚುನಾವಣೆಯ ದಿಕ್ಸೂಚಿ ಎನ್ನಲು ಸಾಧ್ಯವಿಲ್ಲ ಎಂದರು.

ಉಪಾಧ್ಯಕ್ಷ ಎಂ.ಟಿ.ಪ್ರಶಾಂತ್ ಅಧಿಕಾರ ಸ್ವೀಕರಿಸಿ ಮಾತನಾಡಿ, ಎಲ್ಲಾ ವಾರ್ಡ್ ಜನರ ಬೇಡಿಕೆಯಂತೆ ಸಮಸ್ಯೆಗಳನ್ನು ಆಲಿಸಿ, ಪಟ್ಟಣದ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲು ಪ್ರಯತ್ನಿಸಲಾಗುವುದು. ಸಮಗ್ರ ಅಭಿವೃದ್ಧಿಗೆ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಶಾಸಕ ಡಾ.ಕೆ.ಅನ್ನದಾನಿ ಮಾರ್ಗದರ್ಶನದಲ್ಲಿ ಯೋಜನೆ ರೂಪಿಸಲಾಗುವುದು ಎಂದರು. ನೂತನ ಉಪಾಧ್ಯಕ್ಷರನ್ನು ವಿವಿಧ ಪಕ್ಷಗಳ ಮುಖಂಡರು ಅಭಿನಂದಿಸಿದರು. ಇದೇ ವೇಳೆ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡಲಾಯಿತು.

ಪುರಸಭೆ ಅಧ್ಯಕ್ಷೆ ರಾಧಾ, ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ, ಸದಸ್ಯರಾದ ನೂರುಲ್ಲಾ, ಸಿದ್ದರಾಜು, ಕುಮಾರ್, ನಾಗೇಶ್, ಮುಖ್ಯಾಧಿಕಾರಿ ಹರಿಪ್ರಸಾದ್, ಮಾಜಿ ಅಧ್ಯಕ್ಷ ದೊಡ್ಡಯ್ಯ ಪರಶಿವಮೂರ್ತಿ, ಪುಟ್ಟಯ್ಯ ಸೇರಿದಂತೆ ಎಂ.ಟಿ.ಪ್ರಶಾಂತ್ ಕುಟುಂಬಸ್ಥರು ಹಾಗೂ ಸ್ನೇಹಿತರು ಇದ್ದರು.

ಯೋಗ ದಿನಾಚರಣೆ: ಸ್ಥಳ ಪರಿಶೀಲಿಸಿದ ಡಿಸಿ



ಮಂಡ್ಯ, ಜೂ.20–ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಜೂ.21 ರಂದು ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ಆಯೋಜಿಸಿದ್ದು, ಈ ಸಂಬಂಧ ಜಿಲ್ಲಾಧಿಕಾರಿ ಎಸ್.ಅಶ್ವತಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಪಾಂಡವಪುರ ಎಸಿ ಬಿ.ಸಿ.ಶಿವಾನಂದಮೂರ್ತಿ, ತಹಶೀಲ್ದಾರ್ ಶ್ವೇತಾ ಸೇರಿದಂತೆ ಇತರರಿದ್ದರು.

ವಾರಣಾಸಿಯಲ್ಲಿ ಸಿಲುಕಿದ್ದ ಮಂಡ್ಯ ಪ್ರವಾಸಿಗರು ಸುರಕ್ಷಿತವಾಗಿ ವಾಪಸ್

ಮಂಡ್ಯ, ಜೂ.20(ಮೋಹನ್‌ರಾಜ್)– ಉತ್ತರ ಭಾರತದ ಕಾಶಿ ವಾರಣಾಸಿಗೆ ಪ್ರವಾಸಕ್ಕೆ ತೆರಳಿ ಅಗ್ನಿಪಥ್ ಯೋಜನೆ ವಿರೋಧಿಸಿ ನಡೆಯುತ್ತಿರುವ ಹಿಂಸಾಚಾರದಲ್ಲಿ ಸಿಲುಕಿದ್ದ ಮಂಡ್ಯ ಜಿಲ್ಲೆಯ 31 ಮಂದಿಯನ್ನು ಸುರಕ್ಷಿತವಾಗಿ ವಾಪಸ್ ಕರೆತರಲಾಗಿದೆ.

ಜೂ.11ರಂದು ಮಂಡ್ಯದಿಂದ ವಾರಣಾಸಿಗೆ ತೆರಳಿ ಜೂ.17ರಂದು ಪೂರ್ವ ನಿಗದಿಯಾಗಿ ವಾಪಸ್ ಬರಲು ರೈಲು ಟಿಕೆಟ್ ಬುಕ್ ಮಾಡಿಸಿದ್ದರು. ಆದರೆ ಅಗ್ನಿಪಥ್ ಯೋಜನೆ ವಿರುದ್ಧ ಪ್ರತಿಭಟನೆ ನಡೆಸಿದ್ದರಿಂದ ರೈಲು ರದ್ದಾದ ಕಾರಣ ವಾರಣಾಸಿಯಲ್ಲಿಯೇ ಉಳಿದು ಊಟ, ವಸತಿ, ಔಷಧಿ ಇತರೆ ಸೌಲಭ್ಯ ಇಲ್ಲದೇ ಸಮಸ್ಯೆಯುಂಟಾಗಿತ್ತು. ಪ್ರವಾಸಿಗರು ತಮಗೆ ಸಹಾಯ ಮಾಡುವಂತೆ ಸರ್ಕಾರ ಮತ್ತು ಜಿಲ್ಲಾಡಳಿತ ಕೋರಿದ್ದರು. ತಕ್ಷಣ ಸಮಸ್ಯೆಗೆ ಸ್ಪಂದಿಸಿದ ರಾಜ್ಯದ ವಿಪತ್ತು ನಿರ್ವಹಣಾ ಅಧಿಕಾರಿಗಳು ಸಂಬಂಧಿಸಿದ ಅಲ್ಲಿನ ಅಧಿಕಾರಿಗಳೊಂದಿಗೆ ಸಂಪರ್ಕಿಸಿ, ಜಿಲ್ಲೆಗೆ ಯಾತ್ರಾರ್ಥಿಗಳನ್ನು ವಾಪಸ್ ಕರೆತರುವಲ್ಲಿ ಯಶಸ್ವಿಯಾಗಿದ್ದಾರೆ.

ಧಾರ್ಮಿಕ ಕಾರ್ಯಗಳಿಂದ ಶಾಂತಿ, ನೆಮ್ಮದಿ ಸಾಧ್ಯ

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ



ಕೆ.ಆರ್.ಪೇಟೆ, ಜೂ.20(ಶ್ರೀನಿವಾಸ್)– ಧಾರ್ಮಿಕ ಕಾರ್ಯಗಳಿಂದ ಮನುಷ್ಯ ಸುಖ, ಶಾಂತಿ, ನೆಮ್ಮದಿ ಪಡೆಯಲು ಸಾಧ್ಯ ಹಾಗಾಗಿ ನಮ್ಮ ಸಂಸ್ಕೃತಿ, ಪರಂಪರೆ ಪ್ರತಿಬಿಂಬವಾಗಿರುವ ದೇವಾಲಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ಗೂಡೇಹೊಸಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರು ಹಾಗೂ ದಾನಿಗಳ ನೆರವಿನಿಂದ ನೂತನವಾಗಿ ಪುನರ್ ನಿರ್ಮಾಣ ಮಾಡಿರುವ ಶ್ರೀ ಆಂಜನೇಯಸ್ವಾಮಿ, ಶ್ರೀ ಚನ್ನಕೇಶವಸ್ವಾಮಿ ಹಾಗೂ ಶ್ರೀಮಾರಮ್ಮ ದೇವಿ ದೇವಾಲಯಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ದೇವಾಲಯಗಳನ್ನು ನಿರ್ಮಿಸುವ ಜೊತೆ ಜೊತೆಗೆ ಶಾಲೆಗಳ ಅಭಿವೃದ್ಧಿಗೂ ಗ್ರಾಮಸ್ಥರು ಮುಂದಾಗಬೇಕು. ದಾನಿಗಳಿಂದ ದೇವಾಲಯಗಳನ್ನು ಅಭಿವೃದ್ಧಿ ಪಡಿಸುವ ಮಾದರಿಯಲ್ಲೇ ಗ್ರಾಮದ ಸರ್ಕಾರಿ ಶಾಲೆಗಳ ಅಭಿವೃದ್ಧಿಗೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಗೂಡೇಹೊಸಹಳ್ಳಿ ದೇವಾಲಯಗಳ ಅಭಿವೃದ್ಧಿಗೆ ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಜಿ. ಮಾದೇಗೌಡರ ಪ್ರದೇಶಾಭಿವೃದ್ಧಿ ನಿಧಿಯಿಂದ ಹಾಗೂ ಕಾಂಗ್ರೆಸ್ ಮುಖಂಡರು ಸೇರಿ ಒಟ್ಟು 5ಲಕ್ಷ ರೂ. ನೀಡುವುದಾಗಿ ಇದೇ ವೇಳೆ ಪ್ರಕಟಿಸಿದರು.

ಈ ವೇಳೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಎಂಎಲ್‌ಸಿ ದಿನೇಶ್ ಗೂಳಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್, ಸಮಾಜ ಸೇವಕ ವಿಜಯ್ ರಾಮೇಗೌಡ, ದಾನಿಗಳಾದ ಇಂಜಿನಿಯರ್ ಜಿ.ಸಿ.ಚನ್ನ ಕೇಶವ, ಶೀಲಾ, ವೈದ್ಯ ಡಾ.ರಾಮಕೃಷ್ಣೇ ಗೌಡ, ತಾಪಂ ಮಾಜಿ ಸದಸ್ಯ ಮಾಧವ ಪ್ರಸಾದ್, ಮುಖಂಡರಾದ ಜಾನೇಗೌಡ, ಕಾಂತರಾಜು, ಈರಪ್ಪ, ಮಂಜು, ಎ.ಬಿ.ಕುಮಾರ್, ಬಸವರಾಜು, ಲಕ್ಷ್ಮೀಪುರ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರೇಗೌಡ, ಸಂತೋಷ್, ಜವರಾಯಿಗೌಡ, ಚನ್ನಿಂಗೇ ಗೌಡ, ನಂದಕುಮಾರ್, ಖಜಾಂಚಿ ಗೋಪಾಲಕೃಷ್ಣ, ಬೇಲೋರೇಗೌಡ, ಬಸವೇಗೌಡ, ಲೋಕೇಶ್, ಜಿ.ಬಿ. ಶೇಖರ್, ಬಾವಿಮನೆ ಕುಮಾರ್, ಮಂಜೇಗೌಡ, ಎ.ಸ್ವಾಮೀಗೌಡ, ಟಿ.ಕೆ.ಜಯಲಕ್ಷ್ಮಮ್ಮ, ಗಣೇಶಗೌಡ, ಕೃಷ್ಣೇಗೌಡ, ಮಂಜಯ್ಯ, ಜಿ.ಡಿ.ಮಂಜಪ್ಪ, ನಾರಾಯಣಸ್ವಾಮಿ, ನಿವೇಶನ ದಾನಿಗಳಾದ ಬಚ್ಚಪ್ಪನ ರಮೇಶ್, ಚಂದ್ರಾಯಿ ಕಾಳಮ್ಮ, ದೊಡ್ಡನಿಂಗಪ್ಪನ ಕಾಳಪ್ಪ, ಸಣ್ಣಬೇಲೂರಯ್ಯನ ಕುಟುಂಬ, ಬಾವಿಮನೆ ಚನ್ನಗೌಡರ ಕುಟುಂಬ, ಚಿಕ್ಕಯ್ಯನ ಚನ್ನಿಂಗೇಗೌಡರ ಕುಟಂಬದ ಸೇರಿದಂತೆ ಅನೇಕ ಗಣ್ಯರು ಮತ್ತು ಗ್ರಾಮಸ್ಥರು ಹಾಗೂ ಸಾವಿರಾರು ಭಕ್ತಾಧಿಗಳು ಮೂರೂ ದೇವಾಲಯಗಳ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಭಾರತೀನಗರ, ಜೂ.20– ಭಾರತೀನಗರ ಪಟ್ಟಣ ವ್ಯಾಪ್ತಿಯಲ್ಲಿ ಕವರ್ಡ್ ಕಂಡಕ್ಟರ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಭಾರತೀನಗರ, ಬಿಸರಹಳ್ಳಿ, ಡಿ.ಎ.ಕೆರೆ. ಮುಟ್ಟನಹಳ್ಳಿ, ಅಣ್ಣೂರು ಮತ್ತು ಕೆ.ಶೆಟ್ಟಹಳ್ಳಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಜೂ.21 ರಂದು ಬೆಳಗ್ಗೆ 9.30 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮಂಡ್ಯ, ಜೂ.20– ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ಯೋಗನಿರತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಜೂ.21 ರಂದು ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 7 ರಿಂದ 8 ರವರೆಗೆ ಯೋಗಾಭ್ಯಾಸ ಕಾರ್ಯಕ್ರಮ ಹಾಗೂ ಬೆಳಗ್ಗೆ 8 ರಿಂದ 8.30ರವರೆಗೆ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸುವರು. ಶಾಸಕ ರವೀಂದ್ರ ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಡಾ.ಕೆ.ಸಿ.ನಾರಾಯಣಗೌಡ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ ಅಂಬರೀಶ್, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ದಿನೇಶ್ ಗೂಳಿಗೌಡ, ಕೆ.ಟಿ ಶ್ರೀಕಂಠೇಗೌಡ, ಶಾಸಕರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಎಂ.ಶ್ರೀನಿವಾಸ್, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ದಿ ಮೈಸೂರು ಶುಗರ್ ಕಂಪನಿ ಲಿ ಅಧ್ಯಕ್ಷ ಟಿ.ಶಿವಲಿಂಗೇಗೌಡ, ಶ್ರೀರಂಗಪಟ್ಟಣ ಪುರಸಭಾಧ್ಯಕ್ಷೆ ಪಿ.ನಿರ್ಮಲ, ಉಪಾಧ್ಯಕ್ಷ ಎಂ.ಕೃಷ್ಣಪ್ಪ, ಮೈಸೂರು ಕಾವೇರಿ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎನ್.ಶಿವಲಿಂಗಯ್ಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಹಾಗೂ ಜಿಲ್ಲಾಧಿಕಾರಿ ಅಶ್ವಥಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಗೂಡ್ಸ್ ಟೆಂಪೋಗೆ ಬೆಂಕಿ: 10 ಲಕ್ಷ ನಷ್ಟ

ಮಂಡ್ಯ, ಜೂ.20(ಮೋಹನ್‌ರಾಜ್)– ಗೂಡ್ಸ್ ಟೆಂಪೋಗೆ ಆಕಸ್ಮಿಕ ಬೆಂಕಿ ತಗುಲಿ ವಾಹನ ಬೆಂಕಿಗೆ ಆಹುತಿಯಾದ ಘಟನೆ ಕಳೆದ ತಡರಾತ್ರಿ ನಗರದ ಮೇಲುಕೋಟೆ ರಸ್ತೆಯಲ್ಲಿ ಸಂಭವಿಸಿದೆ. ಅಗ್ನಿ ದುರಂತದಲ್ಲಿ ಯಾರಿಗೂ ಪ್ರಾಣಾಪಾಯವಾಗಿಲ್ಲ. ಅಗ್ನಿ ಅವಘಡದಿಂದ ಟೆಂಪೋ ಸುಟ್ಟು ಕರಕಲಾಗಿದ್ದು, 10 ಲಕ್ಷ ರೂ. ನಷ್ಟವಾಗಿದೆ ಎನ್ನಲಾಗಿದೆ. ಘಟನೆ ಸಂಬಂಧ ಸ್ಥಳೀಯರಿಂದ ಮಾಹಿತಿ ಪಡೆದ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿ ಹೆಚ್ಚಿನ ನಷ್ಟ ತಡೆದರು. ಈ ಸಂಬಂಧ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮದಾಸ್‌ರಿಗೆ ಪ್ರಧಾನಿ ಮೋದಿ 'ಪ್ರೀತಿಯ ಗುದ್ದು'

ಬೆನ್ನು ಸವರಿ ಕುಶಲ ವಿಚಾರಣೆ: ತಾಯಿಯ ಉಡುಗೊರೆ ನೆನಪಿನ ಬುತ್ತಿ!



ಮೈಸೂರು, ಜೂ.20– ಪ್ರಧಾನಿ ಮೋದಿ, ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರಿಗೆ ಪ್ರೀತಿಯ 'ಗುದ್ದು' ನೀಡಿ ಬೆನ್ನು ಸವರಿ ಕುಶಲೋಪರಿ ನಡೆಸಿದರು.

ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ಸಂಜೆ ಏರ್ಪಡಿಸಲಾಗಿದ್ದ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ಹಾಗೂ ಸಾರ್ವಜನಿಕ ಸಮಾವೇಶದಲ್ಲಿ ಮೋದಿ ಅವರು ವೇದಿಕೆ ಮೇಲೆ ಆಸೀನರಾಗುತ್ತಿದ್ದಂತೆ ವೇದಿಕೆಯಲ್ಲೇ ಒಂದೆಡೆ ನಿಂತಿದ್ದ ಶಾಸಕ ರಾಮದಾಸ್ ಅವರನ್ನು ಕೈ ಬೀಸಿ ಕರೆದರು. ಆಗ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಸ್ವಾಗತ ಭಾಷಣ ಮಾಡುತ್ತಿದ್ದರು. ತಕ್ಷಣ ತಮ್ಮ ಬಳಿ ಬಂದು ಬಾಗಿ ನಿಂತ ರಾಮದಾಸ್ ಅವರ ಬೆನ್ನ ಮೇಲೆ ಪ್ರೀತಿಯಿಂದ ಗುದ್ದಿ, ಕುಶಲೋಪರಿ ವಿಚಾರಿಸಿದರು. ಈ ವೇಳೆ ನೆರೆದಿದ್ದ ಕಾರ್ಯ ಕರ್ತರಿಂದ ರಾಮದಾಸ್ ಮತ್ತು ಮೋದಿ ಪರ ಜಯಘೋಷಗಳು ಮೊಳಗಿದವು.

ರಾಮದಾಸ್ ಮೇಲಿನ ಮೋದಿಯವರ ಪ್ರೀತಿ ಅಷ್ಟಕ್ಕೇ ನಿಲ್ಲಲಿಲ್ಲ ತಮ್ಮ ಭಾಷಣ ಮುಗಿಸಿ, ವೇದಿಕೆಯಿಂದ ನಿರ್ಗಮಿಸುವಾಗ ಇತರ ನಾಯಕರ ಜೊತೆ ಲೋಕರೂಢಿಯಾಗಿ ಮಾತನಾಡುತ್ತಿದ್ದರು. ಆಗಲೂ ಪಕ್ಕದಲ್ಲೇ ಬಾಗಿ ನಿಂತಿದ್ದ ರಾಮದಾಸ್ ಅವರನ್ನು ತಮ್ಮತ್ತ ಸೆಳೆದುಕೊಂಡು ಬೆನ್ನು ತಟ್ಟುತ್ತಾ ವಿಶ್ವಾಸಪೂರ್ವಕವಾಗಿ ಮಾತನಾಡಿಸಿದ್ದಲ್ಲದೇ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳೊಂದಿಗೆ ರಾಮದಾಸ್ ಅವರ ಕುರಿತಾಗಿ ಪ್ರಶಂಸೆ ಮಾತನಾಡಿದರು.

ಮೋದಿ ಅವರು ನಿಮ್ಮೊಂದಿಗೆ ಮಾತನಾಡಿದಾದರೂ ಏನೂ? ಎಂದು 'ಮೈಸೂರು ಮಿತ್ರ' ಪ್ರಶ್ನಿಸಿದಾಗ ಸ್ವತಃ ರಾಮದಾಸ್, ಮೊದಲು ನನ್ನನ್ನು ಕರೆದ ಮೋದಿಯವರು, 'ಮನೆಯಲ್ಲಿ ಎಲ್ಲರೂ ಹೇಗಿದ್ದಾರೆ. ಶ್ರೀಕಾಂತ್ ಹೇಗಿದ್ದಾನೆ. ಮಕ್ಕಳು ಹೇಗಿದ್ದಾರೆ' ಎಂದು ವಿಚಾರಿಸಿದರು. ಅವರ ಭಾಷಣ ಮುಗಿದ ನಂತರ ಎಲ್ಲರೊಂದಿಗೂ ನಿಂತು ಮಾತನಾಡುತ್ತಿದ್ದಾಗ ನನ್ನನ್ನು ತೋರಿಸಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳಿಗೆ 'ಇವರ ತಾಯಿ ಇದ್ದಾಗ ನನಗೆ ಬಹಳ ಉಡುಗೊರೆಗಳು ಬರುತ್ತಿತ್ತು. ನನ್ನ ಹುಟ್ಟುಹಬ್ಬಕ್ಕಂತೂ ಉಡುಗೊರೆ ತಪ್ಪುತ್ತಿರಲಿಲ್ಲ. ತಾಯಿ ಹೋದ ಮೇಲೆ ಈ ಸಹೋದರರು ನನ್ನನ್ನು ಮರೆತುಬಿಟ್ಟಿದ್ದಾರೆ' ಎಂದು ನಗುತ್ತಾ ಪ್ರೀತಿಯಿಂದ ಛೇಡಿಸಿದರು. ಆಗ ನಾನು ತಲೆಬಾಗಿ 'ನಾವು ನಿಮ್ಮನ್ನು ಮರೆಯಲು ಸಾಧ್ಯವೇ ಇಲ್ಲ ಸಾರ್' ಎಂದು ಹೇಳಿದೆ. ಪ್ರಧಾನಿ ಮೋದಿ ಅವರು ಸಾರ್ವಜನಿಕವಾಗಿ ನನ್ನ ಮೇಲೆ ತೋರಿದ ಪ್ರೀತಿಗೆ ಆಭಾರಿಯಾಗಿದ್ದೇನೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟನೆ

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿದ ಪ್ರಧಾನಿ ಮೋದಿ

ಮಠ-ಮಾನ್ಯಗಳು ಸಂಸ್ಕೃತಿಯ ರಾಯಭಾರಿ; ಮೋದಿ ಬಣ್ಣನೆ



ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ವರ್ಚುಯಲ್ ಮೂಲಕ ಸೋಮವಾರ ಉದ್ಘಾಟಿಸಿದರು. (ಎಡದಿಂದ) ಸಂಸದ ಪ್ರತಾಪ್ ಸಿಂಹ, ಕೇಂದ್ರ ಸಚಿವ ಪ್ರಹ್ಲಾದ್ ವಿ.ಜೋಶಿ, ರಾಜ್ಯಪಾಲ ಥಾವರ್ ಚಂದ್‌ಗೆಹ್ಲೋಟ್, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ, ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉಪಸ್ಥಿತರಿದ್ದರು.

ಮೈಸೂರು, ಜೂ.20(ಎಂಕೆ, ಜಿಎ)– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ವರ್ಚುಯಲ್ ಮೂಲಕ ಉದ್ಘಾಟಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ರಚಿತ 'ಪತಂಜಲಿಸ್ ಯೋಗ ಸೂತ್ರಾಸ್', 'ಶಿವ ಸೂತ್ರಾಸ್' ಹಾಗೂ 'ನಾರದ ಭಕ್ತಿ ಸೂತ್ರಾಸ್' ಕೃತಿಗಳನ್ನು ಲೋಕಾರ್ಪಣೆಗೊಳಿಸಿದರು.

ಬಳಿಕ ಕನ್ನಡದಲ್ಲೇ ಮಾತು ಆರಂಭಿಸಿದ ಪ್ರಧಾನಿಗಳು ಸುತ್ತೂರು ಸಂಸ್ಥಾನ ಶಿಕ್ಷಣ, ಸಾಮಾಜಿಕ ಸೇವೆ ಹಾಗೂ ಅನ್ನ ದಾಸೋಹಕ್ಕೆ ಪ್ರಖ್ಯಾತಿ ಪಡೆದಿದೆ. ಸುತ್ತೂರು ಕ್ಷೇತ್ರಕ್ಕೆ ಆಗಮಿಸಿರುವುದಕ್ಕೆ ನನಗೆ ಅತ್ಯಂತ ಸಂತೋಷವಾಗಿದೆ. ವೈಯಕ್ತಿಕವಾಗಿ ಧನ್ಯತಾ ಭಾವ ಮೂಡಿದೆ. ಭವಿಷ್ಯದಲ್ಲಿ ಸುತ್ತೂರು ಸಂಸ್ಥಾನ ಭವ್ಯ ಸ್ವರೂಪ ಪಡೆದುಕೊಳ್ಳಲಿದೆ ಎಂದರು.

ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಮೈಸೂರಿನಲ್ಲಿ ಸುತ್ತೂರು ಮಠ, ತುಮಕೂರಿನಲ್ಲಿ ಸಿದ್ದಗಂಗಾ ಮಠ, ಬೀದರ್‌ನಲ್ಲಿ ಬಸವ ಕಲ್ಯಾಣ ಮಠ, ಮುರುಘಾ ಮಠ ಸೇರಿದಂತೆ ಅನೇಕ ಮಠಗಳಿದ್ದು, ಶಿಕ್ಷಣ, ವಸತಿ, ಅನ್ನ ದಾಸೋಹ ಸೇರಿದಂತೆ ತ್ರಿವಿಧ ದಾಸೋಹದಲ್ಲಿ ತೊಡಗಿಕೊಂಡಿವೆ. ಅಸಂಖ್ಯಾತ ವಿದ್ಯಾಕೇಂದ್ರಗಳಾಗಿ ದಾಸೋಹದ ಮೂಲಕವೇ ಗುರುಪರಂಪರೆಯನ್ನು ಬೆಳೆಸಿಕೊಂಡು ಬಂದಿವೆ ಎಂದು ಗುಣಗಾನ ಮಾಡಿದರು.

'ನಾರದ ಭಕ್ತಿ ಸೂತ್ರಾಸ್', ಯೋಗ ಸೂತ್ರಾಸ್' ಹಾಗೂ 'ಶಿವ ಸೂತ್ರಾಸ್' ಕೃತಿಗಳು ಅನೇಕ ಭಾಷೆಗಳಲ್ಲಿ ಲೋಕಾರ್ಪಣೆಯಾಗ ಬೇಕಾಗಿದೆ ಪೂಜ್ಯ ಸಿದ್ದೇಶ್ವರ ಸ್ವಾಮೀಜಿಯವರು ಭಾರತೀಯ ಪ್ರಾಚೀನ ಸಂಸ್ಕೃತಿಯ ಪ್ರತಿ ನಿಧಿಸಿದ್ದಾರೆ. ಅಲ್ಲದೆ 'ಶೃತಿ' ಪರಂಪರೆಯನ್ನು ಎಲ್ಲರ ಹೃದಯಕ್ಕೂ ತಲುಪಿಸಿದ್ದಾರೆ. ವಿಶ್ವ ಯೋಗ ದಿನದ ಸಮಯದಲ್ಲಿ 'ಪತಂಜಲಿ ಯೋಗ ಸೂತ್ರೆ', 'ನಾರದ ಭಕ್ತಿ ಸೂತ್ರೆ' ಹಾಗೂ 'ಶಿವಸೂತ್ರೆ'ವನ್ನು ಅಳವಡಿಸಿಕೊಳ್ಳಬೇಕು. ಜ್ಞಾನಕ್ಕೆ ಸಮಾನವಾದದ್ದು ಯಾವುದೂ ಇಲ್ಲ ಎಂಬುದನ್ನು ತಿಳಿಸುವ ಮೂಲಕ ಭಕ್ತಿ ಯೋಗ ಮತ್ತು ಜ್ಞಾನ ಯೋಗವನ್ನು ತಿಳಿಸಿದ್ದಾರೆ. ಜಗತ್ತಿನಲ್ಲಿನ ಸಾಮಾಜಿಕ ವ್ಯವಸ್ಥೆ, ಮಾನವೀಯ ಮೌಲ್ಯಗಳನ್ನು ಒಳಗೊಂಡ ಅದ್ಭುತ ಗ್ರಂಥ 'ನಾರದ ಸೂತ್ರಾಸ್' ಎಂದು ಬಣ್ಣಿಸಿದರು.

ನಮ್ಮ ಶಾಸ್ತ್ರ–ಪುರಾಣಗಳಲ್ಲಿ ಏನಿಲ್ಲಾ ಹೇಳಿ? ಧ್ಯಾನಕ್ಕೆ ಸಮಾನವಾದ ಪವಿತ್ರವಾದುದು ಯಾವುದು ಇಲ್ಲ. ಭಾರತ ದೇಶಕ್ಕೆ ಈ ನೆಲದ ಸಂಸ್ಕೃತಿಯೇ ಚೇತನ ಶಕ್ತಿಯಾಗಿದೆ. ಯುಗ ಬದಲಾದರು, ಸಮಯ ಬದಲಾದರೂ ಎಂದಿಗೂ ದೇಶದ ಸಂಸ್ಕೃತಿ ಬದಲಾಗದು. ಋಷಿ–ಮುನಿಗಳು, ಸಾಧು–ಸಂತರು ದೇಶದ ಆತ್ಮವಾದ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ್ದಾರೆ. ಮಠಮಾನ್ಯಗಳು ಸಂಸ್ಕೃತಿಯ ರಾಯಭಾರಿ ಆಗಿವೆ ಉತ್ತರದಲ್ಲಿನ ಕಾಶಿಯಂತೆ ನಂಜನಗೂಡು ದಕ್ಷಿಣ ಕಾಶಿಯಾಗಿ ಪ್ರಖ್ಯಾತಿ ಪಡೆದಿದೆ. ಸತ್ಯದ ಅಸ್ತಿತ್ವ ಸಂಶೋಧನೆಯಲ್ಲಿ ಇಲ್ಲ. ಸೇವೆ ಮತ್ತು ತ್ಯಾಗದಲ್ಲಿದೆ. ಇದಕ್ಕೆ ಸುತ್ತೂರು ಮಠ ಅತ್ಯುತ್ತಮ ಉದಾಹರಣೆಯಾಗಿದ್ದು, ದೇಶ ವಿದೇಶಗಳಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳು, 2 ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪಿಸಿ, ಮುನ್ನಡೆಸುವ ಮೂಲಕ ಸಾಂಸ್ಕೃತಿಕ ರಾಯಭಾರಿಯಾಗಿದೆ ಎಂದು ಗುಣಗಾನ ಮಾಡಿದರು.

ಕ್ರಾಂತಿಕಾರಕ ಬದಲಾವಣೆ: ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಾಗಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ದೇಶ ಅಭಿವೃದ್ಧಿಯ ಪಥದಲ್ಲಿ ಸಾಗಲಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕನ್ನಡ, ತಮಿಳು, ತೆಲುಗು ಸೇರಿದಂತೆ ದೇಶದ ಎಲ್ಲಾ ಭಾಷೆಗಳೂ ಇದ್ದು, ತಮ್ಮ ಮಾತೃ ಭಾಷೆಯಲ್ಲೇ ಕಲಿಯಲು ಅವಕಾಶ ನೀಡಲಾಗಿದೆ. ಇದರ ಸದುಪಯೋಗವನ್ನು ಪ್ರತಿಯೊಂದು ರಾಜ್ಯಗಳೂ ಪಡೆದುಕೊಳ್ಳಬೇಕು. ದೇಶದ ಏಕೈಕ ಸಂಸ್ಕೃತ ಪತ್ರಿಕೆ 'ಸುಧರ್ವಾ' ಮೈಸೂರಿನಿಂದಲೇ ಪ್ರಕಟಗೊಳ್ಳುತ್ತಿರುವುದು ವಿಶೇಷವಾಗಿದ್ದು, ಮುಂದಿನ ದಿನಗಳಲ್ಲಿ ಸಂಸ್ಕೃತಕ್ಕೆ ಅಪಾರ ಮನ್ನಣೆ ದೊರಕಲಿದೆ ಎಂದರು.

ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಹ್ಲಾದ್ ವಿ.ಜೋಶಿ, ಸಂಸದ ಪ್ರತಾಪ್ ಸಿಂಹ, ಜೆಎಸ್‌ಎಸ್ ಮಹಾವಿದ್ಯಾಪೀಠದ ಡಾ.ಸಿ.ಜಿ. ಬೆಟಸೂರಮಠ ಉಪಸ್ಥಿತರಿದ್ದರು.


ಆಹಾರವನ್ನು ರಾಸಾಯನಿಕ ಮುಕ್ತವಾಗಿಸಲು ಸ್ವಾಮೀಜಿಗಳು ಜಾಗೃತಿ ಮೂಡಿಸಬೇಕು

ಮೈಸೂರು, ಜೂ.20(ಎಂಕೆ, ಜಿಎ)– ದೇಶದಲ್ಲಿ ಬೆಳೆಯುತ್ತಿರುವ ಆಹಾರವನ್ನು ರಾಸಾಯನಿಕ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಸ್ವಾಮೀಜಿಗಳು ಜನರಲ್ಲಿ ಅರಿವು ಮತ್ತು ಜಾಗೃತಿಯನ್ನು ಮೂಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು.

ನಾವು ಸೇವಿಸುವ ಆಹಾರ ಶುದ್ಧವಾಗಿದ್ದರೆ, ನಮ್ಮ ಚಿಂತನಾ ಕ್ರಮವೂ ಶುದ್ಧವಾಗಿರುತ್ತದೆ. ಆದ್ದರಿಂದ ಸಮಾಜ ಮತ್ತು ಸಮುದಾಯಕ್ಕೆ ಮಾರ್ಗದರ್ಶನ ನೀಡುತ್ತಿರುವ ಮಠದ ಸ್ವಾಮೀಜಿಗಳು, ಸಂತರು ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಶುದ್ಧ ಆಹಾರ ಬೆಳೆಯುವ ಅಭಿಯಾನಕ್ಕೆ ಕೈ ಜೋಡಿಸಬೇಕು ಎಂದು ಕೋರಿದರು.

ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸಲು, ಕನಸುಗಳನ್ನು ಸಾಕಾರಗೊಳಿಸಲು ಸಂತರ, ಪರಿತ್ಯಾಗಿಗಳ ಹಾಗೂ ಸ್ವಾಮೀಜಿಗಳ ಮಾರ್ಗದರ್ಶನ ಅವಶ್ಯವಾಗಿದೆ. ಸಂತ ಕುಲವು ದಾರಿದೀಪವಾಗಿ ಕಾರ್ಯನಿರ್ವಹಿಸಬೇಕು. ಕರ್ನಾಟಕದ ಜನರು ವಿದ್ವತ್ ಪೂರ್ಣರು. ಸಹಸ್ರಾರು ವರ್ಷಗಳ ಹಿಂದೆ ಬರೆದಿರುವ ಗ್ರಂಥಗಳನ್ನು ಸಮಾಜ ವಿಜ್ಞಾನದ ಮೂಲಕ ಅಧ್ಯಯನ ನಡೆಸಿ, ಆ ಗ್ರಂಥಗಳಲ್ಲಿ ಇರುವ ತತ್ವ ಸಾರವನ್ನು ಇಡೀ ದೇಶದ ಜನರಿಗೆ ಆಧುನಿಕ ಪರಿಭಾಷೆಯಲ್ಲಿ ತಿಳಿಸುವಂತಹ ಕಾರ್ಯ ಮಾಡಬೇಕು ಎಂದರು.

ನೂರಾರು ಮಠಾಧೀಶರು ಭಾಗಿ...



ಸುತ್ತೂರು ಶಾಖಾ ಮಠದಲ್ಲಿ ಆಯೋಜಿಸಿದ್ದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮಕ್ಕೆ ರಾಜ್ಯದ ಹಲವಾರು ಮಠಗಳ ಮಠಾಧೀಶರು ಭಾಗವಹಿಸಿ ಗಮನ ಸೆಳೆದರು. ಮಠಾಧೀಶರಿಗೆ ಮೀಸಲಿಟ್ಟಿದ್ದ ಪ್ರತ್ಯೇಕ ಆಸನಗಳಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಣೆ ಮಾಡಿದರು.

ಯೋಗಿಯಾಗಿರುವ ಪ್ರಧಾನಿ ಮೋದಿ...

ಬಿಡುಗಡೆಯಾಗಿರುವ ಮೂರು ಗ್ರಂಥಗಳು ಯೋಗ ಗ್ರಂಥಗಳಾಗಿದ್ದು, ಯೋಗಿಗಳೇ ಆಗಿರುವ ಪ್ರಧಾನಿ ಮೋದಿಯವರಿಂದ ಬಿಡುಗಡೆಯಾಗಿದ್ದು ಬಹಳ ಸಂತೋಷದ ವಿಷಯವಾಗಿದೆ. ಮೋದಿಯವರ ಮಾತುಗಳು ಜನರ ಹೃದಯ ಮತ್ತು ಮನಸ್ಸುಗಳನ್ನು ಅರಳಿಸುತ್ತದೆ. ದಿನ ಪೂರ್ತಿ ಕೆಲಸ ಮಾಡಿದರೂ ಮೋದಿಯವರ ಮುಖದ ಮಂದಸ್ಮಿತ ಕಡಿಮೆ ಆಗುವುದಿಲ್ಲ. ನೂರು ವರ್ಷ ಆಗಿರುವ ಅವರ ತಾಯಿ ನೀನು ನೂರೊಂದು ವರ್ಷ ಬಾಳಬೇಕು ಎಂದು ಆಶೀರ್ವಾದ ಮಾಡಿದ್ದಾರೆ. ಮೋದಿಯವರು ನೂರು ವರ್ಷಗಳಿಂತಲೂ ಹೆಚ್ಚಾಗಿ ಬಾಳಲಿ.

– **ಶ್ರೀ ಸಿದ್ದೇಶ್ವರ ಸ್ವಾಮೀಜಿ,** ಜ್ಞಾನಯೋಗಾಶ್ರಮ, ವಿಜಯಪುರ

ಕೆಎಸ್‌ಎಸ್ ಸಂಸ್ಕೃತ ಪಾಠ ಶಾಲೆಯಲ್ಲೇ 15 ಇದ್ದ ವಿದ್ಯಾರ್ಥಿಗಳ ಸಂಖ್ಯೆ ಈಗ 450ಕ್ಕೂ ಅಧಿಕ

● ದಿವ್ಯ ಸಾನ್ನಿಧ್ಯ ವಹಿಸಿದ್ದ ಸುತ್ತೂರು ಶ್ರೀ ವಿವರಣೆ ● 'ಕಾಯಕವೇ ಕೈಲಾಸ' ಸುತ್ತೂರು ಶ್ರೀ ಕ್ಷೇತ್ರದ ಧ್ಯೇಯ ● ಮೋದಿಯವರ ಅವಿರತ ಕಾಯಕ ಶಕ್ತಿಯ ಬಗ್ಗೆ ಶ್ರೀಗಳ ಅತೀವ ಮೆಚ್ಚುಗೆ

ಮೈಸೂರು, ಜೂ.20(ಎಂಕೆ, ಜಿಎ)– ಎಲ್ಲಾ ಭಾಷೆಗಳ ಮಾತೃ ಭಾಷೆಯಾದ ಸಂಸ್ಕೃತ ಭಾಷೆಯ ಕೆಎಸ್‌ಎಸ್ ಸಂಸ್ಕೃತ ಪಾಠ ಶಾಲೆ 15 ವಿದ್ಯಾರ್ಥಿಗಳಿಂದ ಆರಂಭವಾಗಿ ಇಂದು 450ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟನೆ ಹಾಗೂ ಕೃತಿಗಳ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಸಂಸ್ಕೃತ ಭಾಷೆಯು ಎಲ್ಲರಿಗೂ ತಲುಪವಂತಾಗಬೇಕೆಂದು ಮಂತ್ರ ಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮೀಜಿ 1937ರಲ್ಲಿ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿದರು. ನಂತರ ಶ್ರೀ ಡಾ.ರಾಜೇಂದ್ರ ಸ್ವಾಮೀಜಿಯವರು ಮುಂದುವರಿಸಿ, ಅಭಿವೃದ್ಧಿಪಡಿಸಿದರು ಎಂದರು.

ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ಅವರು, ವಾಣಿವಿಲಾಸ ರಸ್ತೆಯಲ್ಲಿರುವ ಕಟ್ಟಡವನ್ನು ಖರೀದಿಸಿ, ಸಂಸ್ಕೃತ ಅಧ್ಯಯನಕ್ಕಾಗಿ ಸುತ್ತೂರು ಮಠಕ್ಕೆ ನೀಡಿದ್ದಕ್ಕಾಗಿ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಎಂದು ಹೆಸರಿಡಲಾಗಿದೆ. 15 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಪಾಠಶಾಲೆಯಲ್ಲಿ ಈಗ 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸುಮಾರು 100 ವರ್ಷಗಳಿಗೂ ಹೆಚ್ಚು ಹಳೆಯದಾಗಿದ್ದ, ಶಿಥಿಲಗೊಂಡಿದ್ದ ಕಟ್ಟಡವನ್ನು ಕೆಡವಿ ನೂತನ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದೆ. ಸುತ್ತೂರು ಶ್ರೀ ಮಠವು ಶಾಂತಿ, ಸಮಾನತೆ, ಸಹಬಾಳ್ವೆ ಸಂದೇಶವನ್ನು ಜಗತ್ತಿಗೆ ನೀಡುವ ಉದ್ದೇಶದಿಂದ ಪ್ರಾರಂಭವಾಗಿದ್ದು, ಬಸವಣ್ಣ ಅವರು ಹೇಳಿರುವ 'ಕಾಯಕವೇ ಕೈಲಾಸ' ಎಂಬ ಮಾತನ್ನು ಧ್ಯೇಯವಾಗಿ ಹೊಂದಿ ನಿರಂತರವಾಗಿ ಸೇವಾ ಕಾರ್ಯದಲ್ಲಿ ತೊಡಗಿದೆ ಎಂದು ಹೇಳಿದರು.



ಸುತ್ತೂರು ಶ್ರೀಗಳಿಂದ ಆಶೀರ್ವಾದ ಪಡೆಯುತ್ತಿರುವ ಪ್ರಧಾನಿ ಮೋದಿ

ಮೋದಿಯಂತೆ ಯಾರೂ ಇಲ್ಲ: ಕಳೆದ ಎಂಟು ವರ್ಷಗಳಲ್ಲಿ ಒಂದೇ ಒಂದು ದಿನವೂ ರಜೆ ತೆಗೆದುಕೊಳ್ಳದೆ ಕೆಲಸ ಮಾಡಿರುವ ವ್ಯಕ್ತಿ ಜಗತ್ತಿನಲ್ಲೇ ಯಾರಾದರೂ ಇದ್ದರೆ ಅದು ಮೋದಿ ಅವರು ಮಾತ್ರ. ದಿನದ 18 ಗಂಟೆ ಯಾವುದೇ ಆಯಾಸವಿಲ್ಲದೆ ಕೆಲಸ ಮಾಡುತ್ತಿದ್ದಾರೆ. ಇಂತಹ ನಾಯಕರನ್ನು ಹಿಂದೆಂದೂ ನೋಡಿರಲಿಲ್ಲ. ಸಾಮಾಜಿಕ ಮತ್ತು ಆರ್ಥಿಕ ವಿಭಾಗದಲ್ಲಿ ಮೋದಿ ಅವರು ಇದ್ದರೆ ಎಲ್ಲವೂ ಸುಲಭ ಎಂಬಂತಾಗಿದೆ. ಕಾಶ್ಮೀರ ಮತ್ತು ರಾಮ ಮಂದಿರದ ಸಮಸ್ಯೆಗಳು ಬಗೆಹರಿದಿವೆ. ನಮ್ಮ ಮಾತೃ ಭೂಮಿಗೆ ಏನಾದರೂ ಮಾಡಬೇಕು ಎಂಬ ಆಶಯವನ್ನು ಮೋದಿ ಅವರು ಇಟ್ಟುಕೊಂಡಿದ್ದಾರೆ ಎಂದು ಮೆಚ್ಚುಗೆಯ ಮಾತುಗಳನ್ನಾಡಿದರು.


ನಾಳೆ ಯೋಗ ದಿನಾಚರಣೆ ಇದೆ. ಯೋಗವನ್ನು ಅಂತರರಾಷ್ಟ್ರೀಯ ದಿನವನ್ನಾಗಿ ಮಾಡಿದ ಕೀರ್ತಿ ನರೇಂದ್ರ ಮೋದಿ ಅವರಿಗೆ ಸಲ್ಲಬೇಕು. ಪತಂಜಲಿ ಯೋಗ ಸೂತ್ರವು ಮನುಷ್ಯನನ್ನು ಸಾಕ್ಷಾತ್ಕಾರದ ಕಡೆ ಕೊಂಡೊಯ್ಯುವ ವಿಜ್ಞಾನವಾಗಿದೆ. ಈ ಎಲ್ಲಾ ಸೂತ್ರಗಳು ಸರಳವಾಗಿದ್ದು, ಇವುಗಳು ಯಾವುದೇ ಧರ್ಮ ಪಂಥಕ್ಕೆ ಸೇರಿದ್ದಲ್ಲ ಎಂದರು.

ಬಸವಣ್ಣ, ಮೋದಿಯವರು ತಾಯಿಯೊಂದಿಗಿರುವ ಕಲಾಕೃತಿ ಉಡುಗೊರೆ...



ಜೆಎಸ್‌ಎಸ್ ಮಹಾವಿದ್ಯಾಪೀಠದ ಕೆಎಸ್‌ಎಸ್ ಸಂಸ್ಕೃತ ಪಾಠಶಾಲೆ ಮತ್ತು ವಿದ್ಯಾರ್ಥಿನಿಲಯದ ನೂತನ ಕಟ್ಟಡ ಉದ್ಘಾಟನೆಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು, ರುದ್ರಾಕ್ಷಿ ಮಾಲೆ ಧಾರಣೆ ಮಾಡಿ ಶಾಲು ಹೊದಿಸಿ ಸನ್ಮಾನಿಸಿದರು. ಅಲ್ಲದೆ ಬಸವಣ್ಣ ಅವರ ಕಲಾಕೃತಿ ಹಾಗೂ ಮೋದಿ ಅವರು ತಮ್ಮ ತಾಯಿಯೊಂದಿಗೆ ಇರುವ ಕಲಾಕೃತಿಯನ್ನು ನೀಡಿದರು. ಈ ವೇಳೆ ಬಸವಣ್ಣನವರ ಕಲಾಕೃತಿಗೆ ನಮಿಸಿದ ಪ್ರಧಾನಿ ನರೇಂದ್ರ ಮೋದಿ, ತಾಯಿಯೊಂದಿಗಿರುವ ಕಲಾಕೃತಿಯನ್ನು ನೋಡಿ ಹರ್ಷ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಮುಡಿಗೇರಿದ ಕಾಕರವಾಡಿ ಪರಮೇಶ್ ವಿಶೇಷ ಪೇಟ



ಮೈಸೂರು, ಜೂ.20(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತೊಡಿಸಿದ ಮೈಸೂರಿನ ಸಾಂಪ್ರದಾಯಿಕ ಪೇಟವನ್ನು ಕಾಕರವಾಡಿಯ ನಿವಾಸಿ ಪರಮೇಶ್, ಪರಂಪರೆಯ ವಿಶೇಷವಾಗಿ ಸಿದ್ಧಪಡಿಸಿದ್ದರು.

ಮೈಸೂರು ಶೈಲಿಯ ಸಾಂಪ್ರದಾಯಿಕ ಪೇಟವನ್ನು ಅಣಿಗೊಳಿಸುವ ಕಲೆಯನ್ನು ಪರಮೇಶ್ ಕರಗತ ಮಾಡಿಕೊಂಡಿದ್ದಾರೆ. ಜಿಲ್ಲಾಡಳಿತದ ವತಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭಿನಂದಿಸುವ ವೇಳೆ ಧರಿಸಲು ಪೇಟದ ಅನ್ವೇಷಣೆಯಲ್ಲಿ ತೊಡಗಿದ್ದಾಗ, ಪರಮೇಶನ ಮಾಹಿತಿಯನ್ನು ರೇಷ್ಮೆ ಉಡುಪುಗಳ ಮಾರಾಟಗಾರರು ನೀಡಿದ್ದರು.



ಅಧಿಕಾರಿಗಳು ಪೇಟ ತಯಾರಿಸಿ ಕೊಡುವಂತೆ ಪರಮೇಶ್ ಅವರಿಗೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ 23 ಇಂಚು ಸುತ್ತಳತೆಯ ಸಿಲ್ಕ್ ಮತ್ತು ಜರಿ ಬಟ್ಟೆಯಲ್ಲಿ ಈ ಪೇಟವನ್ನು ತಯಾರಿಸಿ, ಪಾಲಿಕೆ ಅಧಿಕಾರಿ ರೂಪಾ ಅವರಿಗೆ ನೀಡಿದ್ದಾರೆ. ಇದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತೊಡಿಸುವ ಮೂಲಕ ಗೌರವ ಸಮರ್ಪಿಸಿದರು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪರಮೇಶ್, ಅಧಿಕಾರಿಗಳು ಹೇಳಿದಂತೆ 23 ಇಂಚು ಸುತ್ತಳತೆಯ ಮೈಸೂರು ಸಾಂಪ್ರದಾಯಿಕ ಪೇಟವನ್ನು ವಿಶೇಷ ಆಸ್ಥೆವಹಿಸಿ, ತಯಾರಿಸಿ ಜಿಲ್ಲಾಡಳಿತಕ್ಕೆ ನೀಡಿದ್ದೇ. ಪೇಟದಲ್ಲಿ ಹರಳು ಮತ್ತು ಮಣಿಯನ್ನು ಅಳವಡಿಸಲಾಗಿತ್ತು. ಆದರೆ ಭದ್ರತಾ ದೃಷ್ಟಿಯಿಂದ ಅಧಿಕಾರಿಗಳು ಅವುಗಳನ್ನು ತೆಗೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾನು ತಯಾರಿಸಿದ ಪೇಟ ತೊಡಿಸಿರುವುದು ಸಂತಸ ತಂದಿದೆ ಎಂದು ಅಭಿಪ್ರಾಯಪಟ್ಟರು.

ರೈತ ಸಂಘ, ದಸಂಸ ಪ್ರತಿಭಟನೆ

ಪಠ್ಯ ಪರಿಷ್ಕರಣೆ, ಸೇನೆ ನೇಮಕಾತಿ ವಿವಾದ, ಬೆಲೆ ಏರಿಕೆ ಸಂಬಂಧ ಪ್ರಧಾನಿ ಮುಂದೆ 3 ಪ್ರಶ್ನೆ ಸವಾಲು

ಮೈಸೂರು, ಜೂ.20(ಎಸ್‌ಪಿಎನ್)–ಮಾನ್ಯ ಪ್ರಧಾನ ಮಂತ್ರಿಗಳೇ ರಾಜ್ಯದ ಸಮಸ್ಯೆ ಕುರಿತು ಹೇಳಲು ನೂರು ವಿಚಾರಗಳಿವೆ. ಆದರೆ ನಮ್ಮ ಮೂರು ಪ್ರಶ್ನೆಗಳಿಗೆ ತಮ್ಮ ಮನಸಾಕ್ಷಿಯಿಂದ ಉತ್ತರಿಸಬಲ್ಲಿರಾ ಎಂದು ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಟೌನ್‌ಹಾಲ್ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಪ್ರತಿಭಟನೆ ನಡೆಸಿ ಮೂರು ಪ್ರಶ್ನೆಗಳನ್ನು ಮುಂದಿಟ್ಟಿವೆ.

ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹಾಗೂ ದಲಿತ ಮುಖಂಡರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ತುಂತುರು ಮಳೆ ಬಂದರೂ ಲೆಕ್ಕಿಸದೇ ಪ್ರತಿಭಟನೆ ಮುಂದುವರೆಸಿದರು.



ನಂತರ ಮಾತನಾಡಿದ ಅವರು, ಪ್ರಧಾನಿಗಳೇ ವಿಶ್ವ ಮಾನವ ಸಂದೇಶ ನೀಡಿದ ಕುವೆಂಪು ಅವರ ಊರು–ಕರ್ಮ ಭೂಮಿಗೆ ಆಗಮಿಸುತ್ತಿದ್ದೀರಿ. ಆದರೆ, ಇಲ್ಲಿ ನಿಮ್ಮ ಸರ್ಕಾರ ಕುವೆಂಪು ಅವರನ್ನು ಮಾತ್ರವಲ್ಲದೆ ಮಹಾನ್ ಚೇತನಗಳಾದ ಬುದ್ಧ, ಬಸವ, ಡಾ.ಬಿ.ಆರ್. ಅಂಬೇಡ್ಕರ್, ನಾರಾಯಣ ಗುರು, ಟಿಪ್ಪು ಸುಲ್ತಾನ್, ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಹಾಗೂ ಇತರೆ ಮಹನೀಯರ ಹೆಸರಿಗೆ ಅಪಮಾನ ಮಾಡುವ ಕೃತ್ಯಗಳು ರಾಜ್ಯದಲ್ಲಿ ಹೆಚ್ಚಾಗುತ್ತಿವೆ. ಇದಕ್ಕೆ ಕಾರಣಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಒತ್ತಾಯಿಸಿದ್ದಲ್ಲದೆ ನಮ್ಮ ಪ್ರಮುಖ ಮೂರು ಪ್ರಶ್ನೆಗಳಿಗೆ ಉತ್ತರಿಸಿ ಎಂದು ಸವಾಲು ಹಾಕಿದರು.

ಅಲ್ಲದೆ ರಾಜ್ಯ ಸರ್ಕಾರ ಪಠ್ಯ ಪರಿಷ್ಕರಣೆ ಮಾಡಲು ಅನುಸರಿಸಬೇಕಾದ ಮಾನದಂಡಗಳನ್ನು ಗಮನಿಸಿಲ್ಲ. ಪರಿಷ್ಕರಣಾ ಸಮಿತಿಯಲ್ಲಿ ಸದಸ್ಯರು ಮನಬಂದಂತೆ ಪಠ್ಯಪುಸ್ತಕ ಪರಿಷ್ಕರಣೆ ಮಾಡಿ, ಮಹನೀಯರ ಹೆಸರಿಗೆ ಮಸಿ ಬಳಿದಿದ್ದಾರೆ. ಹಾಗಾಗಿ ರಾಜ್ಯ ಸರ್ಕಾರದ ಪರವಾಗಿ ನೀವು(ಪ್ರಧಾನಿ ಮೋದಿ) ಒಮ್ಮೆ ರಾಜ್ಯ ಜನತೆಯ ಕ್ಷಮೆ ಯಾಚಿಸಿ, ತಿದ್ದುಪಡಿ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿ ಎಂದು ಮೊದಲನೇ ಪ್ರಶ್ನೆ ಕೇಳಿದ್ದಾರೆ.

ಜನಸಾಮಾನ್ಯರ ಜೀವನ ಭದ್ರತೆ, ಬದುಕಿನಲ್ಲಿ ಘನತೆ ತರುವಷ್ಟು ವೇತನ ಇರುವ ಉದ್ಯೋಗಕ್ಕೆ ಸೇರಲು ದೇಶದ ಯುವ ಜನತೆ ಹಾತೊರೆಯುತ್ತಾರೆ. ಆದರೆ, ಭಾರತೀಯ ಸೇನೆಯಲ್ಲಿ ಗುತ್ತಿಗೆ ಆಧಾರಿತ ಹುದ್ದೆ ವಿರುದ್ಧ ಯುವ ಜನತೆ ಪ್ರತಿಭಟನೆ ನಡೆಸಿದರೂ ಗಮನಹರಿಸುತ್ತಿಲ್ಲ. ಈಗಲಾದರೂ ಸೇನೆಯಲ್ಲಿ ಗುತ್ತಿಗೆ ಆಧಾರಿತ ಹುದ್ದೆಗಳ ಸೃಷ್ಟಿ ಸರಿಯಲ್ಲ ಎನಿಸಿದರೆ, ಯುವಜನತೆ ಮುಂದೆ ಕ್ಷಮೆ ಕೋರುವಂತೆ ಒತ್ತಾಯಿಸಿದ ಅವರು, ಯುವ ಜನತೆಯ ಉದ್ಯೋಗ ಖಾತ್ರಿಗಾಗಿ ಪ್ರತ್ಯೇಕ ಕಮಿಷನ್ ಸ್ಥಾಪಿಸಿ ಯುದ್ಧೋಪಾದಿಯಲ್ಲಿ ಕೆಲಸ ನೀಡಬಲ್ಲಿರಾ ಎಂದು ಎರಡನೇ ಪ್ರಶ್ನೆ ಕೇಳಿದ್ದಾರೆ.

ಕೇಂದ್ರದಲ್ಲಿ ನಿಮ್ಮ (ಪ್ರಧಾನಿ ಮೋದಿ)ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು 8 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಜನ ಸಾಮಾನ್ಯರ ಆದಾಯ ಕುಸಿದಿದೆ. ಶಿಕ್ಷಣ, ಆರೋಗ್ಯ, ಮಾರುಕಟ್ಟೆ, ಹೆದ್ದಾರಿ ಟೋಲ್, ಗ್ಯಾಸ್, ಪೆಟ್ರೋಲ್, ಡೀಸೆಲ್ ಹೀಗೆ ಎಲ್ಲಾ ವಸ್ತುಗಳ ಬೆಲೆ ಗಗನದತ್ತ ಮುಖ ಮಾಡಿವೆ. ಇದರಿಂದ ಜನಸಾಮಾನ್ಯರ ಜೀವನ ತತ್ತರಿಸಿ ಹೋಗಿದೆ. ಈ ವಿಶ್ವಾಸ ದ್ರೋಹಕ್ಕೆ ಜನರ ಬಳಿ ಕ್ಷಮೆಯಾಚಿಸಿ, ಜನವಿರೋಧಿ ನೀತಿಗಳನ್ನು ವಾಪಸ್ ಪಡೆಯುವಿರಾ ಎಂದು ಮೂರನೇ ಪ್ರಶ್ನೆ ಕೇಳಿದ್ದಾರೆ. ಈ ವೇಳೆ ರೈತ ಸಂಘದ ಹೊಸಕೋಟೆ ಬಸವರಾಜು, ದಲಿತ ಮುಖಂಡರಾದ ಆಲಗೂರು ಶಿವಕುಮಾರ್, ಕೆರಗೂಡು ಗುರುಪ್ರಸಾದ್, ಬೆಟ್ಟಯ್ಯಕೋಟೆ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಮಂಗಳವಾರ 21 ಜೂನ್ 2022

ವರ್ಚುಯಲ್ ಮೂಲಕ ಪ್ರಧಾನಿ ಮೋದಿ ಅವರಿಂದ ಟೆಕ್ನಾಲಜಿ ಹಬ್‌ಗಳ ಲೋಕಾರ್ಪಣೆ

ಚಾ.ನಗರದಲ್ಲಿ ಉನ್ನತೀಕರಿಸಿದ ಐಟಿಐಗೆ ಚಾಲನೆ





ಚಾಮರಾಜನಗರ, ಜೂ.20–ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ರಾಜ್ಯ ಸರ್ಕಾರದ ವಿನೂತನ ಉದ್ಯೋಗ ಯೋಜನೆಯಡಿ ಜಾಗತಿಕ ಕೈಗಾರಿಕೆ ಹಾಗೂ ಅಸೆಂಬ್ಲಿ ಲೈನುಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಯುವಜನತೆಗೆ ಅತ್ಯಾಧುನಿಕ ತಂತ್ರಜ್ಞಾನಗಳ ತರಬೇತಿ ನೀಡುವ ಸಲುವಾಗಿ ತಾಂತ್ರಿಕ ಕೇಂದ್ರವನ್ನಾಗಿ ಉನ್ನತೀಕರಿಸಿರುವ ಟೆಕ್ನಾಲಜಿ ಹಬ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನ ಬೇಸ್ ಕ್ಯಾಂಪ್‌ನಲ್ಲಿ ವರ್ಚುಯಲ್ ಮೂಲಕ ಲೋಕಾರ್ಪಣೆ ಮಾಡಿದರು.

ಈ ನಿಟ್ಟಿನಲ್ಲಿ ಸ್ಥಳೀಯವಾಗಿ ಚಾಮರಾಜನಗರ ಪಟ್ಟಣದ ಕಾಳನಹುಂಡಿ ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಯಲ್ಲಿ 33 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸಿರುವ ಟೆಕ್ನಾಲಜಿ ಹಬ್, ನಿರ್ಮಿತಿ ಕೇಂದ್ರದಿಂದ 83.29 ಲಕ್ಷ ರೂ. ವೆಚ್ಚದಲ್ಲಿ ಐಟಿಐ ವರ್ಕ್‌ಶಾಪ್ ಹಾಗೂ 41.40 ಲಕ್ಷ ರೂ.ವೆಚ್ಚದಲ್ಲಿ ನಿರ್ಮಿಸಿರುವ ಐಟಿಐ ಟೆಕ್‌ಲ್ಯಾಬ್ ಅನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಟಾಟಾ ಟೆಕ್ನಾಲಜೀಸ್ ಸಹಯೋಗದೊಂದಿಗೆ ರಾಜ್ಯದ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಟೆಕ್ನಾಲಜಿ ಹಬ್‌ಗಳನ್ನಾಗಿ ಉನ್ನತೀಕರಿಸಿದ್ದು, ಜಿಲ್ಲೆಯ ಬೇಗೂರು, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಹನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಈ ಯೋಜನೆಗೆ ಆಯ್ಕೆಗೊಂಡಿವೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಉನ್ನತೀಕರಿಸಿರುವ ಟೆಕ್ನಾಲಜಿ ಹಬ್‌ಗಳ ಅನುಕೂಲ ಪಡೆಯಬೇಕು ಎಂದು ಶುಭ ಹಾರೈಸಿದರು.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಭಾರ ಪ್ರಾಚಾರ್ಯ ಟಿ.ಎಂ. ರಂಗಸ್ವಾಮಿ ಮಾತನಾಡಿ, ಉನ್ನತೀಕರಿಸಿರುವ ಟೆಕ್ನಾಲಜಿ ಹಬ್‌ಗಳಿಗೆ ಅಡ್ವಾನ್ಸ್‌ಡ್ ಸಿಎನ್‌ಸಿ ಮೆಷಿನಿಂಗ್ ಟೆಕ್ನಿಷಿಯನ್, ಆರ್ಟಿಸಿಯನ್ ಯೂಸಿಂಗ್ ಅಡ್ವಾನ್ಸ್‌ಡ್ ಟೂಲ್, ಬೇಸಿಕ್ ಡಿಸೈನರ್ ಆಂಡ್ ವರ್ಚುಯಲ್ ವೆರಿಫೈಯರ್(ಮೆಕಾನಿಕಲ್), ಮೆಕಾನಿಕ್ ಎಲೆಕ್ಟ್ರಿಕಲ್ ವೆಹಿ ಕಲ್, ಮ್ಯಾನುಫ್ಯಾಕ್ಚರಿಂಗ್ ಪ್ರೋಸೆಸ್ ಕಂಟ್ರೋಲ್ ಆಂಡ್ ಆಟೋಮೇಷನ್ ಹಾಗೂ ಇಂಡಸ್ಟ್ರೀಯಲ್ ರೋಬೋಟಿಕ್ಸ್ ಆಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಿಷಿಯನ್ ಸೇರಿದಂತೆ ಒಟ್ಟಾರೆ 6 ಹೊಸ ಕೋರ್ಸ್‌ಗಳನ್ನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಎಸ್.ಸುರೇಂದ್ರ, ಇಂಜಿನಿಯರ್ ಎನ್.ಭೀಮಸಾಗರ್, ಟಾಟಾ ಟೆಕ್ನಾಲಜಿ ಸೆಬ್ಜೆಕ್ಟ್ ಸ್ಪೆಷಲಿಸ್ಟ್ ಸಿ.ಕುಮಾರ್, ಶಿವಪುರ ಗ್ರಾಪಂ ಅಧ್ಯಕ್ಷ ಎಂ.ಸಿ.ಮಹದೇವಮ್ಮ ಹಾಜರಿದ್ದರು. ಬಳಿಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು, ಉನ್ನತೀಕರಿಸಿರುವ ಟೆಕ್ನಾಲಜಿ ಹಬ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ವರ್ಚುವೆಲ್ ಮೂಲಕ ಲೋಕಾರ್ಪಣೆಗೊಳಿಸಿದ ಕಾರ್ಯಕ್ರಮ ವೀಕ್ಷಿಸಿದರು.

ಪ್ರಧಾನಿಗೆ ಕಪ್ಪು ಬಾವುಟ ಪ್ರದರ್ಶಿಸಲು ಮೈಸೂರಿಗೆ ಹೊರಟಿದ್ದ

ರೈತ ಮುಖಂಡರ ಬಂಧನ, ಬಿಡುಗಡೆ



ಚಾಮರಾಜನಗರ, ಜೂ.20(ಎಸ್‌ಎಸ್)– ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತರ ಹೋರಾಟಗಳನ್ನು ಹತ್ತಿಕ್ಕಲು ಯತ್ನಿಸುತ್ತಿವೆ ಎಂದು ಆರೋಪಿಸಿ 2 ದಿನದ ಮೈಸೂರು ಭೇಟಿಗೆ ಆಗಮಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಮೈಸೂರಿಗೆ ತೆರಳುತ್ತಿದ್ದ ರೈತ ಮುಖಂಡರನ್ನು ನಗರದ ರೈಲು ನಿಲ್ದಾಣದಲ್ಲೇ ಪೊಲೀಸರು ವಶಕ್ಕೆ ಪಡೆದು, ಸಂಜೆ ಬಿಡುಗಡೆಗೊಳಿಸಿದರು.

ಚಾಮರಾಜನಗರದಿಂದ ಮೈಸೂರು ಮಾರ್ಗವಾಗಿ ತಿರುಪತಿಗೆ ನಗರದಿಂದ ಮಧ್ಯಾಹ್ನ 3.30ಕ್ಕೆ ಹೊರಡುವ ರೈಲಿನಲ್ಲಿ ರೈತ ಮುಖಂಡರು ಮೈಸೂರಿಗೆ ತೆರಳಿ ಅಲ್ಲಿ ಪ್ರತಿಭಟಿಸಲು ತೀರ್ಮಾನಿಸಿದ್ದರು. ಜಿಲ್ಲೆಯ ರೈತ ಸಂಘ ಹಾಗೂ ಹಸಿರುಸೇನೆಯ ಎರಡೂ ಬಣಗಳ ಮುಖಂಡರು ಹಾಗೂ ಕಾರ್ಯಕರ್ತರು ಸಹ ಸಿದ್ಧತೆ ಮಾಡಿಕೊಂಡಿದ್ದರು. ಅದರಂತೆ ಮಧ್ಯಾಹ್ನ 3 ಗಂಟೆ ವೇಳೆಗೆ ನಗರದ ರೈಲು ನಿಲ್ದಾಣಕ್ಕೆ ರೈತ ಮುಖಂಡರು ಆಗಮಿಸಿದ್ದರು. ಈ ವೇಳೆ ಮುಖಂಡರು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಹಾಗೂ ರಾಜ್ಯ ಸರ್ಕಾರ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವು ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆದ್ದರೂ ರಾಜ್ಯ ಸರ್ಕಾರ ಆ ಕಾಯ್ದೆಗಳನ್ನು ಇನ್ನೂ ವಾಪಸ್ ಪಡೆದಿಲ್ಲ. ರೈತ ಸಂಘದ ರಾಷ್ಟ್ರೀಯ ನಾಯಕ ರಾಕೇಶ್ ಟಿಕಾಯತ್ ಅವರು ಬೆಂಗಳೂರಿಗೆ ಆಗಮಿಸಿದ್ದ ವೇಳೆ ಅವರಿಗೆ ಭದ್ರತೆ ಒದಗಿಸಲಿಲ್ಲ. ಅವರ ಮೇಲೆ ಹಲ್ಲೆ ನಡೆಸುವ ಮೂಲಕ ರೈತರ ಹೋರಾಟವನ್ನು ಹತ್ತಿಕ್ಕಲು ಸರ್ಕಾರಗಳು ಪ್ರಯತ್ನಿಸುತ್ತಿವೆ ಎಂದು ಪ್ರತಿಭಟನಾನಿರತರು ಆರೋಪಿಸಿದರು.

ಅಲ್ಲದೆ ರಾಜ್ಯಕ್ಕೆ ಆಗಮಿಸಿರುವ ಪ್ರಧಾನಿ ಗೋ ಬ್ಯಾಕ್ ಮೋದಿ ಎಂದು ಘೋಷಣೆ ಕೂಗುತ್ತಾ ರೈಲು ನಿಲ್ದಾಣ ಒಳಗಡೆ ತೆರಳಲು ರೈತ ಮುಖಂಡರು ಮುಂದಾಗುತ್ತಿದ್ದಂತೆಯೇ ಸ್ಥಳದಲ್ಲಿದ್ದ ಪೊಲೀಸರು ರೈತ ಮುಖಂಡರನ್ನು ತಡೆದರು. ಈ ವೇಳೆ ರೈತರು ಪ್ರತಿರೋಧ ವ್ಯಕ್ತಪಡಿಸಿದಾಗ ಅವರನ್ನು ವಶಕ್ಕೆ ಪಡೆದು ಕರೆದೊಯ್ದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಹೊನ್ನೂರು ಪ್ರಕಾಶ್, ಹೆಬ್ಬಸೂರು ಬಸವಣ್ಣ, ಮುಖಂಡರಾದ ಹೊನ್ನೂರು ಬಸವಣ್ಣ, ಚಿನ್ನಸ್ವಾಮಿ, ಗೌಡೇಗೌಡ, ಮಹೇಶ್, ರಘು, ಪಾಪು, ಮಹದೇವಸ್ವಾಮಿ, ಪ್ರಸಾದ, ಮಹೇಶ್, ಸಿದ್ದರಾಜು ಇತರರು ಬಂಧನಕ್ಕೊಳಗಾದರು.

ಗುಂಡ್ಲುಪೇಟೆ ವರದಿ: ರಾಜ್ಯಕ್ಕೆ ಎರಡು ದಿನಗಳ ಭೇಟಿಗೆ ಆಗಮಿಸುತ್ತಿರುವ ಪ್ರಧಾನ ಮಂತ್ರಿ ನರೇಂದ್ರಮೋದಿ ಸೋಮವಾರ ಮಧ್ಯಾಹ್ನ ಮೈಸೂರಿಗೆ ಆಗಮಿಸಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಪ್ರತಿಭಟನೆ ನಡೆಸಲು ಪಟ್ಟಣದಿಂದ ಹೊರಟಿದ್ದ ಸುಮಾರು 10ಕ್ಕೂ ಹೆಚ್ಚು ರೈತ ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದರು.

ಮೈಸೂರಿಗೆ ಹೊರಡುವ ಸಲುವಾಗಿ ಪ್ರವಾಸಿ ಮಂದಿರದಲ್ಲಿ ಕುಳಿತಿದ್ದ ಮುಖಂಡರನ್ನು ಸರ್ಕಲ್ ಇನ್ಸ್‌ಪೆಕ್ಟರ್ ಮುದ್ದುರಾಜ್ ಮತ್ತು ಸಿಬ್ಬಂದಿ ಬಂಧಿಸಿ, ಠಾಣೆಗೆ ಕರೆದೊಯ್ದರು. ಸಂಜೆ ಬಳಿಕ ಹೋರಾಟಗಾರರನ್ನು ಬಿಡುಗಡೆ ಮಾಡಲಾಗುವುದು ಎಂದು ಪೊಲೀಸರು ತಿಳಿಸಿದರು.

ಗುಂಡ್ಲುಪೇಟೆ: ಮರುಕಳಿಸಿದ ಸರಣಿ ಕಳ್ಳತನ

ಗುಂಡ್ಲುಪೇಟೆ,ಜೂ.20(ಸೋಮ್.ಜಿ)–ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಅಂಗಡಿಗಳಲ್ಲಿ ಕೆಲ ದಿನಗಳ ಹಿಂದೆ ನಡೆದಿದ್ದ ಸರಣಿ ಕಳ್ಳತನ ಮಾಸುವ ಮುನ್ನವೇ ಖದೀಮರು ಮತ್ತೊಮ್ಮೆ ತಮ್ಮ ಕೈಚಳಕ ತೋರಿದ್ದಾರೆ. ಪಟ್ಟಣದ ಎಂಡಿಸಿಸಿ ಬ್ಯಾಂಕ್ ಎದುರಿನ ವಿನಾಯಕ ಸ್ಟೋರ್, ಲಾವಣ್ಯ ಫ್ಯಾನ್ಸಿ ಸ್ಟೋರ್ ಹಾಗೂ ಅಕ್ಕದ ಟೀ ಅಂಗಡಿಯ ಬೀಗ ಮುರಿದು 70 ಸಾವಿರ ನಗದು, 30 ಸಾವಿರ ರೂ.ಗೂ ಹೆಚ್ಚಿನ ಮೌಲ್ಯದ ಸಿಗರೇಟ್ ಕಳ್ಳತನ ಮಾಡಿದ್ದಾರೆ.

20 ದಿನಗಳ ಹಿಂದೆ ಇದೇ ಭಾಗದ ಬಾರ್ ಮತ್ತು ಚಿಲ್ಲರೆ ಅಂಗಡಿಗಳ ಬೀಗ ಮುರಿದು ನಗದು, ಸಿಗರೇಟ್ ಹಾಗೂ ಪಡಿತರ ಕಳ್ಳತನ ಮಾಡಿದ್ದರು. ಇದಲ್ಲದೇ 4 ದಿನ(ಗುರುವಾರ)ಗಳ ಹಿಂದೆ ಪೊಲೀಸ್ ಠಾಣೆ ಎದುರು ರಸ್ತೆಯ ನಿವಾಸಿ, ಬ್ಯಾಂಕ್ ಉದ್ಯೋಗಿ ನಾಗೇಂದ್ರ ಅವರ ಮನೆಯ ಹಿಂಬಾಗಿಲು ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥ ದೋಚಿದ್ದರು.

ಈ ಬಗ್ಗೆ ಪೊಲೀಸರು ಶೋಧ ಕಾರ್ಯ ನಡೆಸುತ್ತಿದ್ದು, ಇದುವರೆಗೂ ಕಳ್ಳರ ಪತ್ತೆಯಾಗಿಲ್ಲ. ಈ ಘಟನೆ ಮರೆಯಾಗುವ ಮುನ್ನವೇ ಮತ್ತೊಮ್ಮೆ ಸರಣಿ ಕಳ್ಳತನವಾಗಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಹಾಡಹಗಲೇ ಮನೆಗಳಿಗೆ ನುಗ್ಗಿ ಕಳ್ಳತನವಾಗುತ್ತಿದ್ದರೂ ಸಹ ಪೊಲೀಸ್ ಅಧಿಕಾರಿಗಳಾಗಲೀ ಅಥವಾ ಹಿರಿಯ ಅಧಿಕಾರಿಗಳಾಗಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಪುರಸಭೆ ಸದಸ್ಯ ರಾಜ್‌ಗೋಪಾಲ್ ಆರೋಪಿಸಿದ್ದಾರೆ. ಇನ್ನಾದರೂ ಪೊಲೀಸರು ಸೂಕ್ತ ಕ್ರಮ ಕೈಗೊಂಡು ಸಾರ್ವಜನಿಕರ ಆತಂಕ ದೂರಮಾಡುವರೇ ಕಾದುನೋಡಬೇಕಾಗಿದೆ.

ಮಹದೇಶ್ವರ ದೇವಸ್ಥಾನ ನಿರ್ಮಾಣಕ್ಕೆ

ಮಲ್ಲೇಶ್‌ರಿಂದ 50 ಸಾವಿರ ರೂ. ಕೊಡುಗೆ



ಚಾಮರಾಜನಗರ, ಜೂ.20(ಎಸ್‌ಎಸ್)– ತಾಲೂಕಿನ ನಾಗವಳ್ಳಿಯಲ್ಲಿ ಮಹದೇಶ್ವರ ದೇವಸ್ಥಾನ ನಿರ್ಮಿಸಲು ಬಿಜೆಪಿ ರೈತ ಮುಖಂಡ ಮಲ್ಲೇಶ್ 50 ಸಾವಿರ ರೂ. ದೇಣಿಗೆ ನೀಡಿದರು.

ನಾಗವಳ್ಳಿ ಗ್ರಾಮದಲ್ಲಿ ದಲಿತ ಮುಖಂಡರು ಹಾಗೂ ಯುವಕರು ಅತ್ಯಂತ ಉತ್ಸಾಹದಿಂದ ಮಹದೇಶ್ವರ ದೇವಸ್ಥಾನವನ್ನು ತಮ್ಮ ಸ್ವಂತ ಹಣದಿಂದ ಕಟ್ಟುತ್ತಿದ್ದು, ಇಲ್ಲಿನ ಗ್ರಾಮದ ಮುಖಂಡರ ಕೋರಿಕೆ ಮೇರೆಗೆ ಭೇಟಿ ನೀಡಿದ ಮಲ್ಲೇಶ್, 50 ಸಾವಿರ ನೀಡಿದರು. ನಂತರ ಮಾತನಾಡಿದ ಅವರು, ಯುವಕರು ಬೇರೆ ಗ್ರಾಮಗಳಲ್ಲಿ ಕೆಟ್ಟ ಹವ್ಯಾಸಗಳಿಗೆ ಬಲಿಯಾಗುತ್ತಿದ್ದು, ನಾಗವಳ್ಳಿ ದಲಿತ ಯುವಕರು ಸನ್ಮಾರ್ಗದಲ್ಲಿ ನಡೆದು ದೇವಸ್ಥಾನ ನಿರ್ಮಿಸುತ್ತಿರುವುದು ಸಂತಸದ ವಿಚಾರ ಎಂದರು.

ಈ ಮಹದೇಶ್ವರ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ದೈವಭಕ್ತರಾದ ಸಚಿವ ವಿ.ಸೋಮಣ್ಣ ಅವರಿಂದ ನೆರವು ಕೊಡಿಸುವುದಾಗಿಯೂ ಹಾಗೂ ಮುಜರಾಯಿ ಸಚಿವರಿಂದ ಸರ್ಕಾರದ ಅನುದಾನ ಕೊಡಿಸುವುದಾಗಿಯೂ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಾಗಹಳ್ಳಿ ಗ್ರಾಮದ ಯಜಮಾನರಾದ ಪಾಪಣ್ಣ, ಮುದ್ದ ಮಲ್ಲಯ್ಯ, ರಂಗಸ್ವಾಮಿ, ಯುವ ಮುಖಂಡರಾದ ಗೌರೀಶ್, ಪ್ರಶಾಂತ್, ಗುರುಸಿದ್ದಯ್ಯ, ನಲ್ಲೂರು ದೊರೆಸ್ವಾಮಿ, ಪರಮೇಶ್ವರ, ಸತೀಶ್ ಹಾಗೂ ಇನ್ನು ಮುಂತಾದವರು ಹಾಜರಿದ್ದರು.

ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ, ಜೂ. 20– ಜಿಲ್ಲೆಯ ಎಲ್ಲಾ ಇಲಾಖೆಯ ವೃಂದದ ಸಹಯೋಗದೊಂದಿಗೆ 'ಮಾನವೀಯತೆಗಾಗಿ ಯೋಗ' ಘೋಷವಾಕ್ಯದೊಂದಿಗೆ 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ.21ರಂದು ಬೆಳಗ್ಗೆ 6 ರಿಂದ 9 ಗಂಟೆಯವರೆಗೆ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸಪ್ರಸಾದ್ ಉಪಸ್ಥಿತರಿರುವರು. ಜಿಲ್ಲೆಯ ಶಾಸಕರು ಸೇರಿದಂತೆ ಇತರೆ ಜನಪ್ರತಿನಿಧಿಗಳು ವಿಶೇಷ ಆಹ್ವಾನಿತರಾಗಿ ಆಯುಷ್ ಇಲಾಖೆಯ ಆಯುಕ್ತ ಎಂ.ರಾಮಚಂದ್ರ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ಡಾ.ಕೃಷ್ಣಪ್ರಸಾದ್, ನಿವಾಸಿ ವೈದ್ಯಾಧಿಕಾರಿಯಾಗಿ ಡಾ.ಎಂ.ಮಹೇಶ್ ನೇಮಕ



ಡಾ.ಎಂ.ಮಹೇಶ್



ಡಾ.ಕೃಷ್ಣಪ್ರಸಾದ್

ಚಾಮರಾಜನಗರ, ಜೂ.20(ಎಸ್‌ಎಸ್)– ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ಡಾ.ಕೃಷ್ಣಪ್ರಸಾದ್, ನಿವಾಸಿ ವೈದ್ಯಾಧಿಕಾರಿಯಾಗಿ ಡಾ.ಎಂ.ಮಹೇಶ್ ನೇಮಕಗೊಂಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ಸೇವೆಗಳು)ಯ ಸರ್ಕಾರದ ಅಧೀನ ಕಾರ್ಯದರ್ಶಿ ಸಿ.ಮಂಜೂರ್ ಅವರು ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

ಜಿಲ್ಲಾಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರಾಗಿದ್ದ ಡಾ.ಶ್ರೀನಿವಾಸ್ ಅವರ ವಯೋನಿವೃತ್ತಿಯಿಂದ ಜಿಲ್ಲಾ ಶಸ್ತ್ರಚಿಕಿತ್ಸಕ ಹುದ್ದೆ ತೆರವಾಗಿತ್ತು. ಈ ಸ್ಥಾನಕ್ಕೆ ಆಸ್ಪತ್ರೆಯ ನಿವಾಸಿ ವೈದ್ಯಾಧಿಕಾರಿಯಾಗಿದ್ದ ಡಾ.ಕೃಷ್ಣಪ್ರಸಾದ್ ನೇಮಕಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಡಾ.ಎಂ.ಮಹೇಶ್ ಅವರು ನಿವಾಸಿ ವೈದ್ಯಾಧಿಕಾರಿಗಳಾಗಿ ನಿಯೋಜನೆ ಗೊಂಡಿದ್ದಾರೆ. ಇದುವರೆಗೆ ಈ ಹುದ್ದೆಯಲ್ಲಿ ಡಾ. ಕೃಷ್ಣಪ್ರಸಾದ್ ಕಾರ್ಯ ನಿರ್ವಹಿಸುತ್ತಿದ್ದರು.

ಮಹೇಶ್ ನಿಧನ



ಚಾಮರಾಜನಗರ, ಜೂ.20– ತಾಲೂಕಿನ ಹೊಮ್ಮ ಗ್ರಾಮದ ನಿವಾಸಿ ಮಹೇಶ್ (ಸಣ್ಣ–30) ಸೋಮವಾರ ಮಧ್ಯಾಹ್ನ ನಿಧನರಾದರು.

ಮೃತರು ತಾಯಿ, ಸಹೋದರ–ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ದಲ್ಲಿರುವ ತೋಟದಲ್ಲಿ ಮಂಗಳವಾರ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮಡಿಕೇರಿಯಲ್ಲಿ ಉನ್ನತೀಕರಿಸಿದ ತಾಂತ್ರಿಕ ಕೇಂದ್ರ ಉದ್ಘಾಟನೆ

ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಹೊಂದಬೇಕು

ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಸಲಹೆ



ಮಡಿಕೇರಿ, ಜೂ.20–ವಿದ್ಯಾರ್ಥಿಗಳು ನಿರ್ದಿಷ್ಟ ಗುರಿ ಇಟ್ಟುಕೊಂಡು ಕಠಿಣ ಪರಿಶ್ರಮದಿಂದ ದುಡಿದು ಸ್ವಉದ್ಯೋಗಿಗಳಾಗಿ, ಮತ್ತೊಬ್ಬರಿಗೆ ಉದ್ಯೋಗ ನೀಡುವಂತಾಗಬೇಕು ಎಂದು ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಹೇಳಿದರು.

ನಗರದ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸೋಮವಾರ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಸಂಯೋಜನೆಯೊಂದಿಗೆ ಉನ್ನತೀಕರಿಸಿದ ತಾಂತ್ರಿಕ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು.

ಟಾಟಾ ಟೆಕ್ನಾಲಜೀಸ್ ಲಿಮಿಟೆಡ್ ಸಂಯೋಜನೆಯೊಂದಿಗೆ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಉನ್ನತೀಕರಿಸಿದ ತಾಂತ್ರಿಕ ಕೇಂದ್ರ ನಿರ್ಮಿಸಲಾಗಿದೆ. ಇದರ ಸದುಪಯೋಗವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದು ಹೇಳಿದರು.

ಐಟಿಐ ವಿದ್ಯಾಭ್ಯಾಸ ಮಾಡಿದ ಬಹಳಷ್ಟು ಮಂದಿ ಕೈಗಾರಿಕೆಯಲ್ಲಿ ಉನ್ನತಮಟ್ಟಕ್ಕೆ ಬೆಳೆದಿದ್ದಾರೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಉನ್ನತ ಮಟ್ಟಕ್ಕೆ ಬೆಳೆಯುವಂತಾಗಬೇಕು. ಪ್ರಸ್ತುತ ದಿನದಲ್ಲಿ ವಿದ್ಯಾರ್ಥಿಗಳು ಕಲಿಯಲು ಬಹಳಷ್ಟು ವಿಷಯಗಳಿವೆ. ಆ ನಿಟ್ಟಿನಲ್ಲಿ ಜ್ಞಾನ ಹೆಚ್ಚಿಸಿಕೊಳ್ಳುವುದು ಬಹಳ ಮುಖ್ಯ ಎಂದರು.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಮಾತನಾಡಿ, ಕೈಗಾರಿಕಾ ತರಬೇತಿಗೆ ಸೇರಿದವರು ತಮ್ಮ ಪಠ್ಯದ ಜೊತೆಗೆ ಮುಂದಿನ ದಿನಗಳಲ್ಲಿ ಅಭಿವೃದ್ಧಿಗೆ ಪೂರಕವಾದ ವಿಷಯಗಳನ್ನು ಕಲಿಯುವಂತಾಗಬೇಕು. ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪ್ರತಿಯೊಂದು ವಿಷಯದಲ್ಲೂ ಮುಂದಿರಬೇಕು ಎಂದು ಕಿವಿಮಾತು ಹೇಳಿದರು.

ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಂಶುಪಾಲ ಪಂಡಿತಾರಾಧ್ಯ ಮಾತನಾಡಿ, ಸಂಸ್ಥೆಯಲ್ಲಿ ಶೇ.65 ರಷ್ಟು ಪ್ರಾಯೋಗಿಕ ಶಿಕ್ಷಣ, ಶೇ.35ರಷ್ಟು ಪಠ್ಯ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮೋಟಾರ್ ಟೆಕ್ನಿಕ್ ಕೌಶಲ್ಯಗಳನ್ನು ಕಲಿಸಲಾಗುವುದು. ಬೇಸಿಕ್ ವಾಹನ ತರಬೇತಿ ಸೇರಿದಂತೆ ಹಲವು ಯೋಜನೆಗಳನ್ನು ರೂಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಅರುಣ್‌ಶೆಟ್ಟಿ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್, ಸಂಸ್ಥೆಯ ತರಬೇತಿ ಅಧಿಕಾರಿ ಇಂದ್ರೇಶ್, ಕೈಗಾರಿಕಾ ತರಬೇತಿ ಸಂಸ್ಥೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

ಸ್ಮಶಾನ ಭೂಮಿ ಒದಗಿಸಲು ಕ್ರಮ ವಹಿಸಿ

ಅಧಿಕಾರಿಗಳಿಗೆ ಡಿಸಿ ಡಾ.ಬಿ.ಸಿ.ಸತೀಶ್ ನಿರ್ದೇಶನ



ಮಡಿಕೇರಿ, ಜೂ.20–ಗ್ರಾಮಗಳಲ್ಲಿ ಸಾರ್ವಜನಿಕ ಸ್ಮಶಾನ ಭೂಮಿ ಇಲ್ಲದಿದ್ದರೆ ತಿಂಗಳೊಳಗೆ ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅನುಸೂಚಿತ ಜಾತಿ ಅನುಸೂಚಿತ ಪಂಗಡಗಳ ದೌರ್ಜನ್ಯ ನಿಯಂತ್ರಣ ಜಿಲ್ಲಾ ಜಾಗೃತಿ ಸಮಿತಿಯ ಎಸ್‌ಸಿ–ಎಸ್‌ಟಿ ಕಾರ್ಯಕ್ರಮದ ಮಾಸಿಕ ಪ್ರಗತಿ ಪರಿಶೀಲನೆ ಹಾಗೂ ಮ್ಯಾನ್ಯುವಲ್ ಸ್ಕಾವೆಂಜರ್ಸ್‌ಗಳ ಜಿಲ್ಲಾ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಡಿಕೇರಿ ತಾಲೂಕಿನ ಹಾಕತ್ತೂರು ಗ್ರಾಮದಲ್ಲಿನ ಸರ್ವೆ ನಂ.96/6 ರಲ್ಲಿ 0.30 ಸೆಂಟ್ ಜಾಗದ ಆರ್‌ಟಿಸಿಯಲ್ಲಿರುವ ಪೈಸಾರಿ ಜಾಗವನ್ನು ಸಾರ್ವಜನಿಕ ಸ್ಮಶಾನ ಎಂದು ದಾಖಲಿಸಿ ಆರ್‌ಟಿಸಿಯನ್ನು ಗ್ರಾಪಂಗೆ ಹಸ್ತಾಂತರಿಸುವ ಜೊತೆಗೆ ಸ್ಮಶಾನಕ್ಕೆ ಮೂಲಸೌಕರ್ಯವನ್ನು ನರೇಗಾದಡಿ ಅಭಿವೃದ್ಧಿಪಡಿಸಲು ಜಿಲ್ಲಾಧಿಕಾರಿ ಸೂಚಿಸಿದರು.

ವಿರಾಜಪೇಟೆ ತಾಲೂಕಿನ ಕಾರೆಕಾಡು ಎಂಬಲ್ಲಿ 9 ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಶೌಚಾಲಯ ನಿರ್ಮಿಸುವ ಸಂಬಂಧ ವಾರದೊಳಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ ಜಿಲ್ಲಾಧಿಕಾರಿ, ಜಿಲ್ಲಾ ಕೇಂದ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಗುರುತಿಸಿರುವ ನಿವೇಶನವನ್ನು ಪರಿಶೀಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ವೈಯಕ್ತಿಕ ಫಲಾನುಭವಿಗಳು ಯೋಜನೆಯ ಉಪಯೋಗ ಪಡೆಯದೇ ಹೋದಲ್ಲಿ ಯೋಜನೆಯನ್ನು ಸಮುದಾಯಗಳು ಪಡೆಯುವಂತಾಗಲು ಅಗತ್ಯ ಮಾಹಿತಿ ನೀಡುವಂತೆ ಸಲಹೆ ನೀಡಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಉಪಯೋಜನಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆ, ಮಾಸಿಕ ವರದಿಯ ಬಗ್ಗೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಶೇಖರ್ ಮಾಹಿತಿ ನೀಡಿದರು.

ಸದಸ್ಯ ಪಳನಿ ಪ್ರಕಾಶ ಮಾತನಾಡಿ, ಬಡವರ ಬಿಪಿಎಲ್ ಕಾರ್ಡ್‌ಗಳು ರದ್ದುಮಾಡಿ ಎಪಿಎಲ್ ಕಾರ್ಡ್‌ಗಳನ್ನು ನೀಡಲಾಗಿದೆ. ಇದನ್ನು ಪರಿಶೀಲಿಸುವಂತೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಬಿಪಿಎಲ್ ಬದಲಾಗಿ ತಪ್ಪಾಗಿ ಎಪಿಎಲ್ ಕಾರ್ಡ್ ನೀಡಿದವರಿಗೆ ಪರಿಶೀಲಿಸಿ ಬಿಪಿಎಲ್ ಕಾರ್ಡ್‌ಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ. ಅಯ್ಯಪ್ಪ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್, ಲೋಕೋಪಯೋಗಿ ಇಲಾಖೆ ಇಇ ನಾಗರಾಜು, ಭೂದಾಖಲೆಗಳ ಉಪ ನಿರ್ದೇಶಕ ಶ್ರೀನಿವಾಸ, ಐಟಿಡಿಪಿ ಇಲಾಖಾ ಅಧಿಕಾರಿ ಹೊನ್ನೇಗೌಡ, ತಹಸೀಲ್ದಾರರಾದ ಗೋವಿಂದರಾಜು, ಯೋಗಾನಂದ, ಪ್ರಕಾಶ್, ಪೌರಾಯುಕ್ತರಾದ ಎಸ್.ವಿ. ರಾಮದಾಸ್, ಸಮಿತಿ ಸದಸ್ಯರಾದ ಮುತ್ತಪ್ಪ, ಸುಕುಮಾರ್ ಇತರರಿದ್ದರು.

ವಿದ್ಯುತ್ ತಂತಿ ತಗುಲಿ ವ್ಯಕ್ತಿ ಸಾವು

ಗುಡ್ಡೆಹೊಸೂರು, ಜೂ.20–ಮರ ಕಡಿಯುವ ವೇಳೆ ವಿದ್ಯುತ್ ಪ್ರವಹಿಸಿ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಇಲ್ಲಿಗೆ ಸಮೀಪದ ನಂಜರಾಯಪಟ್ಟಣದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಎನ್.ಯು.ಭರತ್(ಬಾಲು) ಮೃತಪಟ್ಟವರು. ಇವರು ತಮ್ಮ ತೋಟದಲ್ಲಿ ಕಬ್ಬಿಣದ ಏಣಿ ಬಳಸಿ ಪಾಣಿವಾಳ ಮರ ಕಡಿಯುತ್ತಿದ್ದರು. ಈ ಸಂದರ್ಭ ತೋಟದಲ್ಲಿ ಹಾದುಹೋಗಿರುವ ವಿದ್ಯುತ್ ಲೈನ್‌ಗೆ ಮರದ ಕೊಂಬೆ ತಗುಲಿ ಕಬ್ಬಿಣದ ಏಣಿಗೆ ವಿದ್ಯುತ್ ಪ್ರವಹಿಸಿದೆ. ಪರಿಣಾಮ ಭರತ್ ಸ್ಥಳದಲ್ಲೇ ಅಸ್ವಸ್ಥಗೊಂಡು ಸಾವನ್ನಪ್ಪಿದ್ದಾರೆ. ಮೃತರಿಗೆ ಪತ್ನಿ, ಪುತ್ರ–ಪುತ್ರಿ ಇದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಸೆಸ್ಕ್ ಅಧಿಕಾರಿಗಳು, ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ಚಂದ್ರಶೇಖರ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಳಿಗೂಬೆ ಮಾರಾಟಗಾರರ ಬಂಧನ



ಮಡಿಕೇರಿ,ಜೂ.20–ವನ್ಯಜೀವಿ ಬಿಳಿಗೂಬೆಯನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳ ಬಂಧಿಸಿದೆ.

ಕಾಸರಗೋಡಿನ ಮಂಜೇಶ್ವರದ ನಿವಾಸಿಗಳಾದ ಮಹಮ್ಮದ್ ನಡುಬೈಲ್, ಅಬ್ದುಲ್ ಸತ್ತಾರ್ ಹಾಗೂ ದಕ್ಷಿಣ ಕನ್ನಡದ ದೇರಳಕಟ್ಟೆಯ ಬಿ.ಶೇಕಬ್ಬ ಬಂಧಿತ ಆರೋಪಿಗಳು. ಇವರು ಬಿಳಿಗೂಬೆಯನ್ನು ಅಧಿಕ ಬೆಲೆಗೆ ಮಾರುವ ಉದ್ದೇಶದಿಂದ ಮಾರುತಿ ವ್ಯಾಗನರ್ ಕಾರಿನಲ್ಲಿ ವಿರಾಜಪೇಟೆ ಕಡೆಗೆ ಬರುತ್ತಿದ್ದರು. ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿ ಆರೋಪಿಗಳ ಸಹಿತ ಬಿಳಿಗೂಬೆ ಹಾಗೂ ಕಾರನ್ನು ವಶಕ್ಕೆ ಪಡೆದರು. ಆರೋಪಿಗಳ ವಿರುದ್ಧ ವನ್ಯಜೀವಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಮಹಾನಿರೀಕ್ಷಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ ನಡೆಸಿದ ಕಾರ್ಯಾಚರಣೆಯಲ್ಲಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪನಿರೀಕ್ಷಕಿ ವೀಣಾನಾಯಕ್, ಸಿಬ್ಬಂದಿ ಟಿ.ಪಿ.ಮಂಜುನಾಥ್, ಕೆ.ಎಸ್.ದೇವಯ್ಯ, ಸಿ.ಬಿ.ಬೀನಾ, ಎಸ್.ಎಂ.ಯೋಗೇಶ್, ಪಿ.ಯು.ಮುನೀರ್ ಹಾಗೂ ಆರ್.ನಂದ ಕುಮಾರ್ ಪಾಲ್ಗೊಂಡಿದ್ದರು.

ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಮ್ಮೇಳನ

ಕಟ್ಟಡ ಕಾರ್ಮಿಕರಿಗೆ ಕೆಲಸ ಇಲ್ಲದೆ ಸಂಕಷ್ಟ

ಸಂಘದ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಆತಂಕ



ವಿರಾಜಪೇಟೆ, ಜೂ.20–ಕಟ್ಟಡ ನಿರ್ಮಾಣ ಕಾಮಗಾರಿ ನಡೆಸಲು ಮರಳು ಸಿಗದಂತಾಗಿದೆ. ಸಿಮೆಂಟ್ ಹಾಗೂ ಕಬ್ಬಿಣ ಸಾಮಗ್ರಿಗಳ ಬೆಲೆ ಹೆಚ್ಚಾಗಿ ಕಟ್ಟಡ ನಿರ್ಮಾಣ ಮಾಡುವವರೇ ಕಡಿಮೆಯಾಗಿದ್ದಾರೆ. ಇದರಿಂದ ಕಟ್ಟಡ ಕಾರ್ಮಿಕರಿಗೆ ಕೆಲಸ ಇಲ್ಲದೆ ಸಂಕಷ್ಟ ಎದುರಿಸುವಂತಾಗಿದೆ ಎಂದು ಕಟ್ಟಡ ಕಾರ್ಮಿಕರ ಸಂಘದ ರಾಜ್ಯ ಉಪಾಧ್ಯಕ್ಷ ಬಾಲಕೃಷ್ಣ ಶೆಟ್ಟಿ ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಪುರಭವನದಲ್ಲಿ ಆಯೋಜಿಸಿದ್ದ ಕೊಡಗು ಜಿಲ್ಲಾ ಕಟ್ಟಡ ಕಾರ್ಮಿಕರ ಸಮ್ಮೇಳನ ಹಾಗೂ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಮಿಕರನ್ನು ರಕ್ಷಿಸಬೇಕಾದ ಸರ್ಕಾರ ಅಡುಗೆ ಅನಿಲಗಳ ಬೆಲೆ 1,050 ರೂ.ಗೆ ಏರಿಸಿದೆ. ಅಲ್ಲದೆ, ದಿನನಿತ್ಯದ ವಸ್ತುಗಳ ಬೆಲೆ ಏರಿಕೆಯಿಂದ ಕಾರ್ಮಿಕರ ಬದುಕು ಇನ್ನಷ್ಟು ದುಸ್ತರವಾಗಿದೆ. ದೊಡ್ಡ ಮನೆ ಕಟ್ಟುವವರು ಚಿಕ್ಕಮನೆ ಕಟ್ಟುತ್ತಿದ್ದಾರೆ. ಇದರಿಂದ ಕಾರ್ಮಿಕರಿಗೆ ಕೂಲಿ ಕೆಲಸವೇ ಕಡಿಮೆಯಾಗಿದೆ. ಬಡ ಕುಟುಂಬಗಳು ಜೀವನ ನಡೆಸುವುದೇ ಕಷ್ಟವಾಗಿದೆ. ಸಂಕಷ್ಟದಲ್ಲಿರುವ ನೋಂದಾಯಿತ ಕಾರ್ಮಿಕರಿಗೆ ಸರ್ಕಾರ ಮನೆ, ನಿವೇಶನ ಹಾಗೂ ಕಾರ್ಮಿಕರ ಕಲ್ಯಾಣ ಮಂಡಳಿಯ ಎಲ್ಲಾ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಕಸಾಪ ಜಿಲ್ಲಾ ಅಧ್ಯಕ್ಷ ಕೇಶವ ಕಾಮತ್ ಮಾತನಾಡಿ, ಕಟ್ಟಡ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒಗ್ಗಟ್ಟಿನಿಂದ ಸಂಘಟನೆಯ ಮೂಲಕ ಸೌಲಭ್ಯ ಪಡೆಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಮಾಜ ಸೇವಕ ವಿರಾಜಪೇಟೆಯ ಸಿ.ಎ.ನಾಸೀರ್ ಮಾತನಾಡಿದರು. ಕಟ್ಟಡ ಕಾರ್ಮಿಕ ಸಂಘದ ಗೌರವ ಅಧ್ಯಕ್ಷ ಐ.ಆರ್. ಪ್ರಮೋದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾಧ್ಯಕ್ಷ ಎ.ಸಿ.ಸಾಬು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಮ್ಮೇಳನದಲ್ಲಿ ಸುಮಾರು 80 ಮಂದಿ ಕಾರ್ಮಿಕ ಫಲಾನುಭಾವಿಗಳಿಗೆ ಗುರುತಿನ ಚೀಟಿ ವಿತರಿಸ ಲಾಯಿತು. ಸಂಘದ ವಿರಾಜಪೇಟೆ ನಗರ ಕಾರ್ಯದರ್ಶಿ ರತೀಶ್, ತಾಲೂಕು ಸಂಚಾಲನಾ ಸಮಿತಿಯ ಎಸ್.ರೂಪಾ ಸೇರಿದಂತೆ ಜಿಲ್ಲೆಯ ವಿವಿಧೆಡೆಯ ಕಟ್ಟಡ ಕಾರ್ಮಿಕರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

41 ಮರಿಗಳಿಗೆ ಜನ್ಮ ನೀಡಿದ ಕೊಳಕು ಮಂಡಲ ಹಾವು

ಸಿದ್ದಾಪುರ, ಜೂ.20–ವಿರಾಜಪೇಟೆ ತಾಲೂಕಿನ ಸಿದ್ದಾಪುರದಲ್ಲಿ ರಕ್ಷಿಸಲ್ಪಟ್ಟ ಕೊಳಕುಮಂಡಲ ಹಾವೊಂದು 41 ಮರಿಗಳಿಗೆ ಜನ್ಮ ನೀಡಿದೆ.



ಇತ್ತೀಚೆಗೆ ಸಿದ್ದಾಪುರದ ಮೈಸೂರು ರಸ್ತೆಯ ಹೊಸ ಬಡಾವಣೆಯಲ್ಲಿ ಕೊಳಕು ಮಂಡಲ ಹಾವೊಂದು ಪ್ರತ್ಯಕ್ಷವಾಗಿತ್ತು. ಸ್ಥಳೀಯರು ಉರಗ ರಕ್ಷಕ ಸುರೇಶ್‌ಗೆ ಮಾಹಿತಿ ನೀಡಿದ್ದರು. ಸತತ 4 ಗಂಟೆಗಳ ಕಾಲ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ಕಲ್ಲುಬಂಡೆಗಳಡಿ ಇದ್ದ ಹಾವನ್ನು ರಕ್ಷಿಸಿದರಲ್ಲದೆ, ಗಾಯಗೊಂಡಿದ್ದ ಹಾವನ್ನು ಮನೆಯಲ್ಲಿಟ್ಟುಕೊಂಡು ಸುರೇಶ್ 2 ದಿನಗಳ ಕಾಲ ಔಷಧೋಪಚಾರ ಮಾಡಿದ್ದರು. ಸದ್ಯ ಈ ಹಾವು ಬರೋಬ್ಬರಿ 41 ಹಾವು ಮರಿಗಳಿಗೆ ಜನ್ಮ ನೀಡಿದೆ. ತಜ್ಞ ಉರಗ ರಕ್ಷಕ ಸಮಿತಿಯ ಪದಾಧಿಕಾರಿಗಳೊಂದಿಗೆ ಸುರೇಶ್ ತಿತಿಮತಿ ಅರಣ್ಯಕ್ಕೆ ತೆರಳಿ ಅರಣ್ಯಾಧಿಕಾರಿ ಉಮಾಶಂಕರ್ ಅವರ ಸಹಕಾರದೊಂದಿಗೆ ತಾಯಿ ಹಾವು ಹಾಗೂ ಮರಿ ಹಾವುಗಳನ್ನು ರಕ್ಷಿಸಿ ಅರಣ್ಯದಲ್ಲಿ ಬಿಡಲಾಯಿತು.

ಈ ಸಂದರ್ಭ ಉರುಗ ರಕ್ಷಕರಾದ ಪೊನ್ನಂಪೇಟೆ ನವೀನ ರಾಕಿ, ವಿನೋದ್ ಬಾವೆ, ಮನೋಜ್, ರೋಷನ್ ಸೇರಿದಂತೆ ಮತ್ತಿತರರಿದ್ದರು.

ಇಂದು 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ

ಮಡಿಕೇರಿ, ಜೂ.20–ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆಯಿಂದ 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯು ಜೂ.21 ರಂದು ಬೆಳಗ್ಗೆ 6.30 ಗಂಟೆಯಿಂದ 8 ಗಂಟೆಯವರೆಗೆ ನಗರದ ಕೆಳಗಿನ ಗೌಡ ಸಮಾಜದಲ್ಲಿ ನಡೆಯಲಿದೆ.ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅಧ್ಯಕ್ಷತೆ ವಹಿಸುವರು. ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಕೆ.ಜಿ.ಬೋಪಯ್ಯ, ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಅಧ್ಯಕ್ಷ ರವಿಕುಶಾಲಪ್ಪ, ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಬೋಜೇಗೌಡ, ಆಯನೂರು ಮಂಜುನಾಥ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಪಂ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಆಯುಷ್ ಇಲಾಖೆಯ ಆಯುಕ್ತ ರಾಮಚಂದ್ರ, ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ ಇತರರು ಪಾಲ್ಗೊಳ್ಳುವರು.

ಒಂದನೇ ಪುಟದಿಂದ

ದಾಖಲೆ ಅಭಿವೃದ್ಧಿ

ನಾಗನಹಳ್ಳಿ ರೈಲು ನಿಲ್ದಾಣದ ಯಾರ್ಡ್ ಪುನರ್ ನಿರ್ಮಾಣ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಿ ಮಾತನಾಡುತ್ತಿದ್ದರು. ಡಬಲ್ ಎಂಜಿನ್ ಸರ್ಕಾರ ಎಂದು ಕುಹಕವಾಡುತ್ತಿದ್ದ ಪ್ರತಿಪಕ್ಷದವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿ ರುವ ಯೋಜನೆಗಳ ಪಟ್ಟಿ ಮೂಲಕ ಉತ್ತರ ನೀಡಿದ ಅವರು, ಈ ದೇಶದಲ್ಲಿ ಸ್ವಾತಂತ್ರ್ಯ ನಂತರ ಆಡಳಿತ ನಡೆಸಿದ ಸರ್ಕಾರಗಳು ನೀಡಿದ ಯೋಜನೆಗಳು ಹಾಗೂ ಕಳೆದ 8 ವರ್ಷಗಳಲ್ಲಿ ನಾವು ನೀಡಿದ ಜನಪರ ಕಾರ್ಯಕ್ರಮಗಳನ್ನು ತಾಳೆ ಮಾಡಿ ನೋಡಿ, ಫಲಿತಾಂಶ ನಿಮಗೇ ತಿಳಿಯುತ್ತದೆ. ಈ ವಿಚಾರ ತಿಳಿದಿದ್ದರೂ ಸಹ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಸದಾ ಟೀಕಿಸುತ್ತಲೇ ಇದ್ದಾರೆ ಎಂದರು.

ಕರ್ನಾಟಕ ಆರ್ಥಿಕತೆ, ಆಧ್ಯಾತ್ಮ ಮತ್ತು ಸಂಸ್ಕೃತಿಯಲ್ಲಿ ಸಮೃದ್ಧವಾಗಿದೆ. ಅದಕ್ಕಾಗಿಯೇ ಈ ಬಾರಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮೈಸೂರಲ್ಲಿ ಆಚರಿಸಲು ಸಂಕಲ್ಪ ಮಾಡಲಾಯಿತು. 21ನೇ ಶತಮಾನದ ಗುರಿ ತಲುಪಲು ರಾಜ್ಯ ಮಾಡಿರುವ ಅಭಿವೃದ್ಧಿ ದೇಶಕ್ಕೇ ಮಾದರಿಯಾಗಿದೆ ಎಂದ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ. ವಿಶ್ವೇಶ್ವರಯ್ಯ, ರಾಷ್ಟ್ರಕವಿ ಕುವೆಂಪು ಸೇರಿದಂತೆ ಹಲವು ದೇಶ ಕಂಡ ಮಹನೀಯರನ್ನು ಕೊಟ್ಟ ನಾಡು ಇದು. ಅವರ ಅಸ್ಮಿತೆ ಇಂದಿಗೂ ಜೀವಂತವಾಗಿದ್ದು, ಅವರ ಕೊಡುಗೆಯನ್ನು ಮರೆಯಲಾಗದು. ಅದರಿಂದಾಗಿಯೇ ಸಾಮಾನ್ಯ ಜನರೂ ಇಲ್ಲಿ ಉತ್ತಮ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗಿದೆ ಎಂದರು.

ರಾಜ್ಯ ಹಾಗೂ ಕೇಂದ್ರದಲ್ಲಿ ಈ ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಸೀಮಿತ ಕಾರ್ಯಕ್ರಮಗಳಿಗೆ ಮಿತಗೊಳಿಸಿದ್ದರಿಂದ ಅದರ ಫಲಾನುಭವಿಗಳೂ ಸಹ ನಿಯಮಿತವಾಗಿದ್ದರು. ಆದರೆ 2014ರಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ಹಳ್ಳಿಗಳಿಗೂ ಅಭಿವೃದ್ಧಿ ವಿಸ್ತರಿಸಿ ಮಹಿಳೆಯರು, ರೈತರು, ಬಡವರು, ದೀನ ದಲಿತರ ಯೋಜನೆಗಳನ್ನು ರೂಪಿಸುತ್ತಾ ಬಂದಿದೆ. ಸರ್ಕಾರಿ ಯೋಜನೆಗಳು ಅರ್ಹ ವ್ಯಕ್ತಿಗಳಿಗೆ ತಲುಪಬೇಕೆಂಬ ಸಂಕಲ್ಪ ನಮ್ಮದಾಗಿದೆ ಎಂದು ಪ್ರಧಾನಿಗಳು ನುಡಿದರು.

'ಸಬ್ ಕಾ ಸಾಥ್, ಸಬ್ ವಿಕಾಸ್, ಸಬ್ ಕಾ ಪರ್ಯಾಸ್' ಎಂಬುದು ನಮ್ಮ ಧ್ಯೇಯ. 'ಒನ್ ನೇಷನ್-ಒನ್ ರೇಷನ್ ಕಾರ್ಡ್' ಯೋಜನೆಯಡಿ ಬಡತನ ಮುಕ್ತ, ಹಸಿವು ಮುಕ್ತ ಭಾರತ ಮಾಡುವ ನಮ್ಮ ಸಂಕಲ್ಪ ಸಾಕಾರವಾಗಿದೆ. ಕೇಂದ್ರ ಸರ್ಕಾರ ಮಹತ್ವದ ಯೋಜನೆಯಲ್ಲೊಂದಾದ ಆಯುಷ್ಮಾನ್ ಭಾರತ್‌ನಲ್ಲಿ 4,000 ಕೋಟಿ ರೂ. ಮಂಜೂರು ಮಾಡಿದ್ದು, 29 ಲಕ್ಷ ಮಂದಿ ಆರೋಗ್ಯ ಸೇವೆ ಪಡೆದಿದ್ದಾರೆ ಎಂದು ನರೇಂದ್ರ ಮೋದಿ ನುಡಿದರು. ಪ್ರಧಾನಮಂತ್ರಿಗಳ ಕಿಸಾನ್ ಸಮ್ಮಾನ್ ಯೋಜನೆಯಡಿ 56 ಲಕ್ಷ ಸಣ್ಣ ರೈತರ ಬ್ಯಾಂಕ್ ಖಾತೆಗೆ 10,000 ಕೋಟಿ ರೂ. ವರ್ಗಾವಣೆಯಾಗಿದೆ. ಕಿಸಾನ್ ಮತ್ತು ಅತೀ ಸಣ್ಣ ರೈತರ ಬದುಕು ಹಸನಾಗಿದೆ ಎಂದ ಅವರು, ಸ್ಟಾರ್ಟ್‌ಅಪ್ ಯೋಜನೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದು, ಉದ್ಯಮ ಆರಂಭಿಸುವ ಯುವಕರು ದಿವ್ಯಾಂಗರಿಗೆ ಅನುಕೂಲ ಮಾಡಿ ಅವರ ಜೀವನ ಸುಧಾರಿಸುವತ್ತ ಗಮನಹರಿಸಿ ಎಂದು ಸಲಹೆ ನೀಡಿದರು. ದೇಶದಲ್ಲಿರುವ ಕೋಟ್ಯಾಂತರ ದಿವ್ಯಾಂಗರಿಗಾಗಿಯೇ ಪ್ರತ್ಯೇಕ ಯೋಜನೆ ಜಾರಿ ಮಾಡಿ ವಿದ್ಯಾಭ್ಯಾಸ, ಉದ್ಯೋಗಕ್ಕೆ ಅನುಕೂಲ ಮಾಡಲಾಗಿದೆ. ರೈಲು ನಿಲ್ದಾಣಗಳಲ್ಲಿ ಅವರಿಗೆ ಅನುಕೂಲವಾಗಲೆಂದೇ ಬ್ರೈಲ್ ಲಿಪಿ ಒಳಗೊಂಡ ಪ್ರತ್ಯೇಕ ಕೌಂಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಉದ್ದಿಮೆ ಮಾಡುವವರಿಗೆ ಆರ್ಥಿಕ ನೆರವು ನೀಡಿ ಸರ್ಕಾರ ಉತ್ತೇಜನ ನೀಡುತ್ತಿದೆ ಎಂದು ಪ್ರಧಾನಿಗಳು ಇದೇ ವೇಳೆ ನುಡಿದರು.

ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ನೀಡುತ್ತಿರುವ ಜನಪರ ಹಾಗೂ ಅಭಿವೃದ್ಧಿ ಯೋಜನೆಗಳು ದೇಶಕ್ಕೇ ಮಾದರಿಯಾಗಿದೆ. ಈ ಹಿಂದೆ ಆಡಳಿತ ನಡೆಸಿದ ಕೇಂದ್ರ ಸರ್ಕಾರಗಳು ರಾಜ್ಯದ ರೈಲ್ವೆ ಯೋಜನೆಗೆ 800 ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿಡುತ್ತಿದ್ದವು. ಆದರೆ ನಮ್ಮ ಸರ್ಕಾರ ಬಂದ ಮೇಲೆ 7000 ಕೋಟಿ ಕೊಟ್ಟಿದ್ದೇವೆ. 2004ರಿಂದ 2010ರವರೆಗೆ ಕೇವಲ 16 ಕಿ.ಮೀ. ರೈಲು ಮಾರ್ಗ ವಿದ್ಯುದ್ದೀಕರಣ ಮಾಡಲು ಸಾಧ್ಯವಾಗಿತ್ತು. 2014ರಿಂದ 2020ರವರೆಗೆ ನಾವು 1600 ಕಿ.ಮೀ. ಎಲೆಕ್ಟ್ರಿಫಿಕೇಷನ್ ಮಾಡುವಲ್ಲಿ ಯಶಸ್ವಿಯಾಗಿದ್ದೇವೆ ಎಂದು ಪ್ರಧಾನಿಗಳು ಇದೇ ವೇಳೆ ನುಡಿದರು.

ಈವರೆಗೆ 5 ಸಾವಿರ ಕಿ.ಮೀ. ರಸ್ತೆ ಉನ್ನತೀಕರಿಸಿದ್ದರೆ, ಮತ್ತಷ್ಟು ಹೆದ್ದಾರಿಗಳನ್ನು ಅಭಿವೃದ್ಧಿಗೊಳಿಸಲಾಗಿದೆ. ಕರ್ನಾಟಕದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳು ಸಂಪೂರ್ಣ ಅನುಷ್ಠಾನಗೊಂಡ ಬಳಿಕ ಇಲ್ಲಿನ ಚಿತ್ರಣವೇ ಬದಲಾಗಲಿದೆ ಎಂದ ಅವರು, ನಂತರ ರಾಜ್ಯದ ಕೈಗಾರಿಕೋದ್ಯಮ ನಿರೀಕ್ಷೆಗೂ ಮೀರಿ ಬೆಳೆಯಲಿದೆ. ಇಂತಹ ಅಭಿವೃದ್ಧಿ ಯೋಜನೆಗಳನ್ನು ಕಾಣಬೇಕಿದ್ದರೆ ನಿಮ್ಮ ಆಶೀರ್ವಾದ ನಮಗೆ ಬೇಕಿದೆ ಎಂದರು.

ಇತಿಹಾಸ ಮತ್ತು ಆಧುನೀಕರಣದ ಸಮ್ಮಿಶ್ರ ಮೈಸೂರಲ್ಲಿ ಕಾಣಬಹುದು. ಇಲ್ಲಿನ ಸಂಸ್ಕೃತಿ, ಪಾರಂಪರಿಕತೆಯಿಂದಾಗಿಯೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಮೈಸೂರನ್ನು ಆಯ್ಕೆ ಮಾಡಲಾಯಿತು. ನಾಳೆ ಇಡೀ ವಿಶ್ವವೇ ಮೈಸೂರಿನತ್ತ ಗಮನ ಹರಿಸಲಿದೆ. ಪ್ರಧಾನಮಂತ್ರಿಗಳ ಸ್ವನಿಧಿ ಯೋಜನೆಯಡಿ 1.5 ಲಕ್ಷ ಬೀದಿ ಬದಿ ವ್ಯಾಪಾರಿಗಳು ನರೇಂದ್ರ ಮೋದಿ ಅವರು, 8 ವರ್ಷಗಳಲ್ಲಿ ನಮ್ಮ ಸರ್ಕಾರ 3.75 ಲಕ್ಷ ಬಡ ಕುಟುಂಬಗಳಿಗೆ ಪಕ್ಕಾ ಮನೆ ನಿರ್ಮಿಸಿಕೊಟ್ಟಿದೆ ಎಂದು ಅವರು ತಿಳಿಸಿದರು.

ಪ್ರಧಾನಿ ಸಂವಾದ

ಆ ಯುವಕ ಹೇಳುತ್ತಿದ್ದಾಗ ನನಗೆ ಸಂತೋಷವಾಯಿತು ಎಂದು ನುಡಿದರು. ಆ ಯೋಜನೆಯಿಂದ ದೇಶದಲ್ಲಿ ಲಕ್ಷಾಂತರ ಮಂದಿಯ ಆರೋಗ್ಯ ಸುಧಾರಣೆಯಾಗಿದೆ. ಅದೆಷ್ಟೋ ಬಡವರಿಗೆ ಆಸರೆಯಾಗಿದೆ ಎಂಬುದನ್ನು ತಿಳಿದು ತೃಪ್ತಿಯಾಯಿತು. ಅದೇ ರೀತಿ ಕೃಷಿ, ತೋಟಗಾರಿಕೆ ಹಾಗೂ ಇನ್ನಿತರ ಇಲಾಖೆಗಳ ಫಲಾನುಭವಿಗಳೂ ಸಹ ತಮ್ಮ ಅಭಿಪ್ರಾಯ ಹಂಚಿಕೊಂಡರು ಎಂದು ಪ್ರಧಾನಿಗಳು ನುಡಿದರು.

ಸಂಜೆ 5.40 ಗಂಟೆಗೆ ವಿಶೇಷ ಹೆಲಿಕಾಪ್ಟರ್‌ನಲ್ಲಿ ಓವೆಲ್ ಮೈದಾನಕ್ಕೆ ಬಂದಿಳಿದ ಪ್ರಧಾನಿಗಳು, ಕಾರಿನಲ್ಲಿ ನೇರವಾಗಿ ಮಹಾರಾಜ ಕಾಲೇಜು ಮೈದಾನಕ್ಕೆ ಬಂದು ವೇದಿಕೆ ಬದಿಯಲ್ಲೇ ವ್ಯವಸ್ಥೆ ಮಾಡಿದ್ದ ಪ್ರತ್ಯೇಕ ಸ್ಥಳದಲ್ಲಿ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದ ನಂತರ ಸಂಜೆ 6.05 ಗಂಟೆಗೆ ಪ್ರಧಾನ ವೇದಿಕೆಗೆ ಆಗಮಿಸಿದರು.

ನಮೋ ಯೋಗ

ಮಾಡಲಾಗಿದೆ. ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆಯುವ ಯೋಗ ಕಾರ್ಯಕ್ರಮದಲ್ಲಿ 12 ಸಾವಿರ ಸಾರ್ವಜನಿಕರು, ಜನಪ್ರತಿನಿಧಿಗಳು ಸೇರಿ 3 ಸಾವಿರ ಗಣ್ಯರು, ಅಧಿಕಾರಿ ವರ್ಗದವರು ಪಾಲ್ಗೊಳ್ಳಲು ಸ್ಥಳಾವಕಾಶ ಕಾಯ್ದಿರಿಸಲಾಗಿದೆ. ನಾಳೆ ಮುಂಜಾನೆಯಿಂದಲೇ ಯೋಗಪಟುಗಳು ಅರಮನೆ ಆವರಣಕ್ಕೆ ಆಗಮಿಸುವುದರಿಂದ ಮ್ಯಾಟ್ ಹಾಸುವ ಕಾರ್ಯವನ್ನು ಸೋಮವಾರವೇ ಪೂರ್ಣಗೊಳಿಸಲಾಗಿದೆ.

ಆಯುಷ್‌ನಿಂದ ಯೋಗ ಮ್ಯಾಟ್: ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಕಳೆದ 15 ದಿನದಿಂದ ಅರಮನೆ ಆವರಣದಲ್ಲಿ ಸಿದ್ಧತಾ ಕಾರ್ಯ ನಡೆದಿದ್ದು, ಅರಮನೆ ಮುಂಭಾಗದ ಪ್ರಾಂಗಣ ಸೇರಿದಂತೆ ಜಯಮಾರ್ತಾಂಡ ದ್ವಾರದ ರಸ್ತೆ, ತ್ರಿನೇಶ್ವರ ಸ್ವಾಮಿ ದೇವಾಲಯದ ಮುಂಭಾಗದ ಪಾರ್ಕ್, ವರಾಹಸ್ವಾಮಿ ದೇವಾಲಯ ಪಕ್ಕದ ಪಾರ್ಕ್, ಭುವನೇಶ್ವರಿ ದೇವಾಲಯ ಪಕ್ಕದ ಪಾರ್ಕ್‌ನಲ್ಲೂ ಯೋಗ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ನೋಂದಣಿ ಮಾಡಿಕೊಂಡಿದ್ದ ಯೋಗಪಟುಗಳಿಗೆ ಅರಮನೆ ಪ್ರವೇಶಕ್ಕೂ ಮುನ್ನ ಆಯುಷ್ ಇಲಾಖೆಯಿಂದ ಮ್ಯಾಟ್ ಕಿಟ್ ನೀಡುವ ಆಲೋಚನೆ ಇತ್ತು. ಆದರೆ, ಯೋಗಪಟುಗಳು ಎಲ್ಲೆಂದರಲ್ಲಿ ಯೋಗ ಮ್ಯಾಟ್ ಹಾಸಿ ಅಭಾಸ ಉಂಟು ಮಾಡಬಹುದೆಂಬ ಕಾರಣಕ್ಕೆ ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಶಾಲೆಗಳ ತರಬೇತುದಾರರು ಇಂದು ಬೆಳಗ್ಗಿನಿಂದಲೇ ಕ್ರಮಬದ್ಧ ಹಾಗೂ ಏಕಪ್ರಕಾರವಾಗಿ ಯೋಗ ಮ್ಯಾಟ್ ಹಾಸುವ ಮೂಲಕ ಶಿಸ್ತು ಕಾಪಾಡುವ ಪ್ರಯತ್ನ ಮಾಡಿದ್ದಾರೆ.

ಯೋಗ ಪ್ರದರ್ಶನಕ್ಕಾಗಿ ಅರಮನೆ ಆವರಣವನ್ನು ವಿವಿಧ ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ. ಒಂದು ಬ್ಲಾಕ್‌ನಿಂದ ಮತ್ತೊಂದು ಬ್ಲಾಕ್‌ಗೆ ಹಾದು ಹೋಗದಂತೆ ಬ್ಯಾರಿಕೇಡ್ ಅಳವಡಿಸಲಾಗಿದೆ. ಇದರಿಂದ ಯೋಗಪಟುಗಳು ನಿಗದಿತ ಸ್ಥಳದಲ್ಲೇ ಯೋಗ ಮಾಡಬೇಕಿದೆ. ಈಗಾಗಲೇ ಮ್ಯಾಟ್ ಹಾಸಿರುವುದರಿಂದ ಮುಂಜಾನೆ ಯೋಗಪಟುಗಳು ತಮ್ಮ ತಮ್ಮ ಬ್ಲಾಕ್‌ಗೆ ತೆರಳಿ ನಿಗದಿತ ಸ್ಥಳದಲ್ಲಿ ಯೋಗ ಮಾಡಲಿದ್ದಾರೆ.

ಅಂತಿಮ ಹಂತದ ಭದ್ರತಾ ಪರಿಶೀಲನೆ: ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಅರಮನೆ ಆವರಣದ ಜಯಮಾರ್ತಾಂಡ ದ್ವಾರದ ಬಳಿ ನಿರ್ಮಿಸಿರುವ ವೇದಿಕೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಯೋಗ ಮಾಡುವುದರಿಂದ ಅಂತಿಮ ಹಂತದ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಲಾಯಿತು. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗಿನಿಂದಲೇ ಅರಮನೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು. ಅರಮನೆಯ ಪ್ರಮುಖ ದ್ವಾರಗಳಾದ ಬಲರಾಮ-ಜಯರಾಮ, ಬ್ರಹ್ಮಪುರಿ, ಕರಿಕಲ್ಲುತೊಟ್ಟಿ, ಅಂಬಾವಿಲಾಸ, ವರಾಹ ಹಾಗೂ ಜಯಮಾರ್ತಾಂಡ ದ್ವಾರದ ಬಳಿ ಭಾರೀ ಬಂದೋಬಸ್ತ್ ಏರ್ಪಡಿಸಲಾಗಿದೆ. ಅದರೊಂದಿಗೆ ಒಂದೊಂದು ದ್ವಾರದ ಬಳಿಯೂ ಒಂದು ತುಕಡಿ ಪೊಲೀಸರನ್ನು ನಿಯೋಜಿಸಲಾಗಿದೆ. ಪ್ರತಿಯೊಂದು ಗೇಟ್ ಬಳಿಯೂ ಸಿಸಿ ಕ್ಯಾಮರಾ ಅಳವಡಿಸಲಾಗಿದ್ದು, ಅರಮನೆ ಆವರಣ ಪ್ರವೇಶಿಸುವ ಪ್ರತಿಯೊಬ್ಬರೂ ಕಡ್ಡಾಯವಾಗಿ ಮೆಟಲ್ ಡಿಟೆಕ್ಟರ್ ಹಾದು ಹೋಗಬೇಕಾಗಿದೆ. ಅರಮನೆಗೆ ಆಗಮಿಸುವ ಪ್ರತಿಯೊಬ್ಬರ ಮೇಲೂ ತೀವ್ರ ನಿಗಾವಹಿಸಲಾಗುತ್ತದೆ.

ಮುಂಜಾನೆ 3.30ರಿಂದ ಪ್ರವೇಶ: ಅರಮನೆ ಆವರಣದಲ್ಲಿ ನಡೆಯುವ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿರುವ ಯೋಗಪಟುಗಳು ಮುಂಜಾನೆ 3.30ರಿಂದಲೇ ಅರಮನೆಗೆ ಆಗಮಿಸಲು ಸೂಚಿಸಲಾಗಿದೆ. ಯೋಗ ಶಾಲೆ ಹಾಗೂ ವಿವಿಧ ಶಾಲಾ-ಕಾಲೇಜುಗಳಿಂದ ಯೋಗಪಟುಗಳನ್ನು ಕರೆತರಲು ಬಸ್ ವ್ಯವಸ್ಥೆ ಮಾಡಲಾಗಿದೆ. ಸೋಮವಾರ ಬೆಳಗ್ಗೆ ಶಾಸಕ ಎಸ್.ಎ.ರಾಮದಾಸ್ ಅರಮನೆ ಆವರಣದಲ್ಲಿ ಮಾರ್ಗದರ್ಶನ ನೀಡಲಿರುವ ತರಬೇತುದಾರರೊಂದಿಗೆ ಸಮಾಲೋಚಿಸಿದರು. ಯೋಗಪಟುಗಳಿಗೆ ಉತ್ತಮ ಮಾರ್ಗದರ್ಶನ ನೀಡಿ, ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಮನವಿ ಮಾಡಿದರು.

ಚಾಮುಂಡೇಶ್ವರಿ ದರ್ಶನ ಪಡೆದ ಪ್ರಧಾನಿ ಮೋದಿ

ಮೈಸೂರು, ಜೂ.20(ಎಸ್‌ಬಿಡಿ)- ಪ್ರಧಾನಿ ಮೋದಿ ಅವರು ಸೋಮವಾರ ರಾತ್ರಿ ನಾಡದೇವತೆ ಚಾಮುಂಡೇಶ್ವರಿ ದರ್ಶನ ಪಡೆದು, ವಿಶೇಷ ಪೂಜೆ ಸಮರ್ಪಿಸಿದರು.

ಪ್ರಧಾನಿ ಆದ ಬಳಿಕ ಇದೇ ಮೊದಲು ಚಾಮುಂಡಿಬೆಟ್ಟಕ್ಕೆ ಆಗಮಿಸಿದ ನರೇಂದ್ರ ಮೋದಿ ಅವರನ್ನು ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಮತ್ತಿತರರು ದೇವಾಲಯಕ್ಕೆ ಬರಮಾಡಿಕೊಂಡರು. ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು ಧನ್ಯತಾಭಾವ ವ್ಯಕ್ತಪಡಿಸಿದ ಮೋದಿ, ಅರ್ಚಕರ ಸಲಹೆಯಂತೆ ಸಂಕಲ್ಪ ಪೂಜೆ ನೆರವೇರಿಸಿದರು. ಬಳಿಕ ಗರ್ಭಗುಡಿ ಮುಂದೆ ಕುಳಿತು ಕೆಲಹೊತ್ತು ಧ್ಯಾನಸ್ಥರಾಗಿ ಶಕ್ತಿಮಾತೆ ಚಾಮುಂಡೇಶ್ವರಿಗೆ ನಮಿಸಿದರು.

ಈ ಸಂದರ್ಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಜಿ.ಟಿ.ದೇವೇಗೌಡ, ಮುಜರಾಯಿ ಸಚಿವರಾದ ಶಶಿಕಲಾ ಜೊಲ್ಲೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಸುಮಾರು 20 ನಿಮಿಷ ದೇವಾಲದಲ್ಲಿದ್ದು ಚಾಮುಂಡೇಶ್ವರಿಗೆ ನಮನ ಸಮರ್ಪಿಸಿದ ಪ್ರಧಾನಿ ಮೋದಿ, ಅಲ್ಲಿಂದ ಮಹಾತ್ಮಗಾಂಧಿ ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲ್ಯೂ ಪ್ಲಾಜಾ ಹೋಟೆಲ್‌ಗೆ ತೆರಳಿ, ವಾಸ್ತವ್ಯ ಹೂಡಿದರು. ಮಂಗಳವಾರ ಬೆಳಗ್ಗೆ ಅರಮನೆ ಅಂಗಳದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗಿಯಾದ ಬಳಿಕ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.





ನರೇಂದ್ರ ಮೋದಿ ಕಾರ್ಯಕ್ರಮದಲ್ಲಿ ಜಯಘೋಷಗಳ ಜುಗಲ್‌ಬಂದಿ

ಮೈಸೂರು, ಜೂ.20(ಎಸ್‌ಬಿಡಿ)-ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಜಯಘೋಷದ ಜುಗಲ್‌ಬಂದಿ ಸೃಷ್ಟಿಯಾಗಿತ್ತು. ನೆರೆದಿದ್ದವರು ಪ್ರಧಾನಿ ಮೋದಿ ಆಗಮನಕ್ಕೂ ಮುನ್ನವೇ ಭಾರತ್ ಮಾತಾಕಿ ಜೈ, ವಂದೇ ಮಾತರಂ ಹಾಗೂ ಮೋದಿಗೆ ಜೈಕಾರ ಆರಂಭಿಸಿದರು. ಅದರಲ್ಲೂ ವೇದಿಕೆ ಮುಂಭಾಗದ ಇಕ್ಕೆಲದಲ್ಲಿ ಜಮಾಯಿಸಿದ್ದ ಮಹಿಳೆಯರು ಜಯಘೋಷದ ಜುಗಲ್ ಬಂದಿ ಸೃಷ್ಟಿಸಿದ್ದರು. ಸಂಜೆ 5.59ಕ್ಕೆ ಪ್ರಧಾನಿ ಮೋದಿ ವೇದಿಕೆಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಸಹಸ್ರಾರು ಜನ, ಹೋ... ಎಂದು ಉದ್ಘೋಷಿಸಿದರು. ಇದರಿಂದ ಪುಳಕಿತರಾದ ಮೋದಿ ಎರಡೂ ಕೈಬೀಸಿ ಜನರಿಗೆ ಧನ್ಯವಾದ ಸಮರ್ಪಿಸಿದರು. ಈ ವೇಳೆ ಸಿಎಂ ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ಮೋದಿ ಅವರಿಗೆ ಅತ್ಯಾಕರ್ಷಕ ಮೈಸೂರು ಪೇಟ ಧರಿಸಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ ಅಭಿನಂದಿಸಿದರು. ಪೇಟ ಧರಿಸಿಯೇ ನಾಡಗೀತೆಗೆ ಗೌರವ ಸೂಚಿಸಿ, ಬಳಿಕ ಅದನ್ನು ತೆಗೆದಿಟ್ಟರು. ಮೋದಿ ಅವರಿಗೂ ಮುನ್ನ ಸಂಸದ ಪ್ರತಾಪ್ ಸಿಂಹ ವೇದಿಕೆಗೆ ಬಂದಾಗಲೂ ನೆರೆದಿದ್ದವರು ಹೋ... ಎಂದು ಕೂಗಿದರು. ಸ್ವಾಗತ ಭಾಷಣದ ವೇಳೆ ಅವರ ಪ್ರಸ್ತಾಪವಾದಾಗಲೂ ಈ ರೀತಿಯ ಪ್ರತಿಕ್ರಿಯೆ ವ್ಯಕ್ತವಾಯಿತು.

ಪ್ರಾಂಶುಪಾಲರ ಮೇಲೆ ಕೈ ಮಾಡಲು ಮುಂದಾದ ಮಂಡ್ಯ ಶಾಸಕ ಎಂ.ಶ್ರೀನಿವಾಸ್

ಮಂಡ್ಯ, ಜೂ.20(ಮೋಹನ್‌ರಾಜ್)- ಕರೆದ ತಕ್ಷಣ ಪ್ರಾಂಶುಪಾಲರು ಬರಲಿಲ್ಲ ಎಂಬ ಕಾರಣಕ್ಕೆ ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಶ್ರೀನಿವಾಸ್, ಐಟಿಐ ಕಾಲೇಜಿನ ಪ್ರಾಂಶುಪಾಲರ ಮೇಲೆ ಕೈ ಮಾಡಲು ಮುಂದಾದ ಘಟನೆ ನಗರದ ಕೈಗಾರಿಕಾ ಬಡಾವಣೆಯಲ್ಲಿರುವ ಐಟಿಐ ಕಾಲೇಜಿನಲ್ಲಿ ಸೋಮವಾರ ನಡೆದಿದೆ.

ರಾಜ್ಯದ ಅನೇಕ ಐಟಿಐ ಕಾಲೇಜುಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಲ್ಲಿ ವರ್ಚುವಲ್ ಮೂಲಕ ಉನ್ನತೀಕರಣಗೊಳಿಸಿದ್ದು, ಆ ಪೈಕಿ ಮಂಡ್ಯದ ಐಟಿಐ ಕಾಲೇಜು ಸಹ ಒಂದು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕಾಲೇಜಿಗೆ ಆಗಮಿಸಿದ್ದ ಶಾಸಕರು ಸಾಂಕೇತಿಕವಾಗಿ ಟೇಪ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದಾದ ಬಳಿಕ ಕಂಪ್ಯೂಟರ್ ಲ್ಯಾಬ್ ಘಟಕವನ್ನು ನಗರಸಭೆ ಅಧ್ಯಕ್ಷ ಮಂಜು ಉದ್ಘಾಟಿಸಿ, ಲ್ಯಾಬ್ ಒಳಗೆ ತೆರಳಿದಾಗ ಪ್ರಾಂಶುಪಾಲ ನಾಗಾನಂದ ಅವರನ್ನು ಕಾಲೇಜಿನ ನೂತನ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಲು ಶಾಸಕರು ಕರೆದಿದ್ದಾರೆ. ಈ ವೇಳೆ ಆ ಜಾಗ ಕಿರಿದಾಗಿದ್ದರಿಂದ ಜನರ ನಡುವೆ ನುಸುಳಿಕೊಂಡು ಪ್ರಾಂಶುಪಾಲರು ಬರಲು ತಡವಾಗಿದೆ.

ಈ ವೇಳೆ ಕೋಪಗೊಂಡ ಶಾಸಕ ಶ್ರೀನಿವಾಸ್ ನಾನು ಕರೆದ ತಕ್ಷಣ ಬಾರದೆ ಏನು ಮಾಡುತ್ತಿದ್ದೆ ಎಂದು ಪ್ರಾಂಶುಪಾಲರನ್ನು ಗದರಿಸಿ, ಬೈದು ಕೈ ಮಾಡಲು ಮುಂದಾಗಿದ್ದಾರೆ. ಬಳಿಕ ಮೂರ್‍ನಾಲ್ಕು ಬಾರಿ ಅವರಿಗೆ ಕಪಾಳಕ್ಕೆ ಹೊಡೆಯಲು ಯತ್ನಿಸಿದರಾದರೂ, ಪ್ರಾಂಶುಪಾಲರು ಹಿಂದೆ ಸರಿದಿದ್ದರಿಂದ ಏಟು ಬೀಳಲಿಲ್ಲ.

ಶಾಸಕರು ಕೇಳಿದ ಪ್ರಶ್ನೆಗೆ ಉತ್ತರಿಸುವಾಗ ಮತ್ತೆ ಮುಂದೆ ಬಂದ ಎಂ.ಶ್ರೀನಿವಾಸ್ ಪ್ರಾಂಶುಪಾಲ ನಾಗಾನಂದ ಮೇಲೆ ಕೈ ಮಾಡಲು ಮುಂದಾದರು. ನಿಮ್ಮಂತಹವರಿಂದ ಮಂಡ್ಯ ಅಭಿವೃದ್ಧಿ ಯಾಗುತ್ತಿಲ್ಲ ಎಂದು ಏರುಧ್ವನಿಯಲ್ಲಿ ಪ್ರಾಂಶುಪಾಲರನ್ನು ತರಾಟೆಗೆ ತೆಗೆದುಕೊಂಡು ಗದರಿಸಿ ಬೈದು ಅಲ್ಲಿಂದ ಕಳುಹಿಸಿದ್ದಾರೆ. ಈ ವೇಳೆ ಶಾಸಕರೊಂದಿಗಿದ್ದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮತ್ತು ಕಾಲೇಜು ಸಿಬ್ಬಂದಿ ಒಂದು ಕ್ಷಣ ತಬ್ಬಿಬ್ಬಾದರು. ಈ ಘಟನೆಗೆ ಉಪವಿಭಾಗಾಧಿಕಾರಿ ಐಶ್ವರ್ಯ, ನಗರಸಭೆ ಅಧ್ಯಕ್ಷ ಮಂಜು, ಮೈಷುಗರ್ ಅಧ್ಯಕ್ಷ ಶಿವಲಿಂಗೇಗೌಡ ಸೇರಿದಂತೆ ಹಲವರು ಸಾಕ್ಷಿಯಾದರು. ಒಟ್ಟಾರೆ 3 ಬಾರಿ ಶಾಸಕರಾಗಿರುವ ಹಿರಿಯ ರಾಜಕಾರಣಿ ಎಂ.ಶ್ರೀನಿವಾಸ್ ಅವರು ಕಾಲೇಜಿನ ಪ್ರಾಂಶುಪಾಲರ ಮೇಲೆ ಕೈ ಮಾಡಲು ಮುಂದಾಗಿದ್ದು, ಸಾರ್ವಜನಿಕ ವಲಯದಲ್ಲಿ ಪರ, ವಿರೋಧ ಚರ್ಚೆಗೆ ಗ್ರಾಸವಾಗಿದೆ.



ನಾನು ಕಾಲೇಜಿಗೆ ಭೇಟಿ ನೀಡಿದ್ದ ವೇಳೆ ಕಾಲೇಜಿನಲ್ಲಿ ಸರಿಯಾದ ವ್ಯವಸ್ಥೆ ಮಾಡಿರಲಿಲ್ಲ. ಅಲ್ಲದೇ ಕಾಲೇಜಿನ ನೂತನ ವ್ಯವಸ್ಥೆಗಳ ಬಗ್ಗೆ ಮಾಹಿತಿ ಕೇಳುವ ವೇಳೆ ಪ್ರಾಂಶುಪಾಲರು ಸ್ಥಳದಲ್ಲಿರಲಿಲ್ಲ. ಹೀಗಾಗಿ ಅವರನ್ನು ಬೈದು, ಗದರಿದೇನೇ ಹೊರತು ಯಾವುದೇ ರೀತಿಯ ಹಲ್ಲೆಗೆ ಮುಂದಾಗಿಲ್ಲ.
- ಎಂ.ಶ್ರೀನಿವಾಸ್, ಶಾಸಕರು.

ಪಿಯುನಲ್ಲಿ ಪಾಸಾದವರು ಪ್ರಾಥಮಿಕ ಶಾಲಾ ಶಿಕ್ಷಕರಾಗಬಹುದು

ಮೈಸೂರು, ಜೂ.20- ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ವತಿಯಿಂದ 2022-23 ನೇ ಸಾಲಿನ ಡಿ.ಇ.ಎಲ್.ಇ.ಡಿ ಟಿ.ಸಿ.ಎಚ್ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ದಾಖಲಾತಿ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಪ್ರವೇಶಕ್ಕೆ ದ್ವಿತೀಯ ಪಿಯುಸಿಯಲ್ಲಿ ಸಾಮಾನ್ಯ ಅಭ್ಯರ್ಥಿಗಳು ಶೇ.50, ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೇ.45 ಅಂಕಗಳ ಪಡೆದಿರಬೇಕು. ಪರಿಶಿಷ್ಟ ಜಾತಿ ಅಥವಾ ಪಂಗಡದ ವಿದ್ಯಾರ್ಥಿಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಸಾಮಾನ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ಶುಲ್ಕ ಕೇವಲ 3015 ರೂ. ವಿದ್ಯಾರ್ಥಿವೇತನ ಶುಲ್ಕ ಮರುಪಾವತಿಗೆ ಅವಕಾಶವಿರುತ್ತದೆ. ಅಲ್ಪಸಂಖ್ಯಾತ ಹಾಗೂ ಕಾರ್ಮಿಕರ ಮಕ್ಕಳಿಗೆ 25000 ರೂ. ವಿದ್ಯಾರ್ಥಿವೇತನವಿದೆ.

ಡಿ.ಇ.ಎಲ್.ಇ.ಡಿ ಕೋರ್ಸ್ ಮುಗಿದ ನಂತರ ಖಾಸಗಿ ಶಾಲೆಯಲ್ಲಿ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗುವುದು. ಆಸಕ್ತ ಅಭ್ಯರ್ಥಿಗಳು ಪಿ.ಎಸ್.ಟಿ.ಇ ನೋಡಲ್ ಅಧಿಕಾರಿಗಳಾದ ಡಿ.ಆರ್.ಅಮಿತ್ ಅಥವಾ ದೂ.ಸಂ: 8971265899, 9535565579, 9964449959 ಮತ್ತು 8722660192 ಅನ್ನು ಸಂಪರ್ಕಿಸಬಹುದು ಎಂದು ಡಯಟ್‌ನ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲಿಕಾ ಚೇತರಿಕೆ ಕಾರ್ಯಕ್ರಮ

ಮೈಸೂರು, ಜೂ.20- ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ 2022-23 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ನಾಲ್ಕನೇ ತರಗತಿಯಿಂದ 9ನೇ ತರಗತಿಯವರೆಗೆ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಕಾರ್ಯಕ್ರಮದ ಯಶಸ್ಸು ಮತ್ತು ಮಾರ್ಗದರ್ಶನಕ್ಕಾಗಿ ಜಿಲ್ಲಾ ಮತ್ತು ತಾಲೂಕು ಹಂತದಲ್ಲಿ ಸಹಾಯವಾಣಿಗಳನ್ನು ತೆರೆಯಲಾಗಿದೆ. ಜಿಲ್ಲಾ ಅಥವಾ ತಾಲೂಕಿನ ಹೆಸರು ಮತ್ತು ಸಹಾಯವಾಣಿ ವಿವರ: ಮೈಸೂರು ಜಿಲ್ಲೆ-9480195303, ಮೈಸೂರು ತಾಲೂಕು-9972713465, ಹೆಗ್ಗಡದೇವನಕೋಟೆ-9591177191, ಹುಣಸೂರು-9731981371, ಕೆಆರ್ .ನಗರ-9480695313, ಮೈಸೂರು ಉತ್ತರ- 7019612309, ಮೈಸೂರು ಗ್ರಾಮಾಂತರ-974399336, ಮೈಸೂರು ದಕ್ಷಿಣ-9844076131, ನಂಜನಗೂಡು-9740736868, ಪಿರಿಯಾಪಟ್ಟಣ- 9380190656, ಟಿ .ನರಸೀಪುರ-8971167521

ಮೈಸೂರು ಜಿಲ್ಲೆಯ ಸಾರ್ವಜನಿಕರು, ವಿದ್ಯಾರ್ಥಿಗಳು, ಶಿಕ್ಷಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ನ ಪ್ರಾಂಶುಪಾಲರು ಅಥವಾ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಯೋಗ ದಿನಾಚರಣೆ ಪ್ರಯುಕ್ತ ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ (ಮೈಮುಲ್) ಆವರಣದಲ್ಲಿ ಶುಕ್ರವಾರ ಯೋಗ ಗುರು ವಿಠ್ಠಲರಾವ್ ಅವರ ಮಾರ್ಗದರ್ಶನದಲ್ಲಿ ಯೋಗ ಕಾರ್ಯಕ್ರಮ ನಡೆಯಿತು. ಈ ವೇಳೆ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರಾದ ಕೆ.ಉಮಾಶಂಕರ್, ಎಸ್.ಸಿ.ಅಶೋಕ್, ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್ ಮತ್ತು ಡೇರಿ ಸಿಬ್ಬಂದಿ ಉಪಸ್ಥಿತರಿದ್ದರು.

ಬುಡಕಟ್ಟು ಆಶ್ರಮ ಶಾಲೆಗಳ ಶಿಕ್ಷಕರಿಗೆ ಆರು ದಿನಗಳ ಪುನಶ್ಚೇತನ ತರಬೇತಿಗೆ ಚಾಲನೆ

ಶಿಕ್ಷಕರಿಗೆ ಸಂವಹನ ಕೌಶಲ್ಯ ಬಹಳ ಮುಖ್ಯ

ಮೈಸೂರು ವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಪಿ.ಜ್ಯೋತಿ ಅಭಿಮತ

ಮೈಸೂರು, ಜೂ.20(ಆರ್‌ಕೆಬಿ)- ಕಾಡಂಚಿನ ಹಾಗೂ ಕಾಡಿನಿಂದ ಹೊರ ಬಂದ ಬುಡಕಟ್ಟು ಮಕ್ಕಳಿಗೆ ಪಾಠ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಹೀಗಿದ್ದೂ ಅಂತಹ ಬುಡಕಟ್ಟು ಮಕ್ಕಳಿಗೆ ಪಾಠ ಮಾಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿರುವ ಶಿಕ್ಷಕರು ಅಭಿನಂದನಾರ್ಹರು ಎಂದು ಮೈಸೂರು ವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಪಿ.ಜ್ಯೋತಿ ತಿಳಿಸಿದರು.

ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಜಂಟಿಯಾಗಿ ಮೈಸೂರಿನ ಟಿ.ಕೆ. ಲೇಔಟ್‌ನಲ್ಲಿರುವ ಪ್ರಾದೇಶಿಕ ದೂರವಾಣಿ ತರಬೇತಿ ಕೇಂದ್ರದಲ್ಲಿ ಪರಿಶಿಷ್ಟ ಪಂಗಡದ ಮಹರ್ಷಿ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಇಂಗ್ಲಿಷ್, ಗಣಿತ ಹಾಗೂ ವಿಜ್ಞಾನ ವಿಷಯಗಳನ್ನು ಬೋಧಿಸುತ್ತಿರುವ ಶಿಕ್ಷಕರಿಗೆ ಆಯೋಜಿಸಿದ್ದ ಆರು ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.



ಕಲಿಕೆ ನಿರಂತರವಾದದ್ದು, ಅದಕ್ಕೆ ವಯಸ್ಸಿನ ಭೇದವಿಲ್ಲ. ಆದರೆ ಶಿಕ್ಷಕರಿಗೆ ಕೌಶಲ್ಯ ಇರುತ್ತದೆ. ಸಂವಹನ ಕೌಶಲ್ಯ ಇರಲೇಬೇಕು. ಅದಿಲ್ಲದಿದ್ದರೆ ಶಿಕ್ಷಕ ಸರಿಯಾಗಿ ಪಾಠ ಮಾಡಲು ಸಾಧ್ಯವಾಗುವುದಿಲ್ಲ. ಶಿಕ್ಷಕರಾದವರಿಗೆ ಭಾಷೆ ಮತ್ತು ವಿಷಯದ ಮೇಲೆ ಹಿಡಿತ ಇರಬೇಕು. ಮಕ್ಕಳ ಮಟ್ಟಕ್ಕೆ ಹೋಗಿ ಪಾಠ ಮಾಡಬೇಕಾದದ್ದು ಮುಖ್ಯ. ಶಿಕ್ಷಕರು ಶಿಸ್ತಿನಿಂದಿದ್ದರೆ ಆ ಶಿಸ್ತನ್ನು ಮಕ್ಕಳೂ ಕಲಿಯಲು ಸಾಧ್ಯ ಎಂದರು.

ಶಿಕ್ಷಕರಿಗೆ ಭಾಷೆ ಮತ್ತು ವಿಷಯಗಳ ಮೇಲೆ ಹಿಡಿತ ಇರಬೇಕು. ಪಾಠ ಮಾಡುವ ನಿಮ್ಮದೇ ಆದ ವಿಧಾನ, ಮಕ್ಕಳು ಗ್ರಹಿಸುವಂತೆ ಮಕ್ಕಳನ್ನು ಪ್ರೇರೇಪಿಸುವುದು, ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಿಸುವುದು, ಜೀವನ ಕೌಶಲ್ಯಗಳನ್ನು ತಿಳಿಸಿಕೊಡುವುದು, ಜೊತೆಗೆ ಮಕ್ಕಳಲ್ಲಿ ಪ್ರಶ್ನೆಗಳನ್ನು ಕೇಳುವ ಮನೋಭಾವ ಹುಟ್ಟು ಹಾಕುವುದು, ಮಕ್ಕಳಲ್ಲಿರುವ ಒತ್ತಡ ಕಡಿಮೆ ಮಾಡುವುದು ಮುಖ್ಯ ಎಂದು ಆಶ್ರಮ ಶಾಲೆ ಶಿಕ್ಷಕರಿಗೆ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಪ್ರಾಂಶುಪಾಲ ರಘುನಂದನ್ ಮಾತನಾಡಿ, ಬುಡಕಟ್ಟು ಜನರದ್ದು ನಾಗರಿಕ ಸಂಸ್ಕೃತಿಗಿಂತ ಬಹಳ ಉತ್ಕೃಷ್ಟ ಸಂಸ್ಕೃತಿ. ಆದರೂ ಅವರಿಗೆ ಶಿಕ್ಷಣ ಬೇಕು. ಎಲ್ಲಾ ಬುಡಕಟ್ಟು ಜನರು ನಾಗರಿಕ ಸಮಾಜಕ್ಕೆ ಬಂದಿದ್ದಾರೆ. ಆದರೆ ನಾಗರಿಕ ಸಮಾಜದಿಂದ ಅವರು ಮೋಸ ಹೋಗಬಾರದು. ನಮ್ಮ ಸಮಾಜಕ್ಕೆ ಹೊಂದಿಸಿಕೊಳ್ಳುವಂತಹ ಶಿಕ್ಷಣ ಅವರಿಗೆ ನೀಡುವುದು ಅಗತ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ರಾಜೇಶ್ ಜಿ.ಗೌಡ, ಬುಡಕಟ್ಟು ಆಶ್ರಮ ಶಾಲೆಗಳ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದ್ದು, ಇಂದಿನ ತರಬೇತಿಯಲ್ಲಿ ಮೈಸೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ ಇನ್ನಿತರೆ ಜಿಲ್ಲೆಗಳ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ಶಿಕ್ಷಣ ಇಲಾಖೆ ಶಿಕ್ಷಕರು ಹಾಗೂ ಆಶ್ರಮ ಶಾಲೆಗಳ ಶಿಕ್ಷಕರ ಮಧ್ಯೆ ಇರುವ ದೊಡ್ಡ ಅಂತರವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪ್ರತೀ ವರ್ಷ ಇಂತಹ ತರಬೇತಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪಾಠಗಳನ್ನು ಕೇವಲ ಹೇಳುವುದಷ್ಟೇ ಅಲ್ಲ ಬೋಧನೆ ಮಾಡಿದರೆ ನೆನಪಿನಲ್ಲಿ ಉಳಿಯಲು ಸಾಧ್ಯ. ನಿಮಗೆ ನೀವೇ ಮಕ್ಕಳೊಂದಿಗೆ ತೊಡಗಿಸಿಕೊಂಡು ಚಟುವಟಿಕೆ ಆಧಾರದಲ್ಲಿ ತರಬೇತಿ ನೀಡುವುದು ಈ ತರಬೇತಿಯ ಉದ್ದೇಶವಾಗಿದೆ. ಮಕ್ಕಳಿಗೆ ಹೆಚ್ಚು ಹುರುಪಿನಿಂದ ಪಾಠ ಮಾಡಲು ಈ ತರಬೇತಿ ಅನುಕೂಲ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಶ್ರಮ ಶಾಲೆಗಳಲ್ಲಿ ಬುಡಕಟ್ಟು ಮಕ್ಕಳು ಸಾಕಷ್ಟು ಮಂದಿ ಮೇಲೇರಿದ್ದಾರೆ ಎಂದರೆ ಇದರಲ್ಲಿ ಆಶ್ರಮ ಶಾಲೆಗಳ ಶಿಕ್ಷಕರ ಪಾತ್ರ ಬಹಳ ದೊಡ್ಡದಿದೆ. ಹಾಗಾಗಿ ಶಿಕ್ಷಕರು ತರಬೇತಿಯಲ್ಲಿ ಸಕ್ರಿಯವಾಗಿ ಸಾಧ್ಯವಾದಷ್ಟು ಮಾಹಿತಿ ಪಡೆದು ಮಕ್ಕಳಿಗೆ ಇದರಿಂದ ಉಪಯೋಗ ಆಗುವಂತಾಗಬೇಕು ಎಂದು ಹಾರೈಸಿದರು.

ತರಬೇತಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ 75ಕ್ಕೂ ಹೆಚ್ಚು ಆಶ್ರಮ ಶಾಲೆಗಳ ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಸಿ.ಶಿವಕುಮಾರ್, ಲೆಕ್ಕಾಧಿಕಾರಿ ಗಿರೀಶ್, ಮೋಹನ್, ಸಂಪನ್ಮೂಲ ವ್ಯಕ್ತಿಗಳಾದ ಭಾಗ್ಯಲಕ್ಷ್ಮಿ, ಎಸ್.ನಾಗರಾಜು, ಮಧುಸೂದನ್, ಎಸ್.ಆಶಾ, ಜಿ.ಮಹೇಶ್, ನಂದೀಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ



ಮೈಸೂರಲ್ಲಿ ಮೋದಿ ಹವಾ



ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಪ್ರಧಾನಿ ಮೋದಿಯವರ ಕಾರ್ಯಕ್ರಮದಲ್ಲಿ ನೆರೆದಿದ್ದ ಜನಸ್ತೋಮ.

ಪ್ರಧಾನಿ ಸಾಗಿದ ಮಾರ್ಗದಲ್ಲಿ ತಂಡೋಪತಂಡವಾಗಿ ನಿಂತಿದ್ದ ಜನ: ಭಾರೀ ಜಯಘೋಷ

ಮೈಸೂರು, ಜೂ.20– ಮೈಸೂರಿನಲ್ಲಿ ಇಂದು ಪ್ರಧಾನಿ ಮೋದಿ ಅವರದ್ದೇ ಹವಾ. ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕಾರ್ಯಕ್ರಮ ಮಾತ್ರವಲ್ಲದೇ ಅವರು ಸಂಚರಿಸಿದ ಮಾರ್ಗದುದ್ದಕ್ಕೂ ಲಕ್ಷಾಂತರ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಮೋದಿ ಅವರ ದರ್ಶನಕ್ಕಾಗಿ ಕಾದು ಕುಳಿತ್ತಿದ್ದ ದೃಶ್ಯ ಕಂಡು ಬಂತು.

ಮಹಾರಾಜ ಕಾಲೇಜು ಮೈದಾನವನ್ನು ಸಂಪೂರ್ಣವಾಗಿ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗಿತ್ತು. ಮಳೆ ಬರಬಹುದೆಂಬ ನಿರೀಕ್ಷೆಯಿಂದ ವೇದಿಕೆ ಮಾತ್ರವಲ್ಲದೇ ಕಾರ್ಯಕರ್ತರು ಆಸೀನರಾಗಿದ್ದ ಸಭಾಂಗಣಕ್ಕೂ ವಾಟರ್‌ಪ್ರೂಫ್ ಟಾಪ್ ಅಳವಡಿಸಲಾಗಿತ್ತು. ಮೈದಾನದ ಪ್ರಧಾನ ದ್ವಾರದಲ್ಲಿ ಸಾರ್ವಜನಿಕರಿಗೆ ಪ್ರವೇಶ ಕಲ್ಪಿಸಲಾಗಿತ್ತು. ಕಾರ್ಯಕ್ರಮ ಸಂಜೆ 5.50ಕ್ಕೆ ಆರಂಭವಾಯಿತಾದರೂ ಮಧ್ಯಾಹ್ನ 2.30 ರಿಂದಲೇ ಜನರು ತಂಡೋಪತಂಡವಾಗಿ ಬರಲಾರಂಭಿಸಿದ್ದರು. 3 ಗಂಟೆ ನಂತರ ಜನಸ್ತೋಮ ಹೆಚ್ಚಾಗಿದ್ದರಿಂದ ಅವರನ್ನು ನಿಯಂತ್ರಿಸಲು ಪೊಲೀಸರು ಹೆಣಗಾಡಬೇಕಾಯಿತು. ನೂಕು ನುಗ್ಗಲಿನಲ್ಲಿ ಹಲವರು ತಮ್ಮ ಚಪ್ಪಲಿಗಳನ್ನು ಕಳೆದುಕೊಂಡಿದ್ದು, ಮೈದಾನದ ಪ್ರಧಾನ ದ್ವಾರದ ಬಳಿ ಚಪ್ಪಲಿಗಳ ರಾಶಿಯೇ ಬಿದ್ದಿತ್ತು.

ಮೈದಾನದಲ್ಲಿ ತಾತ್ಕಾಲಿಕ ಶೌಚಾಲಯಗಳು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ಮಹಿಳೆಯರು ಹಾಗೂ ಗಣ್ಯ ವ್ಯಕ್ತಿಗಳು ಮತ್ತು ಮಾಧ್ಯಮದವರಿಗಾಗಿ ಮೈದಾನದ ಒಳಗೆ ಪ್ರತ್ಯೇಕ ಲೇನ್‌ಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಸ್ವಸಹಾಯ ಸಂಘದ ಮಹಿಳೆಯರೇ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು.

ವೇದಿಕೆಗೆ ಹೊಂದಿಕೊಂಡಂತೆಯೇ 76 ವಿವಿಧ ಯೋಜನೆಗಳ ಫಲಾನುಭವಿಗಳೊಂದಿಗೆ ಮೋದಿ ಸಂವಾದ ನಡೆಸಲು ಪ್ರತ್ಯೇಕ ವಾಟರ್ ಪ್ರೂಫ್ ತಾತ್ಕಾಲಿಕ ಸಭಾಂಗಣ ನಿರ್ಮಿಸಲಾಗಿತ್ತು. ವೇದಿಕೆ ಕಾರ್ಯಕ್ರಮವನ್ನು ಸಾರ್ವಜನಿಕರು ವೀಕ್ಷಿಸಲು ಮೈದಾನದ ಒಳಗೆ ಹಾಗೂ ಹೊರಗೆ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗಿತ್ತು. ಮೈದಾನ ಸಂಪೂರ್ಣವಾಗಿ ತುಂಬಿ ಒಳಗೆ ಪ್ರವೇಶಿಸಲು ಸಾಧ್ಯವಾಗದ ನೂರಾರು ಜನರು ಮೈದಾನದ ಹೊರಗೆ ಬುಲೇವಾರ್ಡ್ ರಸ್ತೆಯಲ್ಲಿ ಕುಳಿತು ಎಲ್‌ಇಡಿ ಪರದೆಯಲ್ಲಿ ಮೂಡಿ ಬಂದ ಕಾರ್ಯಕ್ರಮದ ದೃಶ್ಯಗಳನ್ನು ವೀಕ್ಷಿಸಿದರು.

ಮೋದಿ ಅವರು ಚಾಮುಂಡಿಬೆಟ್ಟಕ್ಕೆ ತೆರಳಲಿದ್ದಾರೆ ಎಂಬ ಮಾಹಿತಿ ಪಡೆದಿದ್ದ ಸಾವಿರಾರು ಕಾರ್ಯಕರ್ತರು ಹಾಗೂ ಅಭಿಮಾನಿಗಳು ಚಾಮುಂಡಿಬೆಟ್ಟದ ರಸ್ತೆಯ ಇಕ್ಕೆಲಗಳಲ್ಲಿ ನಿಂತು ಗಂಟೆಗಟ್ಟಲೇ ಕಾದ ನಂತರ ಮೋದಿ ಅವರ ಕಾರು ಆ ಮಾರ್ಗವಾಗಿ ಚಲಿಸುತ್ತಿದ್ದಾಗ ಜೈಕಾರ ಕೂಗಿ ಸಂಭ್ರಮಿಸಿದರು. ಮೋದಿ ಅವರು ಬೆಟ್ಟದಿಂದ ರ್‍ಯಾಡಿಸನ್ ಬ್ಲೂ ಹೋಟೆಲ್‌ಗೆ ಹಿಂತಿರುಗುವ ವೇಳೆಯೂ ಕೂಡ ಚಾಮುಂಡಿ ಬೆಟ್ಟ ರಸ್ತೆಯಲ್ಲಿ ಜಮಾಯಿಸಿದ್ದ ಜನ ಮೋದಿ ಅವರಿಗೆ ಜೈಕಾರ ಕೂಗಿದರು.

ಮೋದಿ ಅವರ ಕಾರ್ಯಕ್ರಮಕ್ಕೂ ಮೈಸೂರು ಜಿಲ್ಲೆ ಮಾತ್ರವಲ್ಲದೇ ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಪ್ರದೇಶದಿಂದಲೂ ಜನರು ಆಗಮಿಸಿದ್ದರು. ಅವರಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಜೆ.ಕೆ.ಗ್ರೌಂಡ್, ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಸೋಮಾನಿ ಕಾಲೇಜು ಮೈದಾನ, ಹಾರ್ಡ್ವಿಕ್ ಶಾಲೆ ಮೈದಾನ, ಗಂಗೋತ್ರಿ ಮೈದಾನದಲ್ಲಿ ಬಸ್‌ಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಈ ಮೈದಾನಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರು ಮಹಾರಾಜ ಕಾಲೇಜು ಮೈದಾನಕ್ಕೆ ತಂಡೋಪತಂಡವಾಗಿ ತೆರಳುತ್ತಿದ್ದ ದೃಶ್ಯ ಕಂಡು ಬಂತು.

ಮಹಾರಾಜ ಕಾಲೇಜು ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷವರ್ಧನ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಭಾಗವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಗೈರು ಹಾಜರಿ ಎದ್ದು ಕಾಣುತ್ತಿತ್ತು.



ನ್ಯಾಯಾಲಯದ ಮುಂಭಾಗದ ಗಾಂಧಿ ಪುತ್ಥಳಿಯ ಸುತ್ತ ಬಿಜೆಪಿ ಬಂಟಿಂಗ್ಸ್.



ಕೃಷ್ಣರಾಜಬುಲೆವಾರ್ಡ್ ರಸ್ತೆಯಲ್ಲಿ ಕುಳಿತು ಎಲ್‌ಇಡಿ ಪರದೆಯಲ್ಲಿ ಪ್ರಧಾನಿ ಮೋದಿಯವರ ಕಾರ್ಯಕ್ರಮ ವೀಕ್ಷಿಸುತ್ತಿರುವ ಅಭಿಮಾನಿಗಳು.

ಪ್ರಧಾನಿಗೆ ವಿಶೇಷ ಉಡುಗೊರೆ



ಮೈಸೂರು, ಜೂ.20– ಮೈಸೂರು ಅರಮನೆ ಆವರಣದಲ್ಲಿ ಹಮ್ಮಿಕೊಂಡಿರುವ 8ನೇ ವಿಶ್ವ ಯೋಗ ದಿನಾಚರಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಭಾಗಿ ಹಿನ್ನೆಲೆಯಲ್ಲಿ ಅವರಿಗಾಗಿ ಚಿನ್ನದ ವ್ಯಾಪಾರಿ ನವರತ್ನ ಜ್ಯುವೆಲರ್ಸ್ ವತಿಯಿಂದ ಮೈಸೂರು ಅರಮನೆ, ಯೋಗಾಭ್ಯಾಸದಲ್ಲಿ ಪ್ರಧಾನಿ ಭಾವಚಿತ್ರವಿರುವ ಚಿನ್ನದ ಲೇಪದ ಉಡುಗೊರೆ ನೀಡಲು ಮುಂದಾಗಿದ್ದಾರೆ.

ಈ ಭಾವಚಿತ್ರದಲ್ಲಿ ಚಿನ್ನದ ಲೇಪಿತ ಚಿತ್ರಪಟ, ಶ್ಲೋಕವನ್ನು ಅಳವಡಿಸಲಾಗಿದೆ. ಥಾಯ್ಲೆಂಡ್‌ನಲ್ಲಿ ತಯಾರಿಸಿರುವ ಅಮೂಲ್ಯ ಉಡುಗೊರೆ ಇದಾಗಿದೆ. ಈ ಉಡುಗೊರೆಯನ್ನು ಸಂಸದ ಪ್ರತಾಪ್ ಸಿಂಹ ಮೂಲಕ ಪ್ರಧಾನಿ ಮೋದಿಗೆ ನೀಡಲು ಸಂಸದರಿಗೆ ತಲುಪಿಸಲಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಫೋಟೋ ವೈರಲ್ ಆಗಿದೆ.

ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಕುಡಿದು ಎಸೆದ ನೀರಿನ ಬಾಟಲಿಗಳನ್ನು ಯುವಕನೋರ್ವ ಸಂಗ್ರಹಿಸುತ್ತಿರುವುದು.



ಮೈಸೂರು ವಿವಿ ಬೌದ್ಧ ಅಧ್ಯಯನ ಕೇಂದ್ರಕ್ಕೆ 10 ಕೋಟಿ ಅನುದಾನಕ್ಕೆ ಪ್ರಧಾನಿಗೆ ಸಂಸದ ಶ್ರೀನಿವಾಸ ಪ್ರಸಾದ್ ಮನವಿ



ಮೈಸೂರು, ಜೂ.20– ಮೈಸೂರು ವಿಶ್ವವಿದ್ಯಾನಿಲಯದ ಬೌದ್ಧ ಅಧ್ಯಯನ ಕೇಂದ್ರಕ್ಕೆ 10 ಕೋಟಿ ರೂ. ಆರ್ಥಿಕ ನೆರವು ನೀಡುವಂತೆ ಪ್ರಧಾನಿ ಮೋದಿ ಅವರಿಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಮನವಿ ಮಾಡಿದರು.

ಮಹಾರಾಜ ಕಾಲೇಜು ಮೈದಾನದ ವೇದಿಕೆಯ ಸಭೆ ಮುಕ್ತಾಯವಾದ ಬಳಿಕ ಮೋದಿ ಅವರು ಕುಶಲೋಪರಿ ವಿಚಾರಿಸುವ ವೇಳೆ ವಿ.ಶ್ರೀನಿವಾಸ ಪ್ರಸಾದ್ ಮನವಿ ನೀಡಿ, ಬೌದ್ಧ ಅಧ್ಯಯನ ಕೇಂದ್ರದ ಅಭಿವೃದ್ಧಿಗೆ ಸಹಕಾರ ಕೋರಿದರು.

2566ನೇ ಬುದ್ಧ ಪೂರ್ಣಿಮಾ ಸಂದರ್ಭದಲ್ಲಿ ನೇಪಾಳದ ರಾಜರೊಂದಿಗೆ ಲುಂಬಿನಿಯಲ್ಲಿ ಬೌದ್ಧ ಸಂಸ್ಕೃತಿ ಮತ್ತು ಪರಂಪರೆಗಾಗಿ ಭಾರತೀಯ ಸಂಸ್ಕೃತಿ ಕೇಂದ್ರ ನಿರ್ಮಾಣ ಪ್ರಾರಂಭಿಸಿದ್ದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಾನು ಕರ್ನಾಟಕದ ಪಾರಂಪರಿಕ ನಗರ ಮೈಸೂರಿನಲ್ಲಿ ಹುಟ್ಟಿ ಬೆಳೆದಿದ್ದು, ರಾಜ್ಯದ ಅತ್ಯಂತ ಹಳೆಯ ಮತ್ತು ಹೆಸರಾಂತ ಮೈಸೂರು ವಿವಿಯ ಹಳೆಯ ವಿದ್ಯಾರ್ಥಿ.

ನಾನು ಐದು ದಶಕಗಳಿಂದ ಸಕ್ರಿಯ ಚುನಾವಣಾ ರಾಜಕೀಯದಲ್ಲಿದ್ದೇನೆ. ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ 9 ಬಾರಿ ಸ್ಪರ್ಧಿಸಿ 6 ಬಾರಿ ಆಯ್ಕೆಯಾಗಿದ್ದೇನೆ. ಅಲ್ಲದೆ ಎರಡು ಬಾರಿ ವಿಧಾನಸಭೆ ಸದಸ್ಯನಾಗಿಯೂ ಚುನಾಯಿತನಾಗಿದ್ದೇನೆ. 1999 ರಿಂದ 2004ರವರೆಗೆ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವನಾಗಿ ಸೇವೆ ಸಲ್ಲಿಸಿದ್ದು, ರಾಜ್ಯ ಸರ್ಕಾರದ ಕಂದಾಯ ಸಚಿವನಾಗಿಯೂ ಕರ್ತವ್ಯ ನಿರ್ವಹಿಸಿದ್ದೇನೆ. 2024ರ ಅಂತ್ಯದ ವೇಳೆಗೆ ನಾನು ಸಕ್ರಿಯ ಚುನಾವಣಾ ರಾಜಕೀಯದಲ್ಲಿ(1974 ರಿಂದ 2024) ಐದು ದಶಕ ಪೂರ್ಣಗೊಳಿಸಲಿದ್ದು, ನಿಸ್ಪಕ್ಷಪಾತ ಸೇವೆ ಹಾಗೂ ನನ್ನ ಮೇಲಿನ ನಂಬಿಕೆಯಿಂದ ಜನ ಆಶೀರ್ವದಿಸಿದ್ದಾರೆ.

ಮೈಸೂರು ವಿವಿ ಬೌದ್ಧ ಅಧ್ಯಯನ ಕೇಂದ್ರ ಆರಂಭಿಸಲು ಭೂಮಿ ಹಾಗೂ ಆರ್ಥಿಕ ನೆರವು ನೀಡಲು ಮುಂದೆ ಬಂದಿದೆ. ಈ ಕೇಂದ್ರದ ಪ್ರಾರಂಭದ ಮೂಲಕ ನನ್ನ ಬಹುದಿನದ ಮಹತ್ವಾಕಾಂಕ್ಷೆ ಸಾಕಾರಗೊಂಡಿದೆ. ಕೇಂದ್ರದ ಅಭಿವೃದ್ಧಿ ನಿಟ್ಟಿನಲ್ಲಿ ವಿವಿ ಉಪಕುಲ ಪತಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಿ ಉದಾರವಾಗಿ 10 ಕೋಟಿ ರೂ. ಆರ್ಥಿಕ ನೆರವು ನೀಡಬೇಕೆಂದು ಪ್ರಾಮಾಣಿಕವಾಗಿ ವಿನಂತಿಸುತ್ತೇನೆ. ನನ್ನ ವಿನಂತಿಯನ್ನು ಪರಿಗಣಿಸುತ್ತೀರೆಂದು ನಂಬಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಇಂದು ಪ್ರಧಾನಿ ಮೋದಿ ಕಾರ್ಯಕ್ರಮ

ಮೈಸೂರು, ಜೂ.20(ಎಂಕೆ)– ಪ್ರಧಾನಿ ನರೇಂದ್ರ ಮೋದಿಯವರು ನಾಳೆ(ಜೂ.21) ಬೆಳಗ್ಗೆ ಮೈಸೂರು ಅರಮನೆ ಆವರಣದಲ್ಲಿ ನಡೆಯಲಿರುವ ವಿಶ್ವ ಯೋಗ ದಿನಾಚರಣೆ ಸೇರಿದಂತೆ ಮೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಬಳಿಕ ದೆಹಲಿಗೆ ತೆರಳಲಿದ್ದಾರೆ.

ಅವರು ವಾಸ್ತವ್ಯ ಹೂಡಿರುವ ರ್‍ಯಾಡಿಸನ್ ಬ್ಲೂ ಹೋಟೆಲ್‌ನಿಂದ ಹೊರಟು ಬೆಳಿಗ್ಗೆ 6.30ಕ್ಕೆ ಮೈಸೂರು ಅರಮನೆ ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಭಾಗವಹಿಸುವರು. ನಂತರ ವಸ್ತುಪ್ರದರ್ಶನ ಪ್ರಾಧಿಕಾರದ ಮೈದಾನದಲ್ಲಿ ಏರ್ಪಡಿಸಿರುವ 'ಯೋಗ ವಸ್ತುಪ್ರದರ್ಶನ' ವೀಕ್ಷಿಸಿದ ಬಳಿಕ ಅರಮನೆಯಲ್ಲಿ ಮೈಸೂರು ರಾಜ ಮನೆತನದವರೊಂದಿಗೆ ಉಪಹಾರ ಸ್ವೀಕರಿಸಲಿದ್ದಾರೆ. ಅರಮನೆಯಿಂದ ರಸ್ತೆ ಮೂಲಕ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ ವಿಮಾನದಲ್ಲಿ ದೆಹಲಿಗೆ ಹಿಂತಿರುಗಲಿದ್ದಾರೆ.

ಚಾಮುಂಡೇಶ್ವರಿಗೆ ಸೀರೆಯನ್ನು ಕಾಣಿಕೆಯಾಗಿ ನೀಡಿದ ಪ್ರಧಾನಿ





ಮೈಸೂರು, ಜೂ.20– ನಾಡದೇವತೆ ಚಾಮುಂಡೇಶ್ವರಿ ತಾಯಿಗೆ ಪ್ರಧಾನಿ ನರೇಂದ್ರ ಮೋದಿ ರೇಷ್ಮೆ ಸೀರೆಯನ್ನು ಕಾಣಿಕೆಯಾಗಿ ನೀಡಿದ್ದಾರೆ.

ಚಾಮುಂಡಿ ಬೆಟ್ಟಕ್ಕೆ ಇಂದು ರಾತ್ರಿ ಪ್ರಧಾನಿ ಮೋದಿ ಭೇಟಿ ನೀಡಿ, ತಾಯಿಯ ದರ್ಶನ ಪಡೆದರು. ಈ ವೇಳೆ ಪ್ರಧಾನಿ ಮೋದಿ ಕಳುಹಿಸಿದ್ದ ಸೀರೆಯನ್ನು ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಅಲಂಕರಿಸಲಾಗಿತ್ತು. ಮೋದಿ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಮುನ್ನ, ದೇವಸ್ಥಾನದ ಸಿದ್ಧತೆಗಳನ್ನು ಮೈಸೂರು ಸಂಸದ ಪ್ರತಾಪ್ ಸಿಂಹ ಪರಿಶೀಲಿಸಿದ್ದರು. ಈ ವೇಳೆ ಪ್ರಧಾನಿ ಕಳುಹಿಸಿದ್ದ ಸೀರೆಯನ್ನು ಚಾಮುಂಡಿ ಬೆಟ್ಟದ ಆಡಳಿತ ಮಂಡಳಿಗೆ ಸಂಸದರು ಹಸ್ತಾಂತರಿಸಿದ್ದರು. ಬಳಿಕ ಪ್ರಧಾನಿ ಮೋದಿ ಚಾಮುಂಡಿ ದೇವಿಯ ದರ್ಶನ ಪಡೆದು ಪುನೀತರಾದರು.

ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ದರ ಖಾತರಿ ಕಾನೂನು ಜಾರಿಗೆ ಒತ್ತಾಯ

ತರಕಾರಿ ಮಾರಿ ವಿನೂತನ ಪ್ರತಿಭಟನೆ

ಮೈಸೂರು,ಜೂ.20(ಪಿಎಂ)– ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಗಾಗಿ ಕಾನೂನು ರೂಪಿಸಿ, ಜಾರಿಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಂಟಿ ಆಶ್ರಯದಲ್ಲಿ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಎದುರು ಜಮಾಯಿಸಿದ ರೈತರು, ದವಸ–ಧಾನ್ಯ ಮತ್ತು ತರಕಾರಿಗಳನ್ನು ಸ್ಥಳದಲ್ಲಿ ಎಂಎಸ್‌ಪಿ ಬೆಲೆಗಿಂತ ಕಡಿಮೆ ದರಕ್ಕೆ ಮಾರಾಟ ಮಾಡುವ ಮೂಲಕ ವಿನೂತನ ರೀತಿ ಪ್ರತಿಭಟನೆ ನಡೆಸಿದರು.

ಇಂದು ಪ್ರಧಾನಿ ನರೇಂದ್ರ ಮೋದಿಯವರ ಭೇಟಿ ಹಿನ್ನೆಲೆಯಲ್ಲಿ 'ಕರ್ಮಯೋಗಿ ರೈತನ ಕಾಯಕ ದಿನಾಚರಣೆ' ಶೀರ್ಷಿಕೆಯಡಿ ವಿಭಿನ್ನವಾಗಿ ಪ್ರತಿಭಟನೆ ನಡೆಸಿ, ಕಾನೂನಿನ ಬೆಂಬಲದ ಮೂಲಕ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯ ಬಲ ನೀಡಬೇಕೆಂದು ಪ್ರಧಾನಿಗಳನ್ನು ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಒಕ್ಕೂಟ ಮತ್ತು ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಪ್ರಧಾನಿಗಳು ಯೋಗ ದಿನ ಆಚರಿಸಲು ಮೈಸೂರಿಗೆ ಬರುತ್ತಿದ್ದಾರೆ. ನಾವು ಕರ್ಮಯೋಗಿ ರೈತನ ಕಾಯಕ ದಿನ ಆಚರಿಸುವ ಮೂಲಕ ಎಂಎಸ್‌ಪಿ ಖಾತರಿಗಾಗಿ ಕಾನೂನು ರಚಿಸಲು ಒತ್ತಾಯಿಸುತ್ತಿದ್ದೇವೆ. ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ನಿಗದಿ ಮಾಡದೇ ಕೇಂದ್ರ ಸರ್ಕಾರ ರೈತರನ್ನು ವಂಚಿಸುತ್ತಿದೆ. ಆ ಮೂಲಕ ಸರ್ಕಾರ ರೈತರ ತಲೆ ಮೇಲೆ ಕಲ್ಲು ಚಪ್ಪಡಿ ಎಳೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಂಎಸ್‌ಪಿ ಖಾತರಿಗೆ ಕಾನೂನು ಜಾರಿಯಾಗಬೇಕೆಂಬುದು ಇಡೀ ದೇಶದ ರೈತರ ಬೇಡಿಕೆ. ಈ ಹಿಂದೆ ಪ್ರಧಾನಿಗಳು 2022ಕ್ಕೆ ದೇಶದ ರೈತರ ಆದಾಯ ದ್ವಿಗುಣ ಮಾಡುತ್ತೇವೆ ಎಂದಿದ್ದರು. ಆದರೆ ಅದು ಹುಸಿಯಾಯಿತು. ಗೊಬ್ಬರ, ಬಿತ್ತನೆ ಬೀಜ ಹಾಗೂ ಕೀಟನಾಶಕದ ಬೆಲೆಗಳು ಗಗನಕ್ಕೇರಿವೆ. ಇಂಧನದ ಬೆಲೆಯೂ ದುಬಾರಿಯಾಗಿದ್ದು, ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿದೆ ಎಂದು ಕಿಡಿಕಾರಿದರು.

ಇಂದು ಮೈಸೂರಿನಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಸಮಾವೇಶಕ್ಕೆ ನಮ್ಮನ್ನೇಕೆ ಆಹ್ವಾನಿಸಿಲ್ಲ. ನಾವ್ಯಾರೂ ಫಲಾನುಭವಿಗಳಲ್ಲವೇ? ನಮ್ಮನ್ನು ಆಹ್ವಾನಿಸಿದ್ದರೆ, ಆದಾಯ ದ್ವಿಗುಣಗೊಳಿಸುವ ಭರವಸೆ ಹುಸಿಯಾಗಿರುವ ಬಗ್ಗೆ ಪ್ರಶ್ನಿಸುತ್ತಿದ್ದೆವು. ಹಾಗಾಗಿ ಅವರಿಗೆ ಬೇಕಾದವರನ್ನು ಕರೆತಂದು ಸಮಾವೇಶ ಮಾಡುತ್ತಿದ್ದಾರೆ ಎಂದು ದೂರಿದರು.

ಎಂಎಸ್‌ಪಿ ಬೆಲೆಗಿಂತ ಕಡಿಮೆ ದರಕ್ಕೆ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ದುಸ್ಥಿತಿಯಲ್ಲಿ ರೈತರಿದ್ದೇವೆ. ಪ್ರಧಾನಿ ನರೇಂದ್ರ ಮೋದಿಯವರಿಗೆ ರೈತರ ಬಗ್ಗೆ ನಿಜಕ್ಕೂ ಕಾಳಜಿ ಇದ್ದರೆ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಬೆಲೆ ಖಾತರಿಗೊಳಿಸಲು ಕಾನೂನು ರಚಿಸುವುದಾಗಿ ಇಂದೇ ಘೋಷಣೆ ಮಾಡಬೇಕು. ಅವರು ಘೋಷಣೆ ಮಾಡದಿದ್ದರೆ, ಮುಂದಿನ ಚುನಾವಣೆಯಲ್ಲಿ ದೇಶದ ರೈತರು ಇವರಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಅಧಿಕಾರಕ್ಕೆ ಬರುವ ಮೊದಲು ಡಾ.ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿ ಮಾಡುವುದಾಗಿ ಮೋದಿಯವರು ನೀಡಿದ್ದ ಭರವಸೆಯೂ ಹುಸಿಯಾಗಿದೆ. ಬ್ಯಾಂಕುಗಳಲ್ಲಿ ರೈತರಿಗೆ ಸಾಲ ದೊರೆಯುತ್ತಿಲ್ಲ. ಕೃಷಿ ಸಾಲ ನೀಡಲು ಬ್ಯಾಂಕುಗಳು ರೈತರ ಸಿಬಿಲ್ ಸ್ಕೋರ್ (ಸಾಲ ಮರುಪಾವತಿ ಮಾಡಿರುವ ವರದಿ) ಕೇಳುತ್ತಿವೆ. ಅತಿವೃಷ್ಟಿ–ಅನಾವೃಷ್ಟಿಯಿಂದ ಬೆಳೆ ಹಾನಿಯಾದ ರೈತರು ಸಕಾಲಕ್ಕೆ ಸಾಲ ಪಾವತಿಸಲು ಹೇಗೆ ಸಾಧ್ಯ ಎನ್ನುವುದನ್ನು ಅರಿಯದೇ ರೈತರಿಗೆ ಮಾರಕವಾಗುವ ನೀತಿಗಳನ್ನು ಅನುಸರಿಸಲಾಗುತ್ತಿದೆ. ದೇಶ ಬಿಟ್ಟು ಓಡಿ ಹೋಗುವ ಬಂಡವಾಳಶಾಹಿಗಳಿಗೆ ಲಕ್ಷಾಂತರ ಕೋಟಿ ಸಾಲ ನೀಡುವ ಬ್ಯಾಂಕುಗಳು, ರೈತರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ಮುಖಂಡರಾದ ಅತ್ತಳ್ಳಿ ದೇವರಾಜ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಪಿ.ಸೋಮಶೇಖರ್, ಕಿರಗಸೂರು ಶಂಕರ್, ಬರಡನಪುರ ನಾಗರಾಜ್, ಕುರುಬೂರು ಸಿದ್ದೇಶ್, ಲಕ್ಷ್ಮೀಪುರ ವೆಂಕಟೇಶ್, ಕೆಂಡಗಣ್ಣಸ್ವಾಮಿ, ಮಾದಪ್ಪ, ಕೆರೆಹುಂಡಿ ರಾಜಣ್ಣ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಬಿಜೆಪಿ ಬಂಟಿಂಗ್ಸ್‌ಗೆ ರೈತರ ಬೇಸರ

ಪ್ರಧಾನಿಗಳ ಭೇಟಿ ಹಿನ್ನೆಲೆಯಲ್ಲಿ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ವೃತ್ತಕ್ಕೆ ಬಿಜೆಪಿ ಬಂಟಿಂಗ್ಸ್ ಅಳವಡಿಸಿರುವ ಬಗ್ಗೆ ರೈತರು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆ ನಡೆಸಲು ಸ್ಥಳಕ್ಕೆ ಬಂದ ರೈತರು, ವೃತ್ತದ ತುಂಬೆಲ್ಲಾ ಬಿಜೆಪಿ ಬಂಟಿಂಗ್ಸ್ ಕಂಡು ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಹಸಿರು ಟವಲ್‌ಗಳಿಂದ ಬಿಜೆಪಿ ಬಂಟಿಂಗ್ಸ್ ಮರೆಮಾಡಿ ಪ್ರತಿಭಟನೆ ನಡೆಸಿದರು.

ಪ್ರಧಾನಿಗಳ ಮೈಸೂರು ಭೇಟಿಗೆ ಸುಮಾರು 12 ಕೋಟಿ ರೂ. ವೆಚ್ಚವಾಗಲಿದೆ ಎಂಬುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಪ್ರಧಾನಿಯವರ ಕೇವಲ ಎರಡು ದಿನದ ಭೇಟಿಗೆ ಇಷ್ಟು ದುಬಾರಿ ವೆಚ್ಚ ಮಾಡುವ ದೇಶದಲ್ಲಿ ರೈತರಿಗಾಗಿ ಎಂಎಸ್‌ಪಿ ಬೆಲೆ ಖಾತರಿ ಕಾನೂನು ಮಾಡುತ್ತಿಲ್ಲವೆಂದರೆ ಇದು ದುರ್ದೈವ.
-ಕುರುಬೂರು ಶಾಂತಕುಮಾರ್

ಮೈಸೂರು ಮಿತ್ರ ಮಂಗಳವಾರ 21 ಜೂನ್ 2022

ಕೋಟೆಯಲ್ಲಿ ಡಿಪ್ಲೊಮಾ ಕಾಲೇಜು ತೆರೆಯಲು ಯತ್ನ

ಐಟಿಐ ಕಾಲೇಜು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ

ಹೆಚ್.ಡಿ.ಕೋಟೆ, ಜೂ.20(ಮಂಜು)– ತಾಲೂಕಿನಲ್ಲಿ ನೂತನ ಡಿಪ್ಲೊಮಾ ಕಾಲೇಜು ತೆರೆಯಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದಲ್ಲಿ ಸೋಮವಾರ 33ಕೋಟಿ ರೂ. ವೆಚ್ಚದಡಿ ತಾಂತ್ರಿಕ ಕೇಂದ್ರವನ್ನಾಗಿ ಉನ್ನತೀಕರಿಸಲಾಗಿರುವ ಐಟಿಐ ಕಾಲೇಜು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹೊಸ ಕೋರ್ಸ್‌ಗಳನ್ನು ತೆರೆದು ನಿರುದ್ಯೋಗ ಸಮಸ್ಯೆ ನಿವಾರಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು ಎಂದರು.

2003ರಲ್ಲಿ ಮೊದಲಿಗೆ 5 ವೃತ್ತಿಗಳಲ್ಲಿ ಪ್ರಾರಂಭವಾದ ಪಟ್ಟಣದ ಐಟಿಐ ಕಾಲೇಜು ನಂತರ 2017ರಲ್ಲಿ ಮತ್ತೊಂದು ವೃತ್ತಿಯೊಂದಿಗೆ 136 ತರಬೇತಿದಾರರಿಗೆ ಪ್ರವೇಶ ಕಲ್ಪಿಸಿ 2 ಪಾಳಿಯಲ್ಲಿ ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಹಾಗೂ ಟಾಟಾ ಕಂಪನಿ ಸಹಭಾಗಿತ್ವದಲ್ಲಿ ಐಟಿಐ ಕಾಲೇಜನ್ನು



33ಕೋಟಿ ವೆಚ್ಚದಡಿ ಅತ್ಯಾಧುನಿಕ ಯಂತ್ರೋಪಕರಣಗಳೊಂದಿಗೆ, ಆಧುನಿಕ ಕೈಗಾರಿಕೆಗಳೊಂದಿಗೆ ಹೊಂದಿಕೊಳ್ಳುವಂತೆ ಉನ್ನತೀಕರಿಸಲಾಗಿದೆ. ಇದರಲ್ಲಿ ರೋಬೋಟಿಕ್, ಕಂಪ್ಯೂಟರ್, ಸಿಎನ್‌ಸಿ, ವಿಎಂಸಿ, ಲೇಸರ್ ಕಟಿಂಗ್, ಅಡ್ವಾನ್ಸ್ ಪ್ಲಂಬಿಂಗ್, 3ಡಿ ಮಾಡಲಿಂಗ್, ವರ್ಚುಯಲ್ ಪೇಟಿಂಗ್, ವರ್ಚುಯಲ್ ವೆಲ್ಡಿಂಗ್, ಅಡ್ವಾನ್ಸ್ ಆಟೋ ಮೊಬೈಲ್ ಯಂತ್ರಗಳಿದ್ದು ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಆಧುನಿಕ ತಂತ್ರಜ್ಞಾನ ಉನ್ನತೀಕರಿಸಿರುವುದರಿಂದ ಮುಂದಿನ ವರ್ಷದಲ್ಲಿ ಹೆಚ್ಚುವರಿಯಾಗಿ 100 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಅನುಕೂಲವಾಗಿದೆ. ಟಾಟಾ ಕಂಪನಿ ಅವರು ಇತರ 20 ಕಂಪನಿಗಳೊಂದಿಗೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡಿದ್ದು, ತರಬೇತಿಯಲ್ಲಿ ಉತ್ತೀರ್ಣ ಹೊಂದಿದವರಿಗೆ ಉದ್ಯೋಗ ನೀಡಲು ಸಹಮತ ನೀಡಿದ್ದಾರೆ ಎಂದು ಮಾಹಿತಿ ನೀಡಿದರು. ಐಟಿಐ ತರಬೇತಿದಾರರು ಅರೆ ಕೌಶಲ್ಯದಾರರಾಗಿರುವುದರಿಂದ ಕೈಗಾರಿಕೆಗಳಿಗೆ ಬೆನ್ನೆಲುಬಾಗಿರುತ್ತಾರೆ. ಇವರ ಸೇವೆ ದೇಶದ ಆರ್ಥಿಕ ಪ್ರಗತಿಗೆ ಕೊಡುಗೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಯಾವುದೇ ದೇಶ ಪ್ರಗತಿ ಕಾಣಬೇಕಾದರೆ ಐಟಿಐ ತರಬೇತಿದಾರರ ಸೇವೆ ಅತ್ಯಮೂಲ್ಯ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಶಾಂತಮ್ಮ, ಗ್ರಾಮ ಪಂಚಾಯಿತಿ ಸದಸ್ಯ ಸ್ವಾಮಿ, ಮಾಜಿ ಸದಸ್ಯ ಸೋಮು, ಮುಖಂಡರಾದ ಹೋಂಡಾ ನಯಾಸ್, ಪರಶಿವಮೂರ್ತಿ, ಇಂಜಿನಿಯರ್ ಸುಪ್ರೀತ್, ವಿನೋದ್, ಗಣೇಶ್ ಆಚಾರ್, ಪ್ರಾಂಶುಪಾಲ ಶ್ರೀನಿವಾಸ್, ಲೋಕೇಶ್, ನಾಗರಾಜು, ಸರಳಾ, ಶಿವಕುಮಾರ್, ಕುಮಾರ್, ಪುಣ್ಯಶ್ರೀ, ರಾಜುಗೌಡ, ಗುರು, ಪ್ರಸನ್ನ, ಪ್ರಸಾದ್, ಹರಿಪ್ರಸಾದ್, ರವಿಪ್ರಸಾದ್ ಹಾಜರಿದ್ದರು.

> ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಲು ಕೌಶಲ್ಯ ತರಬೇತಿಗೆ ಹೆಚ್ಚು ಒತ್ತು ನೀಡಬೇಕು. ತಾಲೂಕಿನಾದ್ಯಂತ ಟೈಲರಿಂಗ್ ತರಬೇತಿ ಹೊಂದಿರುವ ಮಹಿಳೆಯರಿಗೆ ಗಾರ್ಮೆಂಟ್ಸ್ ತೆರೆಯಲು ತಾಲೂಕಿನಲ್ಲಿ ಜಾಗ ನಿಗದಿ ಮಾಡಲಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಕಾರ್ಯಾರಂಭ ಮಾಡಲಾಗುವುದು.
> – ಅನಿಲ್‌ಚಿಕ್ಕಮಾದು, ಶಾಸಕರು.

ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟಕ್ಕೆ ಸೋಮಣ್ಣ ಅಧ್ಯಕ್ಷ



ತಿ.ನರಸೀಪುರ, ಜೂ.20(ಎಸ್‌ಕೆ)– ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ತಾಲೂಕು ಅಧ್ಯಕ್ಷರಾಗಿ ಹೆಮ್ಮಿಗೆ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿ ಸೋಮಣ್ಣ ಆಯ್ಕೆಯಾಗಿದ್ದಾರೆ.

ಪಟ್ಟಣದ ಕುನಿ ಅತಿಥಿ ಗೃಹದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಸೋಮಣ್ಣ ಅವರಿಗೆ ನೇಮಕಾತಿ ಆದೇಶ ಪತ್ರ ನೀಡಿ ಶುಭ ಕೋರಿದರು. ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, ನಾಯಕ ಸಮಾಜದ ಕಟ್ಟಕಡೆ ವ್ಯಕ್ತಿಗೂ ಸಾಮಾಜಿಕ ನ್ಯಾಯ ದೊರಕಿಸಿ ಕೊಡುವ ನಿಟ್ಟಿನಲ್ಲಿ ನೂತನ ಅಧ್ಯಕ್ಷರು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಹಾಗೂ ಸಮಾಜದ ಸಂಘಟನೆಗೆ ಹೆಚ್ಚಿನ ಒತ್ತು ನೀಡಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ಸೋಮಣ್ಣ ಮಾತನಾಡಿ, ನನ್ನ ಮೇಲೆ ವಿಶ್ವಾಸವಿಟ್ಟು ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ. ತಾಲೂಕಿನಾದ್ಯಂತ ಪ್ರವಾಸ ಮಾಡಿ ಸಮಾಜದ ಸಂಘಟನೆಗೆ ಆದ್ಯತೆ ನೀಡುವ ಜೊತೆಗೆ, ಶೈಕ್ಷಣಿಕವಾಗಿ ಹಿಂದುಳಿದಿರುವ ಸಮಾಜದ ವಿದ್ಯಾರ್ಥಿಗಳಿಗೆ ಸಂಘದಿಂದ ಕೈಲಾದ ಸಹಾಯ ಮಾಡಿ ಶೈಕ್ಷಣಿಕ ಮಟ್ಟ ಸುಧಾರಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತೇನೆ. ಸರ್ಕಾರದಿಂದ ಸಮುದಾಯದವರಿಗೆ ಸಿಗಬಹುದಾದ ಸೌಲಭ್ಯ ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಇದೇ ವೇಳೆ ಈ ಹಿಂದೆ ತಾಲೂಕು ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದ ಕೃಷ್ಣಮೂರ್ತಿ ಅವರನ್ನು ಜಿಲ್ಲಾ ಮಟ್ಟದ ಪದಾಧಿಕಾರಿಯಾಗಿ ನೇಮಕ ಮಾಡಿ ಆದೇಶ ಪತ್ರ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ್, ಗ್ರಾಪಂ ಮಾಜಿ ಸದಸ್ಯ ಸೋಮಶೇಖರ್, ಮಂಜುನಾಥ ಪ್ರಸಾದ್, ಶಿವಶಂಕರಮೂರ್ತಿ, ಮರಡೀಪುರ ನಾಗರಾಜು, ಹರೀಶ್, ಶಿಕ್ಷಕ ಬೆಟ್ಟಪ್ಪ, ಕಲಿಯೂರು ಜಯಶೇಖರ್, ರಾಜಣ್ಣ, ಮಾದೇಶ್, ಎಪಿಎಂಸಿ ಮಾಜಿ ಸದಸ್ಯ ಶಂಕರ್ ನಾಯಕ್, ಹೆಚ್.ಸಿ.ರಾಜೇಶ್ ಹಾಜರಿದ್ದರು.

ಹೈನುಗಾರಿಕೆಗೆ ಆದ್ಯತೆ ನೀಡಲು ಸಲಹೆ



ಪಿರಿಯಾಪಟ್ಟಣ, ಜೂ.20(ವೀರೇಶ್)– ರೈತರು ಕೃಷಿಯೊಂದಿಗೆ ಹೈನುಗಾರಿಕೆಗೂ ಒತ್ತು ನೀಡುವ ಮೂಲಕ ಆರ್ಥಿಕವಾಗಿ ಸದೃಢರಾಗಬೇಕು ಎಂದು ಬಿಲ್ಲಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷ ಬಿಲ್ಲಹಳ್ಳಿ ಬಸವರಾಜಪ್ಪ ಸಲಹೆ ನೀಡಿದರು.

ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರ ಹಾಗೂ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ತಾಲೂಕಿನಲ್ಲಿ ಈಗಾಗಲೇ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಬಿಜೆಪಿಯಿಂದ ಇಬ್ಬರು ಪದಾಧಿಕಾರಿಗಳು ಆಯ್ಕೆಯಾಗಿರುವುದು ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಪಕ್ಷ ತನ್ನ ರಾಜಕೀಯ ದಿಕ್ಕನ್ನು ಬದಲಿಸುವ ಸೂಚನೆಯಾಗಿದೆ ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಪ್ರಧಾನ ಕಾರ್ಯದರ್ಶಿ ಚಂದ್ರು ಬೆಮ್ಮತ್ತಿ, ವೀರಭದ್ರ, ಕಾರ್ಯದರ್ಶಿ ಎಂ.ಪಿ.ರಾಜು, ರೈತ ಮೋರ್ಚಾ ಅಧ್ಯಕ್ಷ ಬೆಕ್ಕರೆ ಮಹದೇವ್, ರಾವಂದೂರು ಮಹಾಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ಪ್ರವೀಣ್, ಮುಖಂಡರಾದ ಬಿ.ಬಿ.ಕಾಂತರಾಜು, ಬಿ.ಪಿ.ಮಹದೇವ್, ಬಸಪ್ಪಾಜಿ, ಬಿ.ಆರ್.ಹರೀಶ್, ಬಿ.ಎಸ್.ಅಶೋಕ, ಪ್ರಭುಸ್ವಾಮಿ, ಬಿ.ಆರ್.ಸುರೇಶ, ಬಿ.ಕೆ.ನಟರಾಜ್ ಇದ್ದರು.

ಎಲ್‌ಐಸಿ ಪ್ರತಿನಿಧಿಗಳ ಸಂಘದ ಪದಾಧಿಕಾರಿಗಳ ಆಯ್ಕೆ



ತಿ.ನರಸೀಪುರ, ಜೂ20(ಎಸ್‌ಕೆ)– ಕೊಳ್ಳೇಗಾಲ ಮುಖ್ಯ ಶಾಖೆ ಸೇರಿದಂತೆ ತಿ.ನರಸೀಪುರದ ಉಪಗ್ರಹಾಧಾರಿತ ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಸಂಘದ ಪದಾಧಿಕಾರಿಗಳ ಆಯ್ಕೆ ನಡೆಯಿತು. 2022–23ರಿಂದ 24, 25ನೇ ಸಾಲಿನ ಅವಧಿವರೆಗೆ ನೂತನ ಅಧ್ಯಕ್ಷರಾಗಿ ಎಂ.ರಾಜು, ಪ್ರಧಾನ ಕಾರ್ಯದರ್ಶಿಯಾಗಿ ಬಿ.ಪಶುಪತಿ, ಖಜಾಂಚಿಯಾಗಿ ಆರ್.ಶಾಂತಕುಮಾರ್ ಆಯ್ಕೆಯಾಗಿದ್ದರು.

ಉಳಿದಂತೆ ಟಿ.ಸಿ.ಮಾದೇಗೌಡ(ಗೌರವಾಧ್ಯಕ್ಷರು), ಕೆ.ಪ್ರಕಾಶ್, ಬಿ.ನಾಗೇಶ್(ಉಪಾಧ್ಯಕ್ಷರು), ನಂಜುಂಡಸ್ವಾಮಿ, ಶ್ರೀನಿವಾಸ್ (ಸಂಘಟನಾ ಕಾರ್ಯದರ್ಶಿ), ರಾಜಣ್ಣ, ಎಂ.ಎಸ್.ಮಹದೇವಯ್ಯ (ಸಹ ಕಾರ್ಯದರ್ಶಿ), ಚಂದ್ರಶೇಖರ್ (ಖಾಯಂ ಆಹ್ವಾನಿತರು), ನಿರ್ದೇಶಕರಾಗಿ ಸೀಗನಾಯಕ, ಮಲ್ಲುಸ್ವಾಮಿ, ಹೆಚ್.ರಾಜಣ್ಣ, ನಿಂಗೇಗೌಡ, ಶಿವಣ್ಣ, ಜಯಸ್ವಾಮಿ, ಶಶಿಕಲಾ, ಕಿಟ್ಟಿ, ವನಜಾಕ್ಷಿ, ಸುನಿತಾ, ಸಿದ್ದಪ್ಪಸ್ವಾಮಿ, ಸೋಮಣ್ಣ, ಶಿವಕುಮಾರ್, ಡಿ.ಮಲ್ಲೇಶ್, ಶಂಕರೇಗೌಡ, ಅನಿಲ್ ಕುಮಾರ್, ಜಯಶೀಲ, ಮಾದೇಶ್ವರಿ, ಲಕ್ಷ್ಮೀಬಾಯಿ, ನಟರಾಜು, ಲೋಕೇಶ್, ಬಾಲಚಂದ್ರ, ಶಾಗ್ಯ ನಾಗರಾಜು ನೇಮಕಗೊಂಡಿದ್ದಾರೆ.

ಕೆಪಿಎಸ್ ಕಟ್ಟಡ ಕಾಮಗಾರಿಗೆ ಭೂಮಿಪೂಜೆ

ಹುಣಸೂರು, ಜೂ.20(ಕೆಕೆ)– ಗಾವಡಗೆರೆ ಕರ್ನಾಟಕ ಪಬ್ಲಿಕ್ ಶಾಲೆ(ಕೆಪಿಎಸ್) ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಭೂಮಿ ಪೂಜೆ ನೆರವೇರಿಸಿದರು.

ಲೋಕೋಪಯೋಗಿ ಇಲಾಖೆಯಿಂದ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ವಿಭಾಗಕ್ಕೆ ನೆಲ ಅಂತಸ್ತು ನಾಲ್ಕು ಕೊಠಡಿ, ಮೇಲಂತಸ್ತು ಮೂರು ಕೊಠಡಿ, ಪ್ರಾಥಮಿಕ ಶಾಲೆಗೆ ನೆಲ ಅಂತಸ್ತು 4 ಕೊಠಡಿಗಳು ಹಾಗೂ ಶೌಚಾಲಯ ಒಳಗೊಂಡಂತೆ ಅಂದಾಜು 2 ಕೋಟಿ ರೂ. ವೆಚ್ಚದಡಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಶಾಲೆಯು ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾಗಿದ್ದು, ಈ ಶಾಲೆಯನ್ನು ನಾನು ದತ್ತು ಪಡೆದಿದ್ದೇನೆ. ಶಾಲೆಗೆ ಎಲ್ಲಾ ಸೌಕರ್ಯ ಒದಗಿಸಲು ಬದ್ಧನಾಗಿದ್ದೇನೆ ಎಂದರು.

ಶಾಲೆಯಲ್ಲಿ ಉತ್ತಮ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಇದ್ದಾರೆ. ಇಲ್ಲಿಯವರೆಗೆ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿದ್ದೀರಿ. ಮುಂದೆಯೂ ಉತ್ತಮ ಫಲಿತಾಂಶದೊಂದಿಗೆ ಶಾಲೆಗೆ ಉತ್ತಮ ಹೆಸರು ತಂದುಕೊಡಬೇಕು. ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ಅನುವು ಮಾಡಿಕೊಡಬೇಕೆಂದು ಸ್ಥಳದಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆ ಎಇಓ ಬೋಜರಾಜ್ ಅವರಿಗೆ ಸೂಚನೆ ನೀಡಿದರು.



ಸಮಾರಂಭದಲ್ಲಿ ಜಿಪಂ ಮಾಜಿ ಸದಸ್ಯ ದೇವರಾಜು, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಶಿವಪ್ರಸಾದ್, ಗ್ರಾಪಂ ಅಧ್ಯಕ್ಷೆ ಶೀಲಾವತಿ, ಮಾಜಿ ಅಧ್ಯಕ್ಷೆ ಮಧುಮತಿಬಾಯಿ, ಕಾಲೇಜಿನ ಪ್ರಾಂಶುಪಾಲ ಜನಾರ್ಧನ, ಉಪಪ್ರಾಂಶು ಪಾಲ ಚಿನ್ನೇಗೌಡ, ಮುಖ್ಯ ಶಿಕ್ಷಕ ರಾಜು, ಮುಖಂಡರಾದ ಲೋಕನಾಥ್‌ರಾವ್, ಪ್ರಸಾದ ಸೇರಿದಂತೆ ಇತರರು ಹಾಜರಿದ್ದರು.

ಕೆ. ಅಮೃತ ಅತ್ಯುನ್ನತ ಶ್ರೇಣಿ



ಬೈಲುಕುಪ್ಪೆ, ಜೂ.20(ರಾಜೇಶ್)– ಈ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ನಳಂದ ಶಾಲೆಯ ವಿಜ್ಞಾನ ವಿಭಾಗದಲ್ಲಿ ಬೈಲುಕುಪ್ಪೆ ವಿದ್ಯಾರ್ಥಿನಿ ಕೆ.ಅಮೃತ ಶೇ. 87ರಷ್ಟು (600/526) ಫಲಿತಾಂಶದೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಬೈಲುಕುಪ್ಪೆಯ ಕೇಶವಮೂರ್ತಿ ಮತ್ತು ಪೂರ್ಣಿಮಾ ದಂಪತಿ ಪುತ್ರಿ.

ಸ್ವಚ್ಛತಾ ಅಭಿಯಾನಕ್ಕೆ ಚಾಲನೆ



ನಂಜನಗೂಡು, ಜೂ.20(ಸುದರ್ಶನ)– ನಗರದಲ್ಲಿ ಸೋಮವಾರ ಸಮೃದ್ಧಿ ಗೆಳೆಯರ ಬಳಗದಿಂದ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಜೂ. 21ರಂದು ಪ್ರಧಾನಿ ನರೇಂದ್ರ ಮೋದಿ ಅವರು ಯೋಗದಿನ ಆಚರಣೆಗೆ ಮೈಸೂರಿಗೆ ಆಗಮಿಸಿದ್ದಾರೆ. ಅವರಿಗೆ ಗೌರವ ಸಲ್ಲಿಸಬೇಕು ಎಂಬ ಭಾವನೆಯಿಂದ ಸಮೃದ್ಧಿ ಗೆಳೆಯರ ಬಳಗದ ವತಿಯಿಂದ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡಿದ್ದೇವೆ ಎಂದು ಬಳಗದವರು ತಿಳಿಸಿದರು. ಈ ಸಂದರ್ಭದಲ್ಲಿ ವೀರಶೈವ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ ಸೇರಿದಂತೆ ಪ್ರಮುಖರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಲೈಟ್‌ಇಯರ್ (3ಡಿ)(ಇಂ): ಬೆ.10.05ಕ್ಕೆ, ಮ.1.05ಕ್ಕೆ, ಜುರಾಸಿಕ್ ವರ್ಲ್ಡ್(3ಡಿ)(ಇಂ): ಸಂ.4.05ಕ್ಕೆ, 777 ಚಾರ್ಲಿ (ಕ): ರಾ.7ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಮೇಡ್ ಇನ್ ಚೈನಾ (ಕ): ಬೆ10.40ಕ್ಕೆ, ವಿಕ್ರಂ (ತ): ಮ12.50ಕ್ಕೆ, ವಿರಾಟ ಪರ್ವಂ (ತೆ): ಸಂ.4.10ಕ್ಕೆ, ರಾ.7.05ಕ್ಕೆ, ಗೋಡ್ಸೆ (ತೆ): ರಾ.10ಕ್ಕೆ.
ಸ್ಕ್ರೀನ್ 3	ಖಡಕ್ (ಕ): ಬೆ.10.25ಕ್ಕೆ, ವೀಟ್ಲ್‌ವಿಶೇಷಂ (ತ): ಮ.1.05ಕ್ಕೆ, ನಿಕಮ್ಮ (ಹಿಂ): ಮ.3.55ಕ್ಕೆ, ರಾ.10.10ಕ್ಕೆ, ವಿಕ್ರಂ (ತ): ಸಂ.6.50ಕ್ಕೆ.
ಸ್ಕ್ರೀನ್ 4	777 ಚಾರ್ಲಿ (ಕ): ಬೆ.9.55ಕ್ಕೆ, ಮ1.05ಕ್ಕೆ, ಸಂ.4.15ಕ್ಕೆ, ರಾ.10ಕ್ಕೆ, ವಾಶಿ (ಮ): ರಾ.7.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿರಾಟಪರ್ವಂ (ತೆ): ಬೆ.9.45ಕ್ಕೆ, ರಾ.7.25ಕ್ಕೆ, 777 ಚಾರ್ಲಿ (ಕ): ಮ.12.45ಕ್ಕೆ, ಸಂ.4.05ಕ್ಕೆ, ಜುರಾಸಿಕ್ ವರ್ಲ್ಡ್ (3ಡಿ)(ಇಂ): ಬೆ.10.30ಕ್ಕೆ.
ಸ್ಕ್ರೀನ್ 2	777 ಚಾರ್ಲಿ (ಕ): ಬೆ.11ಕ್ಕೆ, ಮ.2.25ಕ್ಕೆ, ಸಂ.5.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	777 ಚಾರ್ಲಿ (ಕ): ಬೆ.10ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ವಾಶಿ (ಮ): ಮ.1.20ಕ್ಕೆ, ವೀಟ್ಲ ವಿಶೇಷಂ (ತ): ಸಂ.4.05ಕ್ಕೆ.
ಸ್ಕ್ರೀನ್ 4	ನಿಕಮ್ಮ (ಹಿಂ): ಬೆ.10.25ಕ್ಕೆ, ಸಂ.6.40ಕ್ಕೆ, ಖಡಕ್ (ಕ): ಮ.1.30ಕ್ಕೆ, ಮೇಡ್ ಇನ್ ಚೈನಾ (ಕ): ಸಂ.4.20ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಚಾರ್ಲಿ–777 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಚಾರ್ಲಿ–777 (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವಿರಾಟ ಪರ್ವಂ (ತೆ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಖಡಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾನ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಜುರಾಸಿಕ್ ಪಾರ್ಕ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು



ಟಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಹಿರಿಯ ರಾಜಕಾರಣಿ ದಿವಂಗತ ರಾಚೇಗೌಡ ಅವರ ಪುತ್ರ ಶಿವಮೂರ್ತಿ ಅವರ ಮನೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು.

ಕಾನೂನು ಸಲಹೆ, ಶೈಕ್ಷಣಿಕ ಮಾರ್ಗದರ್ಶನ ಕಾರ್ಯಕ್ರಮ



ಸಾಲಿಗ್ರಾಮ, ಜೂ.20(ಜ್ಯೋತಿ)– ಇಲ್ಲಿನ ಶ್ರೀಯೋಗಾನರಸಿಂಹಸ್ವಾಮಿ ವಿದ್ಯಾಸಂಸ್ಥೆ ಸಭಾಂಗಣದಲ್ಲಿ ನಡೆದ ಕಾನೂನು ಸಲಹೆ ಮತ್ತು ಶೈಕ್ಷಣಿಕ ಮಾರ್ಗದರ್ಶನ ಕಾರ್ಯಕ್ರಮವನ್ನು ಡಿವೈಎಸ್‌ಪಿ ಎಂ.ಎಂ.ಯೋಗೇಂದ್ರನಾಥ್ ಉದ್ಘಾಟಿಸಿದರು.

ಬಳಿಕ, ಮಾತನಾಡಿದ ಅವರು, ಇಂದಿನ ಮಕ್ಕಳು ಮುಂದಿನ ಉತ್ತಮ ಪ್ರಜೆಗಳು ಎನ್ನುವ ಹಾಗೆ ಮಕ್ಕಳು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಉತ್ತಮ ನಡತೆಯಿಂದ ಮಾತೃ ದೇವೋಭವ, ಪಿತೃ ದೇವೋಭವ ಆಚಾರ್ಯ ದೇವೋಭವ ಎಂಬಂತೆ ಗುರು ಹಿರಿಯರನ್ನು ಗೌರವಿಸುತ್ತಾ ಮುನ್ನಡೆಯಬೇಕು ಎಂದು ಹೇಳಿದರು.

ಮೈಸೂರಿನ ಎಸ್‌ಐ ಮನೋಜ್‌ಕುಮಾರ್, ದಫೇದಾರ್ ಸಂದೀಪ್‌ಗೌಡ, ಸಾಲಿಗ್ರಾಮ ಎಸ್‌ಐ ಶ್ರೀಕಾಂತ್, ಮಂಜುನಾಥ್, ಕಸಾಪ ತಾಲೂಕು ಅಧ್ಯಕ್ಷ ಮಧುಚಂದ್ರ, ಆಡಳಿತ ಮಂಡಳಿ ಉಪಾಧ್ಯಕ್ಷ ಪ್ರೇಮ್‌ಕುಮಾರ್ ಜೈನ್, ಕಾರ್ಯದರ್ಶಿ ಭಾಸ್ಕರ್, ನಿರ್ದೇಶಕ ರಾದ ಜ್ಯೋತಿ ಜಯಸೇನ, ಗುಣಚಂದ್ರ, ಶಿಕ್ಷಕರು, ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಿ.ಎಂ.ಸಾನಿಯಾಗೆ ಅತ್ಯುನ್ನತ ಶ್ರೇಣಿ



ಬೈಲುಕುಪ್ಪೆ ಜೂ. 20 (ರಾಜೇಶ್)– ಐಶ್ವರ್ಯ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿನಿ ಬಿ.ಎಂ. ಸಾನಿಯಾ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 569 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯ ತಾಪಂ ಮಾಜಿ ಸದಸ್ಯ ಮಾನು, ಅಂಗನವಾಡಿ ಶಿಕ್ಷಕಿ ನವೀದ ಬಾನು ಅವರ ಪುತ್ರಿ.


ರಾಜ್ಯ ನಾಯಕನಾಗುವ ಅರ್ಹತೆ ಸಾ.ರಾ.ಮಹೇಶ್‌ಗಿದೆ: ಹೆಚ್‌ಡಿಕೆ

ಭೇರ್ಯ, ಜೂ.20(ಮಹೇಶ್)– ರಾಜ್ಯದ ನಾಯಕನಾಗುವ ಎಲ್ಲಾ ಅರ್ಹತೆಗಳು ಶಾಸಕ ಸಾ.ರಾ. ಮಹೇಶ್‌ಗೆ ಇವೆ. ಆದ್ದರಿಂದ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷ ಕಟ್ಟಲು ಅವರಿಗೆ ತಾಲೂಕಿನ ಜನತೆ ಶಕ್ತಿ ತುಂಬಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಸಮೀಪದ ಸಾಲಿಗ್ರಾಮ ತಾಲೂಕಿನ ಗುಳುವಿನ ಅತ್ತಿಗುಪ್ಪೆ ಗ್ರಾಮದಲ್ಲಿ ಶ್ರೀಅಂಕನಾಥೇಶ್ವರ(ಈಶ್ವರ) ಮತ್ತು ಶ್ರೀಬಸವೇಶ್ವರಸ್ವಾಮಿ ನೂತನ ದೇವಸ್ಥಾನ ಪ್ರವೇಶ, ಪುನರ್ ಪ್ರತಿಷ್ಠಾಪನೆ ಹಾಗೂ 35ಲಕ್ಷ ರೂ. ವೆಚ್ಚದಡಿ ನಿರ್ಮಿಸಿರುವ ಪಶುವೈದ್ಯ ಆಸ್ಪತ್ರೆ ಉದ್ಘಾಟಿಸಿ ಅವರು ಮಾತನಾಡಿದರು.

ಮೈಸೂರು ಜಿಲ್ಲೆಯ 11 ಕ್ಷೇತ್ರಗಳ ಪೈಕಿ 7ರಿಂದ 8 ಸ್ಥಾನ ಗೆಲ್ಲಬೇಕಿದ್ದು, ಸಾ.ರಾ.ಮಹೇಶ್ ಈ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಲ್ಲಿ ಪಕ್ಷ ಕಟ್ಟುವ ಕಾರ್ಯ ಮಾಡಬೇಕಿದೆ. ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಜನತೆಗೆ ತಿಳಿದಿದ್ದು, ನೀವೇ ಅವರಿಗೆ ಧೈರ್ಯ ತುಂಬಿ ಕಳುಹಿಸಿ ಎಂದು ಮನವಿ ಮಾಡಿದರು.

ಮಧ್ಯಮ ವರ್ಗದವರು ಹಾಗೂ ಬಡವರಿಗೆ ಕಿಡ್ನಿ ವೈಫಲ್ಯ, ಕ್ಯಾನ್ಸರ್‌ನಂತಹ ಮಾರಕ ಖಾಯಿಲೆ ಬಂದರೆ ಯಾವುದೇ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ದೊರೆಯುತ್ತಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ 20ರಿಂದ 25ಲಕ್ಷ ರೂ. ಖರ್ಚು ಮಾಡಬೇಕಿದೆ. ಬಡವರು ಎಲ್ಲಿಂದ ತರಬೇಕು ಎಂದ ಅವರು, ಪ್ರತಿ ಗ್ರಾಪಂ ಕೇಂದ್ರದಲ್ಲಿ ನಾಲ್ವರು ನುರಿತ ವೈದ್ಯರ ನೇಮಕ, 30 ಹಾಸಿಗೆಯ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆ ಮಾಡುತ್ತೇವೆ. ಒಮ್ಮೆ 120 ಸೀಟು ಗೆಲ್ಲಿಸಿ ಅಧಿಕಾರ ಕೊಟ್ಟು ನೋಡಿ ಎಂದು ಮನವಿ ಮಾಡಿದರು.



ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 300ಕ್ಕೂ ಹೆಚ್ಚು ದೇವಸ್ಥಾನ ಜೀರ್ಣೋದ್ಧಾರ ಮಾಡಿದ್ದೇವೆ. 14 ವರ್ಷದಲ್ಲಿ ನಿಮ್ಮೆಲ್ಲರ ಸಹಕಾರದಿಂದ ಮಂತ್ರಿ ಕೂಡ ಆಗಿದ್ದು, ಯಾವುದೇ ಹಗರಣವಿಲ್ಲದೆ ಅಧಿಕಾರ ನಡೆಸಿದವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಾಗೂ ನಮ್ಮ ನಾಯಕರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ನಿರ್ದೇಶಕ ನೇಮಿರಾಜ್, ಇಂಜಿನಿಯರ್ ಜಯಕೀರ್ತಿ, ತಹಸೀಲ್ದಾರ್ ಮೋಹನ್, ಡಾ.ಹರೀಶ್, ಡಾ.ರಾಮು, ಡಾ.ಪೃಥ್ವಿ, ಗ್ರಾಪಂ ಅಧ್ಯಕ್ಷೆ ಜಯಮ್ಮ ನಾಗರಾಜಶೆಟ್ಟಿ, ಉಪಾಧ್ಯಕ್ಷೆ ಶಿಲ್ಪಶ್ರೀ, ಮುಖಂಡರಾದ ಎಂ.ಟಿ.ಕುಮಾರ್, ಅನಿಫ್ ಕುಮಾರ್, ಆರ್.ಸತೀಶ್, ಜಿ.ಸಿ.ರಾಮೇಗೌಡ, ಸಣ್ಣರಾಮೇಗೌಡ, ಚಿಕ್ಕಲಿಂಗೇಗೌಡ, ಜಿ.ಸಿ.ರಾಮೇಗೌಡ, ಸ್ವಾಮಯ್ಯ, ಅಮರ್‌ನಾಥ್, ನಂಜಣ್ಣ, ಕೃಷ್ಣೇಗೌಡ, ಲಿಂಗಪ್ಪ, ಲೋಕೇಗೌಡ, ನಟರಾಜು, ಜಿ.ಕೆ.ಜಗದೀಶ್, ಬಲರಾಂ, ಜಿ.ಕೆ.ಹರೀಶ್, ಯೋಗೇಂದ್ರ ಕುಮಾರ್, ಜೆ.ಸಿ.ದಿನೇಶ್, ವೆಂಕಟೇಶ್, ಹರೀಶ್, ಸಿದ್ದಪ್ಪ, ದಿನೇಶ್, ಜಿ.ಕೆ.ಮಹದೇವ ಇದ್ದರು.

> ನಾನಾಗಲಿ ಅಥವಾ ಶಾಸಕ ಸಾ.ರಾ. ಮಹೇಶ್ ಆಗಲಿ ಮುಖ್ಯಮಂತ್ರಿ ಅಥವಾ ಮಂತ್ರಿಯಾಗುವ ಆಸೆ ಹೊಂದಿಲ್ಲ. ರಾಜ್ಯದ ಜನರು ಭ್ರಷ್ಟಾಚಾರದ ಆಡಳಿತದಿಂದ ಬೇಸತ್ತಿದ್ದಾರೆ. ದಿನ ಬೆಳಾಗದರೇ ರಾಜ್ಯ ಸರ್ಕಾರದ ಹಗರಣಗಳ ಸರಮಾಲೆ ಬಿತ್ತರಗೊಳುತ್ತಿದೆ. ಶಿಕ್ಷಣ, ಆರೋಗ್ಯದ ಬಗ್ಗೆ ಸರ್ಕಾರಕ್ಕೆ ಯಾವುದೇ ಚಿಂತನೆ ಇಲ್ಲ. ಪ್ರಸ್ತುತ ಬಡವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗುತ್ತಿಲ್ಲ. 2023ಕ್ಕೆ ನಾವು ಅಧಿಕಾರಕ್ಕೆ ಬಂದರೆ ಎಲ್‌ಕೆಜಿಯಿಂದ ಪಿಯುಸಿವರೆಗೂ ಉಚಿತ ಶಿಕ್ಷಣ ನೀಡುತ್ತೇವೆ.
> – ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

ಪ್ರಧಾನಿ ಮೋದಿ ಮುಂದೆ ಜಿಟಿಡಿ ನಾಲ್ಕು ಬೇಡಿಕೆ



ಮೈಸೂರು, ಜೂ.20(ಎಸ್‌ಬಿಡಿ)– ಮೈಸೂರಿನ ಅಭಿವೃದ್ಧಿ ಸಂಬಂಧ ಕೆಲವು ಮಹತ್ವದ ಬೇಡಿಕೆಗಳನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿದ್ದಾರೆ. ಮಹಾರಾಜ ಕಾಲೇಜು ಮೈದಾನದ ಬಳಿ ಓವಲ್ ಗ್ರೌಂಡ್ ಹೆಲಿಪ್ಯಾಡ್‌ನಲ್ಲಿ ಬಂದಿಳಿದ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸುವ ಸಂದರ್ಭದಲ್ಲಿ ಜಿಟಿಡಿ ಅವರು ನಾಲ್ಕು ಪ್ರಮುಖ ಬೇಡಿಕೆಯುಳ್ಳ ಮನವಿ ಪತ್ರ ಸಲ್ಲಿಸಿದರು.

ಮಹತ್ವದ ಮನವಿ: ಬೆಂಗಳೂರು ನಂತರ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ಸಂಚಾರ ದಟ್ಟಣೆ ತಪ್ಪಿಸುವುದು ಹಾಗೂ ಭವಿಷ್ಯದ ದೃಷ್ಟಿಕೋನದಿಂದ ಮೆಟ್ರೋರೈಲು ಜಾಲ ರೂಪಿಸಬೇಕಿದೆ. ಬೆಂಗಳೂರಿನಲ್ಲಿ ಉಂಟಾಗುವ ಸಮಸ್ಯೆಗಳನ್ನು ಅವಲೋಕಿಸಿ ಭವಿಷ್ಯದ ಮೈಸೂರಿಗೆ ನಾಗರಿಕ ಹಾಗೂ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಲು ವಿಶೇಷ ನಿಧಿ ಮಂಜೂರು ಮಾಡಬೇಕು. ಕೇರಳ ಹಾಗೂ ತಮಿಳುನಾಡು ರಾಜ್ಯಗಳಿಗೆ ಮೈಸೂರು ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ರೈಲ್ವೆ ಕಾರಿಡಾರ್ ಅಭಿವೃದ್ಧಿಪಡಿಸಬೇಕು. ಇದರಿಂದ ಉಭಯ ರಾಜ್ಯಗಳಿಗೆ ದಕ್ಷಿಣ ಕರ್ನಾಟಕದಿಂದ ಸರಕು ಸರಬರಾಜು ಮಾಡಲು ಅನುಕೂಲವಾಗುತ್ತದೆ. ದೇಶದ ಆಹಾರ ಪೂರೈಕೆಯಲ್ಲಿ ಕರ್ನಾಟಕ ಮಹತ್ವದ ಪಾತ್ರ ವಹಿಸಿದ್ದು, ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳ ಪೂರ್ಣಗೊಳಿಸಲು ವಿಶೇಷ ಅನುದಾನ ನೀಡಬೇಕು ಎಂದು ಜಿಟಿಡಿ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಬೆಂಗಳೂರಿನ ಜನರು ಕೈ ಜೋಡಿಸಿದರೆ ಏನೂ ಬೇಕಾದರೂ ಮಾಡಬಹುದು

ಬೆಂಗಳೂರು: ಬೆಂಗಳೂರಿನ ಜನರು ಕೈ ಜೋಡಿಸಿದರೆ ಏನೂ ಬೇಕಾದ್ರೂ ಮಾಡಬಹುದು ಎಂದು ಪ್ರಧಾನಿ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ಬೆಂಗಳೂರಿನ ಕೊಮ್ಮಘಟ್ಟದಲ್ಲಿ ವಿವಿಧ ಯೋಜನೆಗಳ ಲೋಕಾರ್ಪಣೆ ಮತ್ತು ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ವಿಕಾಸಗೊಂಡರೆ ಇಡೀ ಭಾರತವೇ ವಿಕಾಸಗೊಂಡಂತೆ. ಕೊರೊನಾ ಸಮಯದಲ್ಲಿ ಬೆಂಗಳೂರಿನ ಕೈ ಜೋಡಿಸಿ ನಿಯಂತ್ರಣ ಮಾಡಿದ್ದರು. ಬೆಂಗಳೂರು ಶ್ರೇಷ್ಠ ಭಾರತದ ಪ್ರತೀಕ ಎಂದು ಪ್ರಧಾನಿ ನರೇಂದ್ರ ಮೋದಿ ಹೊಗಳಿದ್ದಾರೆ.

ಎರಡು ದಿನ ರಾಜ್ಯ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಸುಮಾರು 15 ನಿಮಿಷಗಳ ಕಾಲ ಮಾತನಾಡಿದರು. ಕನ್ನಡದಲ್ಲೇ ಮಾತು ಪ್ರಾರಂಭಿಸಿದ ಮೋದಿ, ಕನ್ನಡಿಗರಿಗೆ ಇದು ಮಹತ್ವದ ದಿನ. ಇಂದು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ನನಗಿದು ಬಹಳ ಸಂತೋಷವಾಗಿದೆ ಎಂದು ಹೇಳಿದರು.

ಟ್ರಾಫಿಕ್ ನಿಯಂತ್ರಣಕ್ಕೆ ಪಣ: ಬೆಂಗಳೂರಿನಲ್ಲಿ ಟ್ರಾಫಿಕ್ ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗಿದ್ದು, ಫ್ಲೈಓವರ್, ಮೆಟ್ರೋ ಅಂಡರ್ ಪಾಸ್ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಬೆಂಗಳೂರು ಅಭಿವೃದ್ಧಿ ಲಕ್ಷಾಂತರ ಜನರ ಕಸಾಗಿದ್ದು, ಇದರ ಶಕ್ತಿಯನ್ನು ಮತ್ತಷ್ಟು ವೃದ್ಧಿಸಲಾಗುತ್ತದೆ. ಡಬಲ್ ಇಂಜಿನ್ ಸರ್ಕಾರ ನುಡಿದಂತೆ ನಡೆಯುತ್ತಿದ್ದು ಬೆಂಗಳೂರು ಇನ್ನಷ್ಟು ಅಭಿವೃದ್ಧಿಯಾಗಲಿದೆ ಎಂದು ಭರವಸೆ ನೀಡಿದ್ದಾರೆ.

40 ವರ್ಷಗಳ ಯೋಜನೆಗೆ ಮುಕ್ತಿ: ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆಗಳಿಗೆ ಮುಕ್ತಿ ನೀಡುವ ಸಬ್‌ಅರ್ಬನ್ ರೈಲ್ವೆ ಯೋಜನೆ 40 ವರ್ಷಗಳಿಂದ ನೆನೆಗುದ್ದಿಗೆ ಬಿದ್ದಿತ್ತು. ಹಿಂದಿನ ಸರ್ಕಾರಗಳು ಕಡತವನ್ನು ಅಲ್ಲಿಂದಿಲ್ಲಿಗೆ ವರ್ಗಾಯಿಸುವುದರಲ್ಲೇ ಕಾಲ ಕಳೆಯುತ್ತಿದ್ದವು. ಇದೀಗ ಆ ಯೋಜನೆಗೆ ಮುಕ್ತಿಕೊಡಲಾಗುತ್ತಿದೆ. ಟ್ರಾಫಿಕ್ ಮುಕ್ತ ಮಾಡಲು ರೈಲ್ವೆ ಯೋಜನೆಗಳನ್ನು ಆಧುನೀಕರಣಗೊಳಿಸಲಾಗುತ್ತಿದೆ. ಯಶವಂತಪುರ ಕಟೋನ್ಮೆಂಟ್ ರೈಲ್ವೆ ನಿಲ್ದಾಣಗಳನ್ನು ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ದೇಶ ಸುರಕ್ಷಿತವಾಗಿದೆ, ನಾಗರಿಕರ ಸ್ನೇಹಿ ಯಾಗಿದೆ, ಸ್ವಚ್ಛವಾಗಿಯೂ ಇದೆ. ನಾನು ನನಗೆ ಕೊಟ್ಟ ಜವಾಬ್ದಾರಿ ನಿಭಾಯಿಸುತ್ತಿದ್ದೇನೆ. ಬೆಂಗಳೂರು ಅಭಿವೃದ್ಧಿಗಾಗಿಯೂ ನಿರಂತರವಾಗಿ ಶ್ರಮಿಸಿದ್ದೇನೆ.

ರಾಜ್ಯದಲ್ಲಿ 530 ಮಂದಿಗೆ ಪಾಸಿಟಿವ್



ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 530 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,61,361ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಯಾರೂ ಮೃತಪಟ್ಟಿಲ್ಲ. ಇದರೊಂದಿಗೆ ಸಾವಿನ ಸಂಖ್ಯೆ 40,071 ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಬೆಂಗಳೂರಿನಲ್ಲಿ ಇಂದು 494 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,96,536ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಕೊರೋನಾದಿಂದ ಯಾರು ಮೃತಪಟ್ಟಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ.

ರಾಜ್ಯದಲ್ಲಿ ಇಂದು 637 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,16,320ಕ್ಕೆ ಏರಿಕೆಯಾಗಿದೆ. ಇನ್ನು 5,928 ಸಕ್ರಿಯ ಪ್ರಕರಣಗಳಿವೆ.

ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು

ಸಂಖ್ಯೆ:ಎಂವೈಜೆಡ್/ಮೀ.ಮಾ/2022–23

ಬಹಿರಂಗ ಹರಾಜು–ಕಂ–ದರಪಟ್ಟಿ ಮಾರಾಟ ಪ್ರಕಟಣೆ

ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರಂಜಿಕೆರೆ, ತಿಪ್ಪಯ್ಯನಕೆರೆ ಮತ್ತು ಕೂರ್ಗಳ್ಳಿಯಲ್ಲಿರುವ ಕೆರೆಯಲ್ಲಿ ಪಕ್ಷಿಗಳಿಗೆ ದಿನನಿತ್ಯದ ಆಹಾರವಾಗಿ ಉಳಿದಿರುವ ಈ ಕೆಳಕಂಡ ಮೀನುಗಳನ್ನು ಷರತ್ತುಗಳಿಗೆ ಒಳಪಟ್ಟು ಹರಾಜು–ಕಂ–ದರಪಟ್ಟಿಯ ಮೂಲಕ ವಿಲೇವಾರಿ ಮಾಡಲಾಗುವುದು. ಟೆಂಡರ್‌ನಲ್ಲಿ ಭಾಗವಹಿಸುವ ಆಸಕ್ತರು ದಿ:20.6.2022 ರಿಂದ 25.06.2022 ರ ಅಪರಾಹ್ನ 4.00 ಘಂಟೆ ಒಳಗಾಗಿ ಕಚೇರಿಯಿಂದ ಟೆಂಡರ್ ಫಾರಂ ಪಡೆಯತಕ್ಕದ್ದು, ದಿ: 29.06.2022ರಂದು ಬೆಳಿಗ್ಗೆ 11:00 ಗಂಟೆಯೊಳಗೆ ತಮ್ಮ ದರಗಳನ್ನು ಟೆಂಡರ್ ಫಾರಂನಲ್ಲಿ ಬರೆದು ಭದ್ರತಾ ಠೇವಣಿ ರೂ.50,000.00ಗಳ ಡಿ.ಡಿಯೊಂದಿಗೆ ಮೊಹರ್ ಮಾಡಿದ ಲಕೋಟೆಯನ್ನು ಕಾರ್ಯನಿರ್ವಾಹಕ ನಿರ್ದೇಶಕರವರ ಕಛೇರಿಯಲ್ಲಿಟ್ಟಿರುವ ಪೆಟ್ಟಿಗೆಯೊಳಗೆ ಹಾಕತಕ್ಕದ್ದು, ಹೆಚ್ಚಿನ ವಿವರ ಹಾಗೂ ಷರತ್ತುಗಳುಳ್ಳ ಹರಾಜು–ಕಂ–ದರಪಟ್ಟಿ ಪ್ರಕಟಣೆಯನ್ನು ಕಛೇರಿಯಿಂದ ಪಡೆಯಬಹುದು.

ಕ್ರ.ಸಂ.	ವಿವರ
1	1½ ಕೆ.ಜಿಗಿಂತ ಹೆಚ್ಚು ತೂಕವುಳ್ಳ ಕಾಟ್ಲ, ರೋಹು, ಗ್ರಾಸ್‌ಕ್ರಾಪ್ ಮತ್ತು ಕಾಮನ್‌ಕಾರ್ಪ್ ಮೀನುಗಳು
2	100 ಗ್ರಾಂಗಳಿಗಿಂತ ಹೆಚು ತೂಕವುಳ್ಳ ಜಿಲೇಬಿ ಮೀನುಗಳು

ದಿನಾಂಕ: 18.6.2022 ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು

DIPR/DDMYS/MCA/131/2022-23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,

ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ ಸರಸ್ವತಿಪುರಂ, ಮೈಸೂರು–570009 ದೂರವಾಣಿ : 0821– 2411463 ಇ–ಮೇಲ್: kwbmysjnee@gmail.com

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಈ ಕಛೇರಿಯಿಂದ ಮಂಡಳಿಯ ಜೆಎನ್–ನರ್ಮ್ ವಿಭಾಗ, ಉಪ–ವಿಭಾಗಗಳ ಮತ್ತು ಮುಖ್ಯ ಅಭಿಯಂತರ (ಮೈಸೂರು ವಲಯ) ಕಛೇರಿಗಳಿಗೆ ಆಗತ್ಯಗನುಗುಣವಾಗಿ ಅವಶ್ಯವಿರುವ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಟೆಂಡರ್‌ನ್ನು ಇ–ಟೆಂಡರ್ ರಲ್ಲಿ ಕರೆಯಲಾಗಿದ್ದು, ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– (ವಿ.ಎಲ್.ಚಂದ್ರಪ್ಪ), ಕಾರ್ಯಪಾಲಕ ಅಭಿಯಂತರು ಕನನೀಸ ಮತ್ತು ಒಚ ಮಂಡಳಿ ನಗರ ವಿಭಾಗ (ಜೆ.ಎನ್.ನರ್ಮ್), ಮೈಸೂರು